ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 19 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 272 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೇಂದ್ರದ ಅಂಗಳಕ್ಕೆ ಪರಿಶಿಷ್ಟರ ಒಳ ಮೀಸಲಾತಿ

ರಾಜ್ಯ ಸಚಿವ ಸಂಪುಟ ನಿರ್ಧಾರ

ಬೆಂಗಳೂರು, ಜ.18(ಕೆಎಂಶಿ)– ಪರಿಶಿಷ್ಟರಿಗೆ ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಸಂವಿಧಾನಕ್ಕೆ ಅಗತ್ಯ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಹಾಗೂ ಸಂಸತ್ತಿಗೆ ಶಿಫಾರಸ್ಸು ಮಾಡುವ ಮಹತ್ವದ ತೀರ್ಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆ ಕೈಗೊಂಡಿದೆ.

ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಸಂವಿಧಾನ ಅನುಚ್ಛೇದ 15 ಮತ್ತು 16ರಂತೆ ಮೀಸಲಾತಿ ಮತ್ತು ಇತರ ಸೌಲಭ್ಯಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವಂತೆ ಇಂದಿಲ್ಲಿ ಸೇರಿದ್ದ ರಾಜ್ಯ ಸಂಪುಟ ತೀರ್ಮಾನಿಸಿದೆ.

ಜನಸಂಖ್ಯೆ ಆಧಾರದ ಮೇಲೆ ವರ್ಗೀಕರಣ ಸೂಕ್ತವೆಂದು ಭಾವಿಸಿರುವ ಸಂಪುಟ, ಭಾರತ ಸಂವಿಧಾನದ ಅನುಚ್ಛೇದ 341ಕ್ಕೆ ಹೊಸದಾಗಿ ಉಪ ನಿಯಮ (3)ನ್ನು ಸೇರ್ಪಡೆ ಮಾಡುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಲು ಸಭೆ ತೀರ್ಮಾನಿಸಿತು.

ಆ ನಂತರ ಜನಸಂಖ್ಯೆ ಆಧಾರದ ಮೇಲೆ ಪರಿಶಿಷ್ಟ ಸಮುದಾಯದವರಿಗೆ ಒಳ ಮೀಸಲಾತಿ ವರ್ಗೀಕರಣ ಮಾಡಲು ಅವಕಾಶ ದೊರೆಯಲಿದೆ ಎಂದು ನಿರ್ಣಯಿಸಿದೆ. ಕರ್ನಾಟಕ ಸರ್ಕಾರ ತೆಗೆದುಕೊಂಡಿರುವ ಈ ತೀರ್ಮಾನದಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಬೊಕ್ಕಸದ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ ಅಲ್ಲದೆ ವಿವಿಧ ಇಲಾಖೆಗಳೊಂದಿಗೂ ಸಮಾಲೋಚನೆ ಮಾಡುವ ಅಗತ್ಯವಿಲ್ಲ. ಈ ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಕರ್ನಾಟಕ ಸರ್ಕಾರ ನಿಯಮಗಳು 1977ರ, ಶೆಡ್ಯೂಲ್‌ನ ಅಂಶ 28ರನ್ವಯ ಕೆಲವು ಪ್ರಸ್ತಾವನೆಗಳಿಗೆ ಸಂಪುಟ ಅನುಮೋದನೆ ನೀಡಿದೆ. ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿಗಳ ಉಪ ಪಂಗಡಗಳನ್ನು ನಾಲ್ಕು ಗುಂಪುಗಳಾಗಿ ಅವುಗಳ ಜನಸಂಖ್ಯಾ ಆಧಾರದ ಮೇಲೆ ಹಾಗೂ ಅವುಗಳ ಮೀಸಲಾತಿ ಪ್ರಮಾಣದೊಂದಿಗೆ ಉಪ ವರ್ಗೀಕರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ರಾಜ್ಯ ಸಂಪುಟ ನಿರ್ಣಯ ಕೈಗೊಂಡಿದೆ. ಕರ್ನಾಟಕದಲ್ಲಿನ ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ಬೋವಿ, ಬಂಜಾರ, ಕೊರಚ, ಕೊರಮ ಜಾತಿಗಳನ್ನು ಕೈಬಿಡುವ ಪ್ರಸ್ತಾವನೆ ಇಲ್ಲ ಎಂದು ಶಿಫಾರಸ್ಸಿನಲ್ಲಿ ಸ್ಪಷ್ಟಪಡಿಸಲಾಗಿದೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳ ಪರಿಸ್ಥಿತಿಯನ್ನು ಅವಲೋಕಿಸಲು ನ್ಯಾ. ಎ.ಜೆ.ಸದಾಶಿವ ಆಯೋಗವನ್ನು ರಚಿಸಲಾಗಿತ್ತು ಅದರಂತೆ ಆಯೋಗವು ಪರಿಶಿಷ್ಟರ ಸ್ಥಿತಿಗತಿಗಳ ಬಗ್ಗೆ ಅವಲೋಕಿಸಿದ್ದು, ಸಚಿವ ಸಂಪುಟ ಉಪಸಮಿತಿಯ ಶಿಫಾರಸುಗಳನ್ನು ಸಂಪುಟ ಸಭೆ ಅಂಗೀಕರಿಸಿ, ಕೇಂದ್ರಕ್ಕೆ ಶಿಫಾರಸು ಮಾಡಿದೆ.


ನ್ಯಾ. ಸದಾಶಿವ ಆಯೋಗದ ವರದಿಯನ್ನು ಮುಕ್ತಾಯಗೊಳಿಸುತ್ತಿರುವುದಾಗಿ ಹಿಂದಿನ ಸರ್ಕಾರದ ಸಂಪುಟ ಸಭೆ ನಿರ್ಧಾರ ಕೈಗೊಂಡಿತ್ತು. ಎ.ಜೆ.ಸದಾಶಿವ ಆಯೋಗ ನೀಡಿರುವ ವರದಿಯನ್ನು ಸುದೀರ್ಘವಾಗಿ ಪರಿಶೀಲಿಸಿ ಸಂಪುಟದಲ್ಲಿ ಚರ್ಚಿಸಿ, ಪರಿಶಿಷ್ಟ ಸಮುದಾಯಕ್ಕೆ ಸೇರಿದ ಉಪಪಂಗಡಗಳಿಗೆ ನ್ಯಾಯ ದೊರಕಿಸುವ ಹೊಣೆಗಾರಿಕೆಯನ್ನು ಕೇಂದ್ರದ ಹೆಗಲಿಗೆ ಹಾಕಿದೆ. ಲೋಕಸಭಾ ಚುನಾವಣಾ ಹೊಸ್ತಿಲಲ್ಲಿ ಒಳ ಮೀಸಲಾತಿ ವರ್ಗೀಕರಣವನ್ನು ರಾಜಕೀಯವಾಗಿ ಬಳಸಿಕೊಳ್ಳಲು ಹೊರಟಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪರಿಶಿಷ್ಟರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವ ಮತ್ತು ಅವರಿಗೆ ದಕ್ಕಬೇಕಾದ ಹಕ್ಕನ್ನು ಒದಗಿಸಿ ಎಂದು ಕೇಂದ್ರದ ಜವಾಬ್ದಾರಿಗೆ ಬಿಟ್ಟಿದೆ. ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 101 ಜಾತಿಗಳಿದ್ದು, ಕಳೆದ ಜನಗಣತಿಯಂತೆ 1.05 ಕೋಟಿ ಜನಸಂಖ್ಯೆ ಇರುತ್ತದೆ. ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ 17.15ರಷ್ಟು ಈ ಸಮುದಾಯವಿದ್ದು ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಕಲ್ಪಿಸಲು ಸಂವಿಧಾನ ತಿದ್ದುಪಡಿ ಮಾಡುವಂತೆ ಸಂಸತ್ತಿಗೆ ಶಿಫಾರಸ್ಸು ಮಾಡಲು ಸಂಪುಟ ಸಭೆ ತೀರ್ಮಾನಿಸಿದೆ.



ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆ

ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ: ಸರ್ಕಾರ ಘೋಷಣೆ

ಬೆಂಗಳೂರು, ಜ.18–ಸಾಮಾಜಿಕ ನ್ಯಾಯದ ಮೊದಲ ಹರಿಕಾರ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ತೀರ್ಮಾನಿಸಿದೆ.



ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಮುಖ್ಯಮಂತ್ರಿಗಳು ನಮ್ಮ ಸರ್ಕಾರದ ಈ ತೀರ್ಮಾನ ಮುಖ್ಯಮಂತ್ರಿಯಾದ ನನಗೆ ಅತೀವ ಹೆಮ್ಮೆ ಮತ್ತು ತೃಪ್ತಿಯನ್ನು ಉಂಟು ಮಾಡಿದೆ. ಇದು ಕೇವಲ ಘೋಷಣೆ ಅಲ್ಲ, ಬಸವ ತತ್ವದ ಮೇಲಿರುವ ನಮ್ಮ ●9ನೇ ಪುಟಕ್ಕೆ

ಇಂದು ಪ್ರಧಾನಿ ನರೇಂದ್ರ ಮೋದಿ ಬೆಂಗಳೂರಿಗೆ

ದೇವನಹಳ್ಳಿಯಲ್ಲಿ ಬೋಯಿಂಗ್ ಇಂಜಿನಿಯರಿಂಗ್ ತಂತ್ರಜ್ಞಾನ ಕೇಂದ್ರ ಉದ್ಘಾಟನೆ


ಬೆಂಗಳೂರು: ಪ್ರಧಾನ ಮಂತ್ರಿ ಮೋದಿಯವರು ನಾಳೆ (ಜ.19) ಬೆಂಗಳೂರು ಹೊರವಲಯದ ದೇವನಹಳ್ಳಿಗೆ ಭೇಟಿ ನೀಡುತ್ತಿದ್ದು, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ದೇವನಹಳ್ಳಿಯ ಏರೋಸ್ಪೇಸ್ ಪಾರ್ಕ್‌ನಲ್ಲಿ ಹೊಸ ಅತ್ಯಾಧುನಿಕ ಬೋಯಿಂಗ್ ಇಂಡಿಯಾ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕೇಂದ್ರ (BIETC) ಕ್ಯಾಂಪಸ್ ಅನ್ನು ಉದ್ಘಾಟಿಸಲಿದ್ದಾರೆ. ಪ್ರಧಾನಿ ಮೋದಿ ಅವರು ನಾಳೆ ಮಧ್ಯಾಹ್ನ 2.10ಕ್ಕೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ●9ನೇ ಪುಟಕ್ಕೆ



ಉಚಿತ ವಿದ್ಯುತ್: ಶೇ.10ರಷ್ಟು ಬದಲು 10 ಯೂನಿಟ್ ಹೆಚ್ಚುವರಿ ನೀಡಲು ಸಂಪುಟ ತೀರ್ಮಾನ

48 ಯೂನಿಟ್ ಒಳಗೆ ಬಳಸುವವರಿಗೆ ಮಾತ್ರ ಅನ್ವಯ

ಬೆಂಗಳೂರು: ಉಚಿತ ವಿದ್ಯುತ್ ಯೋಜನೆ ಗೃಹ ಜ್ಯೋತಿ ನಿಯಮದಲ್ಲಿ ರಾಜ್ಯ ಸರ್ಕಾರ ಮಹತ್ವದ ಬದಲಾವಣೆ ಮಾಡಿದ್ದು, ವಾರ್ಷಿಕ ಸರಾಸರಿ ಬಳಕೆಯ ಮೇಲೆ ಹೆಚ್ಚುವರಿ ಶೇ.10ರಷ್ಟು ಉಚಿತ ವಿದ್ಯುತ್ ನೀಡುವ ಮಾನದಂಡವನ್ನು 10 ಯೂನಿಟ್‌ಗೆ ಬದಲಾಯಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.



ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ●9ನೇ ಪುಟಕ್ಕೆ

ಫೆ.12ರಿಂದ ವಿಧಾನಮಂಡಲ ಅಧಿವೇಶನ; ಫೆ.16ಕ್ಕೆ ರಾಜ್ಯ ಬಜೆಟ್

ಬೆಂಗಳೂರು, ಜ.18– ಫೆಬ್ರವರಿ 12ರಿಂದ ಫೆಬ್ರವರಿ 23ರವರೆಗೆ ರಾಜ್ಯ ವಿಧಾನಮಂಡಲ ಅಧಿವೇಶನ ನಡೆಸಲು ಗುರುವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಇಂದು ವಿಧಾನ ಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಫೆ12 ರಿಂದ 23ರವರೆಗೆ ಅಧಿವೇಶನ ನಡೆಸಲು ಮತ್ತು ಫೆ.16ರಂದು ರಾಜ್ಯ ಬಜೆಟ್ ಮಂಡಿಸಲು ನಿರ್ಧರಿಸಲಾಗಿದೆ. ವಿಧಾನ ಮಂಡಲ ಅಧಿವೇಶನದ ಮೊದಲ ದಿನ ಅಂದರೆ ಫೆ.12 ರಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಜಂಟಿ ಸದನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಲೋಕಸಭೆ ಚುನಾವಣೆಗೆ ಮಾರ್ಚ್‌ನಿಂದಲೇ ನೀತಿ ಸಂಹಿತೆ ಜಾರಿಯಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆಬ್ರವರಿಯಲ್ಲೇ ಬಜೆಟ್ ಮಂಡಿಸಲು ತೀರ್ಮಾನಿಸಿದ್ದಾರೆ.

ಜ.22ರಂದು ಕೇಂದ್ರ ಸರ್ಕಾರಿ ಕಚೇರಿಗಳಿಗೆ ಅರ್ಧ ದಿನ ರಜೆ ಘೋಷಣೆ

ಪುಟ–9

ಮೈಸೂರು ಮಿತ್ರ

ಶುಕ್ರವಾರ 19 ಜನವರಿ 2024

ಮೈಸೂರಲ್ಲಿ ಲಾರಿ ಮಾಲೀಕರು, ಚಾಲಕರ ಮುಷ್ಕರ ಆರಂಭ

ಹಾಲು, ಔಷಧ ಸರಬರಾಜು ವಾಹನಗಳು ಎಂದಿನಂತೆ ಕಾರ್ಯನಿರ್ವಹಣೆ, ಖಾಸಗಿ ಬಸ್ ಮಾಲೀಕರು, ಚಾಲಕರಿಂದ ಮುಷ್ಕರಕ್ಕೆ ಬೆಂಬಲ

ಮೈಸೂರು, ಜ.18(ಆರ್‌ಕೆ)–ರಸ್ತೆ ಅಪಘಾತಗಳಾದಾಗ ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಚಾಲಕರಿಗೆ 10 ವರ್ಷ ಕಠಿಣ ಶಿಕ್ಷೆ ಹಾಗೂ 10 ಲಕ್ಷ ರೂ. ದಂಡ ವಿಧಿಸುವ ಕಾಯ್ದೆ ಖಂಡಿಸಿ ಲಾರಿ ಮಾಲೀಕರು ಮತ್ತು ಚಾಲಕರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ.

ಕಳೆದ ಮಧ್ಯ ರಾತ್ರಿಯಿಂದ ಮೈಸೂರು ನಗರ ಮತ್ತು ಜಿಲ್ಲಾದ್ಯಂತ ಲಾರಿ ಮುಷ್ಕರ ಆರಂಭವಾಗಿರುವುದರಿಂದ ಹಣ್ಣು ತರಕಾರಿ, ದಿನಸಿ, ಎಣ್ಣೆ ಕಾಳು, ಕಟ್ಟಡ ನಿರ್ಮಾಣ ಸಾಮಗ್ರಿಗಳು ಆಹಾರ ಪದಾರ್ಥ ಸೇರಿದಂತೆ ಇನ್ನಿತರ ಸಲಕರಣೆಗಳ ಕೊರತೆ ಎದುರಾಗುವ ಸಾಧ್ಯತೆ ಇದೆ. ಕೇಂದ್ರ ಸರ್ಕಾರ ಜಾರಿಗೆ ತರಲುದ್ದೇಶಿಸಿರುವ ನೂತನ ಕಾಯ್ದೆ ವಿರೋಧಿಸಿ ರಾಜ್ಯಾದ್ಯಂತ ಲಾರಿ ಮಾಲೀಕರು ಮತ್ತು ಚಾಲಕರು ನಡೆಸುತ್ತಿರುವ ಮುಷ್ಕರದಲ್ಲಿ ಬೃಹತ್, ಮಧ್ಯಮ ಸರಕು ಸಾಗಣೆ ವಾಹನಗಳು, ಚಾಲಕರು ಭಾಗಿಯಾಗಿ ಬೆಂಬಲ ಸೂಚಿಸಿದ್ದಾರೆ.

ಹಾಲು, ಔಷಧ ಸಾಗಣೆ ವಾಹನಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿದ್ದು, ಅಗತ್ಯ ವಸ್ತುಗಳಾದ ಪಡಿತರ, ಸೀಮೆಎಣ್ಣೆ, ಪೆಟ್ರೋಲ್, ಡೀಸೆಲ್ ಸೇರಿದಂತೆ ಇತರ ಎಲ್ಲಾ ಗೂಡ್ಸ್ ವಾಹನಗಳು ಕಾರ್ಯ ಸ್ಥಗಿತಗೊಂಡಿರುವುದರಿಂದ ಮುಷ್ಕರದ ಪರಿಣಾಮ ನಿಧಾನಗತಿಯಲ್ಲಿ ನಾಳೆ (ಜ.19) ಯಿಂದ ತಟ್ಟಲಿದೆ. ಮೈಸೂರಿನ ನಂಜನಗೂಡು ರಸ್ತೆಯ ಬಂಡೀಪಾಳ್ಯ ಎಪಿಎಂಸಿ ಮಾರುಕಟ್ಟೆ, ಲಾರಿ ಟರ್ಮಿನಲ್ ಸಯ್ಯಾಜಿರಾವ್ ರಸ್ತೆಯ ಹಳೇ ಆರ್‌ಎಂಸಿ ಬಳಿ ಲಾರಿಗಳನ್ನು ನಿಲ್ಲಿಸಿ ಮಾಲೀಕರು ಹಾಗೂ ಚಾಲಕರು ಪ್ರತಿಭಟನೆ ನಡೆಸಿ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಶಿಕ್ಷೆ ಮತ್ತು ದಂಡದ ಪ್ರಮಾಣದ ನೂತನ ಕಾಯ್ದೆ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಮೈಸೂರು ಜಿಲ್ಲಾ ಲಾರಿ ಮಾಲಿಕರು ಮತ್ತು ಚಾಲಕರ ಒಕ್ಕೂಟದ ಅಧ್ಯಕ್ಷ ಬಿ.ಕೋದಂಡರಾಮು, ಉಪಾಧ್ಯಕ್ಷ ಅಬ್ದುಲ್ ಖಾದರ್ ಶಾಹಿದ್ ಸೇರಿದಂತೆ ಪದಾಧಿಕಾರಿಗಳು ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ಪಾಲ್ಗೊಂಡಿದ್ದು, ಈ ವಿನೂತನ ಕಾಯ್ದೆಯಿಂದ ಲಾರಿ ಸೇರಿದಂತೆ ಎಲ್ಲಾ ಬಗ್ಗೆಯ ಸರಕು ಸಾಗಣೆ ವಾಹನಗಳ ಚಾಲಕರ ಜೀವನವೇ ನಾಶವಾಗುವ ಅಪಾಯವಿದೆ ಎಂದ ಅವರು, ಈ ವಿಷಯದಲ್ಲಿ ಸರ್ಕಾರ ಅಗತ್ಯ ಕ್ರಮವಹಿಸಬೇಕು, ತಪ್ಪಿದ್ದಲ್ಲಿ ಮುಷ್ಕರ ಮುಂದುವರೆಯಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಲಾರಿ ಮಾಲಿಕರು ಮತ್ತು ಚಾಲಕರ ಒಕ್ಕೂಟದ ಪದಾಧಿಕಾರಿಗಳು ಕೋರಿಕೊಂಡ ಹಿನ್ನಲೆಯಲ್ಲಿ ಬುಧವಾರ ಒಂದು ದಿನ ಬಸ್‌ಗಳನ್ನು ಸ್ಥಗಿತಗೊಳಿಸಿದ್ದೆವು. ಇಂದಿನಿಂದ ಓಡಿಸುತ್ತೇವೆ ಎಂದ ಮೈಸೂರು ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ, ಶಿವಲಿಂಗೇಗೌಡ ತಿಳಿಸಿದ್ದಾರೆ. ಆದರೆ ನೂತನ ಕಾಯ್ದೆ ವಿರೋಧಿಸಿ ನಡೆಯುತ್ತಿರುವ ಮುಷ್ಕರಕ್ಕೆ ನಮ್ಮ ಬೆಂಬಲವಿದೆ. ಲಾರಿ ಮಾಲೀಕರು ಮತ್ತು ಚಾಲಕರ ಹೋರಾಟದೊಂದಿಗೆ ನಾವಿದ್ದೇವೆ ಎಂದರು.

ಒಂದು ವೇಳೆ ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್, ಪಡಿತರ ಸೇರಿದಂತೆ ಇನ್ನಿತರ ಅತ್ಯಗತ್ಯ ವಸ್ತುಗಳ ಸಾಗಣೆ ವಾಹನಗಳು ಕಾರ್ಯನಿರ್ವಹಿಸದೆ ಮುಷ್ಕರದಲ್ಲಿ ಪಾಲ್ಗೊಂಡರೆ ಜನಸಾಮಾನ್ಯರಿಗೆ ತೀವ್ರ ತೊಂದರೆಯಾಗುವ ಸಾಧ್ಯತೆ ಇದೆ. ಮುಷ್ಕರದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಮೈಸೂರು ನಗರ ಮತ್ತು ಜಿಲ್ಲಾದ್ಯಂತ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.



ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಹಳೇ ಆರ್‌ಎಂಸಿ ಬಳಿ ಲಾರಿ ನಿಲ್ಲಿಸಿ ಗುರುವಾರ ಚಾಲಕರು ಪ್ರತಿಭಟನೆ ನಡೆಸಿದರು.

ಜ.22, ಬ್ರಾಹ್ಮಣ ಸಂಘದಿಂದ ಶ್ರೀರಾಮ ತಾರಕ ಹೋಮ



ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಡಿ.ಟಿ.ಪ್ರಕಾಶ್ ಮಾತನಾಡಿದರು. ಚಿತ್ರದಲ್ಲಿ ಹರೀಶ್, ಬಾಲಕೃಷ್ಣ, ವಿನೋದ್ ಬಾಬು ಮತ್ತಿತರರನ್ನು ಕಾಣಬಹುದು.

ಮೈಸೂರು,ಜ.18(ಜಿಎ)–ಅಯೋಧ್ಯೆಯಲ್ಲಿ ನಡೆಯುತ್ತಿರುವ ಶ್ರೀರಾಮ ಪ್ರತಿಷ್ಠಾಪನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲೆಂದು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಜ.22ರಂದು ಶ್ರೀರಾಮ ತಾರಕ ಹೋಮ, ಶ್ರೀರಾಮ ಜಪ ಹಾಗೂ ಶ್ರೀರಾಮ ಭಜನೆ ಕಾರ್ಯಕ್ರಮಗಳನ್ನು ಸಿಎಫ್‌ಟಿಆರ್‌ಐ ಪಕ್ಕದ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಡಿ.ಟಿ.ಪ್ರಕಾಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದಕ್ಕೂ ಮೊದಲು ಜ.21ರಂದು ನಗರದಲ್ಲಿ ಅವಧೂತ ದತ್ತ ಪೀಠದ ವತಿಯಿಂದ ಶ್ರೀರಾಮ ದೇವರ ಅದ್ಧೂರಿ ರಥೋತ್ಸವ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 9 ಗಂಟೆಗೆ ಈ ಮೆರವಣಿಗೆ ಕೆಸರೆಯ ಶನೇಶ್ವರ ದೇವಸ್ಥಾನದ ಮಹಾದ್ವಾರದಿಂದ ಹೊರಟು, ಫೌಂಟನ್ ವೃತ್ತ, ಅಶೋಕ ರಸ್ತೆ, ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ, ನೀಲಗಿರಿ ರಸ್ತೆ, ಬಸವೇಶ್ವರ ರಸ್ತೆ ಮಾರ್ಗವಾಗಿ ಊಟಿ ರಸ್ತೆಯಲ್ಲಿನ ಗಣಪತಿ ಸಚ್ಚಿದಾನಂದ ಆಶ್ರಮ ತಲುಪಲಿದೆ ಎಂದು ಮಾಹಿತಿ ನೀಡಿದರು. ಜ.22ರಂದು ಬೆಳಗ್ಗೆ 9ಕ್ಕೆ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ರಾಮೋತ್ಸವ ಜರುಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹರೀಶ್, ಬಾಲಕೃಷ್ಣ, ವಿನೋದ್ ಬಾಬು, ಜ್ಯೋತಿ ಇದ್ದರು.

ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯಿಂದ ಮನೆಮನೆಗೂ ಮಂತ್ರಾಕ್ಷತೆ ವಿತರಣೆ



ಮೈಸೂರು,ಜ.18–ಕೋಟ್ಯಂತರ ಹಿಂದೂಗಳ ರಾಮಮಂದಿರ ನಿರ್ಮಾಣದ ಕನಸು ಜ.22ಕ್ಕೆ ನನಸಾಗಲಿದೆ ಈ ದಿನ ಮಂದಿರದ ಭವ್ಯ ಉದ್ಘಾಟನೆ ಹಾಗೂ ಬಾಲ ರಾಮನ (ರಾಮಲಲ್ಲಾ) ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯಿಂದ ಕೃಷ್ಣಮೂರ್ತಿಪುರಂನಲ್ಲಿ ಮಂತ್ರಾಕ್ಷತೆ ಹಾಗೂ ಆಮಂತ್ರಣ ಪತ್ರಿಕೆ ಮತ್ತು ರಾಮನ ಭಾವಚಿತ್ರ ಮನೆ ಮನೆಗೆ ತಲುಪಿಸುವ ಮೂಲಕ ಸಂಭ್ರಮಿಸಿದರು.

ಬಳಿಕ ಮಾತನಾಡಿದ ಹಿರಿಯ ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ, ಇಡೀ ಜಗತ್ತು ಕಾತರದಿಂದ ಕಾಯುತ್ತಿರುವ ಈ ಐತಿಹಾಸಿಕ ಕಾರ್ಯಕ್ರಮವು ಕೇವಲ ಹಿಂದೂಗಳ ಮಾತ್ರವಲ್ಲ. ಇಡೀ ಭಾರತ ದೇಶದ ಹೆಮ್ಮೆ ನೂರಾರು ವರ್ಷಗಳ ಸಾಧುಸಂತರ ತಪಸ್ಸಿನ ಫಲ. ಆಧುನಿಕ ಯುಗದ ಆಕರ್ಷಣೆಗೆ ಒಳಗಾಗಿ ಸಂಸ್ಕಾರಹೀನರಾಗುತ್ತಿರುವ ಯುವಕರಿಗೆ ಮರ್ಯಾದಾ ಪುರುಷ ರಾಮನ ಜೀವನವೇ ಸ್ಫೂರ್ತಿ, ಯುವಕರು ಆಧ್ಯಾತ್ಮದ ಆಸರೆ, ಸತತ ಪರಿಶ್ರಮದ ತಳಹದಿಯ ಮೇಲೆ ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು. ಇದರಿಂದ ಸದೃಢ ಸಮಾಜದ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್ ಮಾತನಾಡಿದರು.

ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಹಾಲಿ ನಿರ್ದೇಶಕರಾದ ಎಂ.ಆರ್.ಬಾಲಕೃಷ್ಣ, ಕೆ.ಎನ್.ಅರುಣ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ವಿ.ಎನ್.ಕೃಷ್ಣ, ಪೇಪರ್ ಮುರಳಿ, ಮಹೇಶ್‌ಕುಮಾರ್, ಪಾಲಿಕೆ ಮಾಜಿ ಸದಸ್ಯರಾದ ಯಮುನಾ, ಪುಟ್ಟಸ್ವಾಮಿ, ಜಗದೀಶ್, ಸುಚೇಂದ್ರ, ರಂಗನಾಥ್, ಜಯಸಿಂಹ, ವಿಜಯ್‌ಕುಮಾರ್, ಚಕ್ರಪಾಣಿ, ವಾಸುದೇವಮೂರ್ತಿ, ಅಪೂರ್ವ ಸುರೇಶ್, ಬೈರತಿ ಲಿಂಗರಾಜು, ರಾಜೇಶ್, ರಾಕೇಶ್, ನಾಗಭೂಷಣ್, ನಾಗಶ್ರೀ ಸುಚಿಂದ್ರ ಇತರರು ಹಾಜರಿದ್ದರು.

ಇಂದು ನವ ಕರ್ನಾಟಕ ಪುಸ್ತಕ ಪ್ರದರ್ಶನ, 4 ಪುಸ್ತಕಗಳ ಬಿಡುಗಡೆ

ಮೈಸೂರು, ಜ. 18–ನವಕರ್ನಾಟಕ ಪ್ರಕಾಶನವು ಪುಸ್ತಕ ಪ್ರದರ್ಶನದ ಉದ್ಘಾಟನೆ ಹಾಗೂ ನಾಲ್ಕು ಕೃತಿಗಳ ಬಿಡುಗಡೆ ಕಾರ್ಯಕ್ರಮವನ್ನು ಜನವರಿ 19ರಂದು ಸಂಜೆ 5 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಎಂಜಿನಿಯರುಗಳ ಸಂಸ್ಥೆಯ (ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್) ಸಭಾಂಗಣದಲ್ಲಿ ಏರ್ಪಡಿಸಿದೆ.

ಕಾರ್ಯಕ್ರಮವನ್ನು ಹಿರಿಯ ಲೇಖಕ ಡಾ.ಸಿ.ನಾಗಣ್ಣ ಉದ್ಘಾಟಿಸಿ, ಕೃತಿಗಳನ್ನು ಬಿಡುಗಡೆಗೊಳಿಸುವರು. ಬಿಡುಗಡೆಯಾಗುವ ಡಾ.ರಹಮತ್ ತರೀಕೆರೆ ಅವರ 'ಜೆರುಸಲೇಂ' ಹಾಗೂ ಗಾಯತ್ರಿ ಮೂರ್ತಿ ಅವರ 'ಅಂಜದಿರು ಮನವೆ' ಕೃತಿಗಳನ್ನು ಪತ್ರಕರ್ತ, ಲೇಖಕ ಗಣೇಶ ಅಮೀನಗಡ ಪರಿಚಯಿಸುವರು. ಎಚ್.ಎನ್.ಗೀತಾ ಸಂಪಾದಿಸಿರುವ 'ದಾರಿದೀಪಗಳು' ಹಾಗೂ 'ಹಾದಿಯ ಹಣತೆಗಳು' ಕೃತಿಗಳನ್ನು ಕವಯಿತ್ರಿ, ಎಸ್.ಡಿ.ಎಂ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ವಿನೋದಾ ಪರಿಚಯಿಸುವರು. ಜ.28ರವರೆಗೆ ನಡೆಯಲಿರುವ ಪುಸ್ತಕ ಪ್ರದರ್ಶನದಲ್ಲಿ ಶೈಕ್ಷಣಿಕ ಪುಸ್ತಕಗಳು, ಜನಪ್ರಿಯ ವಿಜ್ಞಾನ, ಯೋಗ, ಆರೋಗ್ಯ, ಜೀವನ ಚರಿತ್ರೆ ವಿಚಾರ ಸಾಹಿತ್ಯ, ಜ್ಞಾನಕೋಶಗಳು, ನಿಘಂಟುಗಳು, ಪರಾಮರ್ಶನ ಗ್ರಂಥಗಳು, ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳು ಹಾಗೂ ವಿಶೇಷವಾಗಿ ಮಕ್ಕಳಿಗೆಂದೇ ಸಾವಿರಾರು ಆಕರ್ಷಕ ವರ್ಣರಂಜಿತ ಪುಸ್ತಕಗಳು ಲಭ್ಯ ಇರುತ್ತವೆ. ಪುಸ್ತಕಗಳ ಮೇಲೆ ಶೇ.15ರಿಂದ 50ರವರೆಗೆ ವಿಶೇಷ ರಿಯಾಯಿತಿ ನೀಡಲಾಗುವುದು. ಆಸಕ್ತರು ಕಾರ್ಯಕ್ರಮಕ್ಕೆ ಹಾಜರಾಗಿ, ಪುಸ್ತಕಗಳನ್ನು ಕೊಳ್ಳಬೇಕೆಂದು ನವಕರ್ನಾಟಕ ಪುಸ್ತಕ ಮಳಿಗೆ ಶಾಖಾ ವ್ಯವಸ್ಥಾಪಕ ಎನ್.ಕೆ.ಸತ್ಯನಾರಾಯಣ ಪ್ರಕಟಣೆಯಲ್ಲಿ ಕೋರಿದ್ದಾರೆ.



ತಿ.ನರಸೀಪುರ ತಾಲೂಕಿನ ಗಾಣಿಗನಕೊಪ್ಪಲಿನಲ್ಲಿ ಅಯೋಧ್ಯೆಯ ಶ್ರೀರಾಮಮಂದಿರದ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಗ್ರಾಮದ ಬೀದಿಗಳಲ್ಲಿ ರಾಮ–ಲಕ್ಷ್ಮಣರ ಪ್ರತಿಮೆ ಮೆರವಣಿಗೆ ಮಾಡಲಾಯಿತು. ಈ ವೇಳೆ ಯುವಕರು, ಗ್ರಾಮಸ್ಥರು ಹಾಜರಿದ್ದರು.

ವಿದ್ಯುತ್ ಸ್ಪರ್ಶದಿಂದ ಇಬ್ಬರು ಪೇಂಟರ್‌ಗಳಿಗೆ ಸುಟ್ಟಗಾಯ

ಮೈಸೂರು,ಜ18(ಆರ್‌ಕೆ)– ವಿದ್ಯುತ್ ಸ್ಪರ್ಶಗೊಂಡ ಪರಿಣಾಮ ಇಬ್ಬರು ಪೇಂಟರ್‌ಗಳಿಗೆ ಸುಟ್ಟಗಾಯಗಳಾದ ಘಟನೆ ರಾಘವೇಂದ್ರನಗರದಲ್ಲಿ ಗುರುವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ಆಲನಹಳ್ಳಿ ನಿವಾಸಿಗಳಾದ ಸಿದ್ಧರಾಜು ಮತ್ತು ಮನೋಜ್ ಗಾಯಗೊಂಡವರಾಗಿದ್ದು, ಅವರನ್ನು ಕೆ.ಆರ್.ಆಸ್ಪತ್ರೆ ಸುಟ್ಟಗಾಯಗಳ ವಿಭಾಗಕ್ಕೆ ದಾಖಲಿಸಲಾಗಿದೆ. ರಾಘವೇಂದ್ರ ನಗರದಲ್ಲಿ ನಿರ್ಮಾಣಗೊಂಡಿರುವ ಹೊಸ ಮನೆಗೆ ಬಣ್ಣ ಬಳಿಯುತ್ತಿದ್ದ ಅವರು, ಇಂದು ಬೆಳಗ್ಗೆ 9.30ರ ವೇಳೆ ಪೇಂಟ್ ಕೆಲಸ ಆರಂಭಿಸಲೆಂದು ಕಬ್ಬಿಣದ ರಾಡ್ ಅನ್ನು ಮೇಲಕ್ಕೆ ಎತ್ತಿದಾಗ ಅದು ಮುಂದೆ ಇದ್ದ ಹೈಟೆನ್‌ಷನ್ ಮಾರ್ಗದ ತಂತಿಗೆ ತಗುಲುತ್ತಿದ್ದಂತೆಯೇ ವಿದ್ಯುತ್ ಸ್ಪರ್ಶವಾಗಿ ಸಿದ್ಧರಾಜು ಮತ್ತು ಮನೋಜ್‌ಗೆ ಸುಟ್ಟ ಗಾಯಗಳಾದವು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ನಜರ್‌ಬಾದ್ ಠಾಣೆ ಪೊಲೀಸರು, ಸೆಸ್ಕ್ ಅಧಿಕಾರಿಗಳನ್ನು ಕರೆಸಿ ಮಹಜರು ನಡೆಸಿದರು. ಸಿದ್ದರಾಜು ಅವರಿಗೆ ಹೆಚ್ಚಿನ ಪ್ರಮಾಣದ ಸುಟ್ಟಗಾಯಗಳಾಗಿರುವುದರಿಂದ ಅವರ ಸ್ಥಿತಿ ಗಂಭೀರವಾಗಿದ್ದು, ಮನೋಜ್‌ಗೆ ಸಣ್ಣಪುಟ್ಟ ಗಾಯಗಳಾಗಿರುವುದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಇನ್‌ಸ್ಪೆಕ್ಟರ್ ಮಹದೇವಸ್ವಾಮಿ ತಿಳಿಸಿದ್ದಾರೆ.



ಮಾಜಿ ಕಾರ್ಪೋರೇಟರ್ ಶ್ರೀಮತಿ ಭಾಗ್ಯ ಮಹದೇಶ್ ಅವರ ಹುಟ್ಟುಹಬ್ಬವನ್ನು ಬಸವೇಶ್ವರ ವಿಕಲಚೇತನರ ಶಾಲೆಯಲ್ಲಿ ಮಕ್ಕಳಿಗೆ ಊಟ ಹಾಗೂ ಸಿಹಿ ವಿತರಿಸುವ ಮೂಲಕ ಆಚರಿಸಲಾಯಿತು. ಈ ವೇಳೆ ಆಶ್ರಮದ ಅಧ್ಯಕ್ಷ ಮರೀಗೌಡ, ವಿವಿ ಪುರಂ ಆಸ್ಪತ್ರೆ ನಿರ್ದೇಶಕ ಪಡುವಾರಹಳ್ಳಿ ಪಾಪಣ್ಣ, ಕಾರ್ಯದರ್ಶಿ ಕೃಷ್ಣ, ನಂದನ್ ಮಹದೇಶ್, ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್, ಪುರುಷೋತ್ತಮ್, ಕೃಪಾನಂದ, ನಾಗು, ರವಿ, ಶಿವು, ಮಾದೇಶ್, ವೆಂಕಟೇಶ್ ಮತ್ತಿತರರು ಹಾಜರಿದ್ದರು.

ಟೀಂ ಮೈಸೂರಿಂದ ಪಿಂಜರಾಪೋಲ್‌ನ ಹಸು ದತ್ತು

ಮೈಸೂರು, ಜ.18(ಎಸ್‌ಪಿಎನ್)–ಮಕರ ಸಂಕ್ರಾಂತಿಯ ಪ್ರಯುಕ್ತ ಮೈಸೂರಿನ ಪಿಂಜರಾಪೋಲ್ ಸೊಸೈಟಿಯಲ್ಲಿ ಮೂರು ಹಸುಗಳನ್ನು ಟೀಂ ಮೈಸೂರು ಪ್ರತಿಷ್ಠಾನದ ಪದಾಧಿಕಾರಿಗಳು ಒಂದು ವರ್ಷಕ್ಕೆ ದತ್ತು ಪಡೆದರು.

ಸಂಕ್ರಾಂತಿ ಹಬ್ಬದಂದು ಗೋವುಗಳನ್ನು ಪೂಜಿಸುವುದು ಪದ್ಧತಿ. ಟೀಂ ಮೈಸೂರು ಪ್ರತಿಷ್ಠಾನದ ವತಿಯಿಂದ 31,031 ರೂ.ಗಳನ್ನು ದೇಣಿಗೆ ನೀಡಿ, ಮೂರು ಹಸುವನ್ನು ದತ್ತು ಪಡೆದ ಪ್ರಮಾಣ ಪತ್ರವನ್ನು ಪಿಂಜರಾಪೋಲ್ ಅಧ್ಯಕ್ಷ ವಿನೋದ್ ಕೋಬಿಯ ಅವರಿಂದ ಸ್ವೀಕರಿಸಿದರು.

ಈ ವೇಳೆ ಹಸುಗಳಿಗೆ ಪೂಜೆ ಸಲ್ಲಿಸಿ, ಎಳ್ಳು, ಹಿಂಡಿ ಹಾಗೂ ಬಾಳೆಹಣ್ಣು ನೀಡಲಾಯಿತು. ತಂಡದ ಸದಸ್ಯರಾದ ಯಶವಂತ, ಹರೀಶ್ ಬಾಬು, ಅನಿಲ್, ಯತೀಶ್, ಗಣೇಶ್, ಮಂಜುನಾಥ, ಮುರಳಿ, ಸುನಿಲ್, ಅಮರ್, ಹಿರಿಯಣ್ಣ, ಮನೋಹರ್, ಸುಮಂತ್, ಹೇಮಂತ್, ಲಿಂಗರಾಜು, ಉಷಾ ಹರೀಶ್, ಭವ್ಯಶ್ರೀ, ಕಾವೇರಿ, ಸುಕೃತ, ಸಹನಾ, ಇಂದ್ರಾಣಿ, ವರಲಕ್ಷ್ಮಿ ಹಾಗೂ ಪುಟಾಣಿ ಮಕ್ಕಳಾದ ಯಶಸ್, ಲೋಚನ, ಮಿನುಗು, ಮೌಲ್ಯ, ಕೃಷಿಕ ಉಪಸ್ಥಿತರಿದ್ದರು.



ಮೈಸೂರಿನ ಪಿಂಜರಾಪೋಲ್ ಸೊಸೈಟಿಯಲ್ಲಿ ಮೂರು ಹಸುಗಳನ್ನು ಟೀಂ ಮೈಸೂರು ಪ್ರತಿಷ್ಠಾನದ ಪದಾಧಿಕಾರಿಗಳು ದತ್ತು ಪಡೆದರು.

ಧನ್ವಂತರಿ ದೇವಾಲಯದಲ್ಲಿ ಸಮಗ್ರ ರಾಮಾಯಣ ಸಪ್ತಾಹ ಪ್ರವಚನ ಮಾಲಿಕೆ



ಮೈಸೂರು, ಜ.18– ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ಉದ್ಘಾಟನೆ ಪರ್ವ ಕಾಲದ ನಿಮಿತ್ತ ಅಗ್ರಹಾರದಲ್ಲಿರುವ ಮೈಸೂರಿನ ಉತ್ತರಾಧಿ ಮಠ ಶ್ರೀ ಧನ್ವಂತರಿ ದೇವಾಲಯದಲ್ಲಿ ಸಮಗ್ರ ರಾಮಾಯಣ ಸಪ್ತಾಹ ಪ್ರವಚನ ಮಾಲಿಕೆ ಹಮ್ಮಿಕೊಳ್ಳಲಾಗಿದೆ. ಈ ಪ್ರವಚನ ಮಾಲಿಕೆಯನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಧನ್ವಂತರಿ ದೇವಸ್ಥಾನದಲ್ಲಿ ರಾಮಾಯಣ ಸಪ್ತಾಹ ಪ್ರವಚನ ಹಮ್ಮಿಕೊಂಡಿರುವುದು ಅತ್ಯಂತ ಒಳ್ಳೆಯ ಕಾರ್ಯ ಎಂದು ಹೇಳಿದರು. ಲೌಕಿಕ ಬದುಕಿನಲ್ಲಿ ಮನುಷ್ಯ ಆಧುನಿಕತೆಯೆಡೆಗೆ ಹೋಗ್ತಾ,ಹೋಗ್ತಾ ಸ್ವಾರ್ಥಕ್ಕಾಗಿ ಬೌದ್ಧಿಕ ಅನುಕೂಲತೆಯೇ ಜೀವನ ಅಂದುಕೊಂಡಿದ್ದಾರೆ ಎಂದು ಹೆಚ್.ವಿ.ರಾಜೀವ್ ವಿಷಾದಿಸಿದರು.

ಪ್ರವಚನಕಾರರಾದ ಪಂಡಿತ್ ಶ್ರೀ ಗುರುರಾಜಾಚಾರ್ಯ, ಪಂಡಿತ್ ಗೋವಿಂದ ಚಾರ್ಯ ಪಾಂಡುರಂಗಿ, ಪಂಡಿತ್ ಅನಿರುದ್ಧ ಚಾರ್ಯ ಪಾಂಡುರಂಗಿ, ವಾಸುದೇವಮೂರ್ತಿ ಪಾಲ್ಗೊಂಡಿದ್ದರು.

ಉದಯಗಿರಿ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿ 9 ಮಂದಿ ನಾಪತ್ತೆ



ಶೇಕ್ ಜಿಷಾನ್



ಹಾಜೀರಾ



ನೂರ್ ಅಫ್ಜ್



ಶೇಕ್ ಜೈಯಾನ್

ಮೈಸೂರು, ಜ.18–ಪ್ರತ್ಯೇಕ ಪ್ರಕರಣಗಳಲ್ಲಿ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ನಾಲ್ವರು ಸೇರಿದಂತೆ 9 ಮಂದಿ ನಾಪತ್ತೆಯಾಗಿದ್ದಾರೆ.

ಒಂದನೇ ಪ್ರಕರಣದಲ್ಲಿ ಮೈಸೂರಿನ ಕಲ್ಯಾಣಗಿರಿನಗರದ 4ನೇ ಹಂತದಲ್ಲಿ ವಾಸವಾಗಿರುವ ಒಂದೇ ಕುಟುಂಬದ ಶೇಕ್ ಜಿಷಾನ್ (34), ಬಿ. ಹಾಜೀರಾ (25), ನೂರ್ ಅಫ್ಜ್ (6) ಮತ್ತು ಶೇಕ್ ಜೈಯಾನ್ (3) ಮೇ 28ರಂದು ಮಧ್ಯಾಹ್ನ 1 ಗಂಟೆಗೆ ಮನೆಯಿಂದ ಹೋದವರು ಈವರೆಗೆ ವಾಪಸ್ಸಾಗಿಲ್ಲ ಎಂದು ರೇಷ್ಮಾಭಾನು ಎಂಬುವರು ದೂರು ದಾಖಲಿಸಿದ್ದಾರೆ.

ಕಲ್ಯಾಣಗಿರಿನಗರ 4ನೇ ಹಂತದ ನಿವಾಸಿ ಅಹಲ್ಯ (83) ಆಗಸ್ಟ್ 14, 2022 ರಂದು ಬೆಳಗ್ಗೆ 9.30ರ ಸಮಯದಲ್ಲಿ ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಆದಿಶೇಷ ಅವರು ದೂರು ದಾಖಲಿಸಿದ್ದಾರೆ.

ನ.13, 2022ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ದಿವ್ಯ (32) ಚಾಮರಾಜ ನಗರಕ್ಕೆ ಹೋಗುವುದಾಗಿ ಹೇಳಿ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಆಕೆಯ ಪತಿ ಜೈಶಂಕರ್ ದೂರು ದಾಖಲಿಸಿದ್ದಾರೆ.

ಸೈಯದ್ ಅಬ್ದುಲ್ ನಸ್ಸರ್ (26) ಏಪ್ರಿಲ್ 18, 2022ರಂದು ಸಂಜೆ 4.30ರ ಸಮಯದಲ್ಲಿ ಮನೆಯಿಂದ ಹೊರಗೆ ಹೋದವರು ಇದುವರೆಗೆ ವಾಪಸ್ ಬಂದಿಲ್ಲ ಎಂದು ಆತನ ತಂದೆ ಸೈಯದ್ ಅಬ್ದುಲ್ ರಹೀಂ ದೂರು ದಾಖಲಿಸಿದ್ದಾರೆ.



ಅಹಲ್ಯ



ದಿವ್ಯ



ಸೈಯದ್ ಅಬ್ದುಲ್



ಇಮ್ರಾನ್ ಖಾನ್

ಇಮ್ರಾನ್ ಖಾನ್ (38) ಅಕ್ಟೋಬರ್ 2, 2021ರಂದು ಬೆಳಗ್ಗೆ 9 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಮಹಮ್ಮದ್ ಉಮರ್ ದೂರು ದಾಖಲಿಸಿದ್ದಾರೆ.




ಲಕ್ಷ್ಮೀ

ಲಕ್ಷ್ಮೀ (28) ಅ.21, 2022ರಂದು ಬೆಳಗ್ಗೆ 9 ಗಂಟೆ ಸಮಯದಲ್ಲಿ ಕೆಲಸಕ್ಕೆಂದು ಹೊರ ಹೋದವರು ಇದುವರೆಗೂ ವಾಪಸ್ ಬಂದಿಲ್ಲ ಎಂದು ಆಕೆ ಪತಿ ನಾಗರಾಜು ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಉದಯಗಿರಿ ಪೊಲೀಸ್ ಠಾಣೆ ದೂ. 0821–2418309, 0821–2418339 ಸಂಪರ್ಕಿಸಲು ಕೋರಲಾಗಿದೆ.

'ಕಾಕನಕೋಟೆ' ನಾಟಕ ಪ್ರದರ್ಶನ

ಮೈಸೂರು,ಜ.18–ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಎಸ್.ರಾಮನಾಥ ಅವರ ನಿರ್ದೇಶನದಲ್ಲಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ವಿರಚಿತ 'ಕಾಕನಕೋಟೆ' ನಾಟಕ ಪ್ರದರ್ಶನವನ್ನು ಜನವರಿ 20, 27, 28ರಂದು ಸಂಜೆ 6.30ಕ್ಕೆ ರಂಗಾಯಣದ ವನರಂಗ ಬಯಲು ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ರಂಗಾಯಣದ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.1.2024 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024ರಿಂದ 23.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಅಯೋಧ್ಯೆಯಲ್ಲಿ ಶ್ರೀರಾಮ ದೇವರ ಪ್ರತಿಷ್ಠಾಪನೆ ಅಂಗವಾಗಿ ಶ್ರೀರಾಮತಾರಕ ಜಪಯಜ್ಞ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಬೆಳಗ್ಗೆ 7 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** 58ನೇ ವರ್ಷದ ತೈಪೂಜಾ ಮಹೋತ್ಸವ, ಸ್ಥಳ: ದೇವಸ್ಥಾನ, ವಿಶ್ವೇಶ್ವರನಗರ, ಬೆಳಗ್ಗೆಯಿಂದ.

■ **ನವಕರ್ನಾಟಕ ಪ್ರಕಾಶನ :** ಪುಸ್ತಕ ಪ್ರದರ್ಶನದ ಉದ್ಘಾಟನೆ ಮತ್ತು ನಾಲ್ಕು ಕೃತಿಗಳ ಲೋಕಾರ್ಪಣೆ, ಉದ್ಘಾಟನೆ: ಲೇಖಕ ಪ್ರೊ.ಸಿ.ನಾಗಣ್ಣ, ಕೃತಿಗಳ ಪರಿಚಯ: ಪತ್ರಕರ್ತ ಗಣೇಶ ಅಮೀನಗಡ, ಸಹ ಪ್ರಾಧ್ಯಾಪಕರಾದ ಡಾ.ವಿನೋದ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್‍ಸ್ ಸಭಾಂಗಣ, ಸಂಜೆ 5ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆಯ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಮಹಾರಾಜ ಕಾಲೇಜು ಅತಿಥಿ ಉಪನ್ಯಾಸಕ ಡಾ.ಪ್ರೇಮ್‌ಕುಮಾರ್ ಅವರಿಂದ ಭಾರತದ ಸಂವಿಧಾನ ಮತ್ತು ಶೈಕ್ಷಣಿಕ ಅಭಿವೃದ್ಧಿ ಕುರಿತು ಉಪನ್ಯಾಸ, ಅಧ್ಯಕ್ಷತೆ: ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ನಿಲಯ ಪಾಲಕ ಎಸ್.ಲೋಕೇಶ್, ಸ್ಥಳ:ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಶ್ರೀರಾಂಪುರ, ಸಂಜೆ 6ಕ್ಕೆ.

■ **ರೋಗಮೋಚಕ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ:** ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನಾ ಪರ್ವಕಾಲದ ನಿಮಿತ್ತ ಸಮಗ್ರ ರಾಮಾಯಣ ಪ್ರವಚನ ಮಾಲಿಕೆ, ಪಂಡಿತ್ ಶ್ರೀ ಬಾದರಾಯಣಾಚಾರ್ಯ ಅವರಿಂದ ಕಿಷ್ಕಿಂದ ಕಾಂಡ ಕುರಿತು ಉಪನ್ಯಾಸ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6ರಿಂದ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ:** ಮೈಸೂರು ಪಿಟೀಲು ಚೌಡಯ್ಯ ಸಂಸ್ಮರಣೆ ಅಂಗವಾಗಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರಿಂದ ಡಾ.ಎಲ್.ಸುಬ್ರಮಣ್ಯಂ ಅವರಿಗೆ ಧನುರ್ ವೈಣಿಕಬ್ರಹ್ಮ ಪದವಿ ಪ್ರದಾನ, ಡಾ.ಎಲ್.ಸುಬ್ರಮಣ್ಯಂ ಅವರಿಂದ ಕರ್ನಾಟಕ ಶಾಸ್ತ್ರೀಯ ಪಿಟೀಲು ವಾದನ, ವಿದ್ವಾನ್ ವಿ.ವಿ.ರಮಣರಾವ್–ಮೃದಂಗ, ವಿದ್ವಾನ್ ತ್ರಿಪುನಿತುರಾ ರಾಧಾಕೃಷ್ಣನ್–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು –ಬಾನುಲಿ ಸರಣಿ, ರಚನೆ–ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಪದ ಸಂಸ್ಕೃತಿ –ಡಾ.ಸಂಗಮೇಶ ಸವದತ್ತಿ ಮಠ, 6.50 ರೈತರಿಗೆ ಸಲಹೆ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಸಿ.ಹೆಚ್.ಕೃಷ್ಣಮಾಚಾರ್ಯಲು–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಆರ್. ಶೈಲಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಕದ್ರಿ ಗೋಪಾಲನಾಥ್–ಸ್ಯಾಕ್ಸೋಫೋನ್ ವಾದನ, 4.00 ಮಹಿಳಾರಂಗ–ಸಖಿಪದ, ಪ್ರಸ್ತುತಿ–ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ– ಜಾನಪದ ಅಧ್ಯಯನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಅಂಬಳಿಕೆ ಹಿರಿಯಣ್ಣ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುವವರು ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಕೃಷಿಲೋಕ, ಪ್ರಸುತಿ–ಆರ್.ಲೋಕೇಶವರಿ, 8.00 ರಸಮಂಜರಿ–ಸಂಸ್ಕೃತ ಕಲಿಕೆಯ ಜಾಗತಿಕ ಆಯಾಮ ಕುರಿತು ಡಾ.ಹೆಚ್.ವಿ.ನಾಗರಾಜರಾವ್ ಅವರೊಂದಿಗೆ ಸಂವಾದ. ನಡೆಸಿ ಕೊಡುತ್ತಾರೆ ದಿವಾಕರ ಹೆಗಡೆ, 9.30 ಕೆ.ವಿ.ನಾರಾಯಣಸ್ವಾಮಿ–ಹಾಡುಗಾರಿಕೆ, 10.00 ತತ್ವಸಂಚಾರ–ಜನಪದ ಗಾಯಕರ ತತ್ವ ಗಾಯನ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಮಿತ್ರ

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಶಿಬಿರಕ್ಕೆ ಚಾಲನೆ

ಮೈಸೂರು, ಜ.18(ಎಂಕೆ)– ಕಲಿಕೆ ಜೀವನದ ನಿರಂತರ ಪ್ರಕ್ರಿಯೆಯಾಗಿದ್ದು, ಕಲಿಕೆ ನಿಂತ ಕ್ಷಣ ಸಾಧನೆ ಮತ್ತು ಯಶಸ್ಸು ಅಂತ್ಯವಾಗುತ್ತದೆ ಎಂದು ಮಂಗಳೂರಿನ ಎನಿಪೋಯಾ ಹಾಗೂ ಉತ್ತರ ಪ್ರದೇಶದ ಗ್ಲೋಕಲ್ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಸೈಯದ್ ಅಖಿಲ್ ಅಹಮದ್ ತಿಳಿಸಿದರು.

ನಗರದ ಲಕ್ಷ್ಮಿಪುರಂನಲ್ಲಿರುವ ಜ್ಞಾನಬುತ್ತಿ ಶೈಕ್ಷಣಿಕ ಸಂಸ್ಥೆಯಲ್ಲಿ ಆಯೋಜಿಸಿದ್ದ ಪಿಡಿಓ, ಎಸ್‌ಡಿಎ ಮತ್ತು ಎಫ್‌ಡಿಎ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಜಾಗತೀಕರಣದಿಂದ ಜ್ಞಾನಕ್ಕೆ ಹೆಚ್ಚಿನ ಮಹತ್ವ ಬಂದಿದ್ದು, ಕ್ಷಣ ಕ್ಷಣದ ಬದಲಾವಣೆ ಜಗದ ನಿಯಮವಾಗಿದೆ. ಶರವೇಗದಲ್ಲಿ ಓಡುತ್ತಿರುವ ಜಗತ್ತಿನಲ್ಲಿ ಸ್ಪರ್ಧಿಸಲು ಕಲಿಕೆಯೊಂದೇ ಪ್ರಬಲ ಅಸ್ತ್ರ ಎಂದು ಹೇಳಿದರು.

ಮನಸಿಟ್ಟು ಮಾಡುವ ಕೆಲಸ, ಅಳಿಲು ಸೇವೆ ಭವಿಷ್ಯದಲ್ಲಿ ಮಹತ್ತರ ಪಾತ್ರ ನಿರ್ವಹಿಸುವ ಮೂಲಕ ಬದುಕಿಗೆ ಹೊಸ ತಿರುವ ನೀಡುತ್ತದೆ. ಪ್ರಾಮಾಣಿಕ ಪರಿಶ್ರಮದಿಂದ ಅಸಾಧ್ಯವೂ ಸಾಧ್ಯವಾಗಿ ಬದಕಲಾಗುತ್ತದೆ. ಶಕ್ತಿ ಎಲ್ಲರಿಗೂ ಇದ್ದು, ಅದರ ಸದುಪಯೋಗ ಹಾಗೂ ನಿರಂತರ ಕಲಿಕೆ ಮುಖ್ಯ ಎಂದು ಕಿವಿಮಾತು ಹೇಳಿದರು.

ಆಡಳಿತ ತರಬೇತಿ ಸಂಸ್ಥೆ ಸಂಯೋಜಕಿ ಶ್ರೀವಳ್ಳಿ, ಅಖಿಲ ಭಾರತ ಸಹಕಾರ ಮಾರುಕಟ್ಟೆ ನಿರ್ದೇಶಕ ವೈ.ಎನ್.ಶಂಕರೇಗೌಡ, ಜ್ಞಾನಬುತ್ತಿ ಶೈಕ್ಷಣಿಕ ಸಂಸ್ಥೆಯ ಜೈನಹಳ್ಳಿ ಸತ್ಯನಾರಾಯಣಗೌಡ, ಹೆಚ್.ಬಾಲಕೃಷ್ಣ, ಪ್ರೊ.ಕೃಪ.ಗಣೇಶ್, ಡಾ.ಪ್ರಸನ್ನ, ಡಾ.ನಾಗಾಚಾರ್, ಡಾ.ಉಮೇಶ್ ಬೇವಿನಹಳ್ಳಿ, ಕಿರಣ್‌ಕೌಶಿಕ್, ಕೆ.ವೈ.ನಾಗೇಂದ್ರ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಲಕ್ಷ್ಮಿಪುರಂನಲ್ಲಿರುವ ಜ್ಞಾನಬುತ್ತಿ ಶೈಕ್ಷಣಿಕ ಸಂಸ್ಥೆಯಲ್ಲಿ ಆಯೋಜಿಸಿದ್ದ ಪಿಡಿಓ, ಎಸ್‌ಡಿಎ ಮತ್ತು ಎಫ್‌ಡಿಎ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಶಿಬಿರವನ್ನು ಮಂಗಳೂರಿನ ಎನಿಪೋಯಾ ಹಾಗೂ ಉತ್ತರ ಪ್ರದೇಶದ ಗ್ಲೋಕಲ್ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಸೈಯದ್ ಅಖಿಲ್ ಅಹಮದ್ ಉದ್ಘಾಟಿಸಿದರು. ಆಡಳಿತ ತರಬೇತಿ ಸಂಸ್ಥೆ ಸಂಯೋಜಕಿ ಶ್ರೀವಳ್ಳಿ ಮತ್ತಿತರರಿದ್ದರು.

ಅಯೋಧ್ಯೆ ಗರ್ಭಗುಡಿಯಲ್ಲಿ ರಾಮಲಲ್ಲಾ ವಿರಾಜಮಾನ





ಉತ್ತರ ಪ್ರದೇಶದ ಅಯೋಧ್ಯೆ ರಾಮಮಂದಿರದ ಗರ್ಭಗುಡಿಯ ಪೀಠದ ಮೇಲೆ ವೇದಘೋಷಗಳ ನಡುವೆ ರಾಮಲಲ್ಲಾ ವಿಗ್ರಹವನ್ನು ಗುರುವಾರ ಶ್ರದ್ಧಾ ಭಕ್ತಿಯಿಂದ ವಿರಾಜಮಾನ ಮಾಡಲಾಯಿತು.

ಲಖನೌ, ಜ.18– ವೇದಘೋಷಗಳ ನಡುವೆ ರಾಮಮಂದಿರದ ಗರ್ಭಗುಡಿಯ ಪೀಠದ ಮೇಲೆ ರಾಮಲಲ್ಲಾ ವಿಗ್ರಹವನ್ನು ಗುರುವಾರ ವಿರಾಜಮಾನ ಮಾಡಲಾಯಿತು. ಪ್ರಾಣ ಪ್ರತಿಷ್ಠಾಪನೆ ಮಹೋತ್ಸವದ ಪೂರ್ವಭಾವಿ ಆಚರಣೆಗಳ ಭಾಗವಾಗಿ ವಿಗ್ರಹವನ್ನು ವಿರಾಜಮಾನ ಮಾಡಲಾಯಿತು.

ಇದಕ್ಕೂ ಮೊದಲು, ದೇಶದ ನದಿಗಳ ನೀರಿನಿಂದ ವಿಗ್ರಹಕ್ಕೆ ಪವಿತ್ರ ಸ್ನಾನ ಮಾಡಿಸಲಾಯಿತು. ಜೊತೆಗೆ, ಔಷಧೀಯ ಗುಣಗಳಿರುವ ಸಸ್ಯಗಳನ್ನು ನೆನೆಸಿರುವ ನೀರಿನಿಂದ ವಿಗ್ರಹವನ್ನು ಸ್ವಚ್ಛಗೊಳಿಸಲಾಯಿತು ಎಂದು ಮಂದಿರದ ಅರ್ಚಕರೊಬ್ಬರು ತಿಳಿಸಿದರು.

ಗುರುವಾರ ಬೆಳಗ್ಗೆಯೇ ರಾಮಮಂದಿರದ ಗರ್ಭಗುಡಿಯಲ್ಲಿ 'ಗಣೇಶ ಪೂಜೆ' ಮತ್ತು 'ವರುಣ ಪೂಜೆ'ಯನ್ನೂ ನೆರವೇರಿಸಲಾಯಿತು. 150 ಕೆ.ಜಿ ತೂಕದ ಬಾಲರಾಮನ ವಿಗ್ರಹವನ್ನು ಟ್ರಕ್ ಮೂಲಕ ಬುಧವಾರ ರಾತ್ರಿಯೇ ಗರ್ಭಗುಡಿಗೆ ತರಲಾಗಿತ್ತು. ಇದಲ್ಲದೇ, ಪೂರ್ವಭಾವಿ ವಿಧಿವಿಧಾನಗಳ ಭಾಗವಾಗಿ, ಪ್ರಮುಖ ತೀರ್ಥಕ್ಷೇತ್ರಗಳನ್ನು ಆರಾಧಿಸುವ ತೀರ್ಥ ಪೂಜೆಯನ್ನು ಅರ್ಚಕರು ನೆರವೇರಿಸಿದರು.

21ರಂದೇ ಮೋದಿ ಅಯೋಧ್ಯೆಗೆ: ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭಾನುವಾರವೇ ಅಯೋಧ್ಯೆಯನ್ನು ತಲುಪಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಸೋಮವಾರ ಮಧ್ಯಾಹ್ನ 12:30ರಿಂದ ಪ್ರಾಣ ಪ್ರತಿಷ್ಠಾಪನೆಯ ವಿಧಿಗಳು ಆರಂಭವಾಗಲಿವೆ. ಇತ್ತೀಚಿನ ದಿನಗಳಲ್ಲಿ ನಸುಕಿನ ಜಾವ ದಟ್ಟ ಮಂಜು ಆವರಿಸುತ್ತಿದೆ. ಇದರಿಂದಾಗಿ ಮೋದಿ ಅವರ ವಿಮಾನವು ಸೋಮವಾರ ನಿಗದಿತ ಸಮಯದಲ್ಲಿ ಅಯೋಧ್ಯೆ ತಲುಪುವುದಕ್ಕೆ ಸಮಸ್ಯೆಯಾಗುವ ಸಂಭವ ಇರುವುದರಿಂದ ಅವರ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ ಎನ್ನಲಾಗಿದೆ.

ಮೋದಿ ಅವರು ಸರಯೂ ನದಿಯಲ್ಲಿ ಪವಿತ್ರ ಸ್ನಾನ ಮಾಡಿ, ನದಿ ನೀರನ್ನು ಹತ್ತಿರದ ನಾಗೇಶ್ವರ ಮಹಾದೇವ ದೇವಾಲಯಕ್ಕೆ ತಂದು ಜಲಾಭಿಷೇಕ ಮಾಡುವ ಸಾಧ್ಯತೆ ಇದೆ. ಅವರು ಸೀತೆಯ ಕುಲ ದೇವಿ 'ದೇವಕಲಿ' ಮಂದಿರ ಮತ್ತು ಹನುಮಾನ್‌ಗಡಿ ಮಂದಿರಕ್ಕೂ ಭೇಟಿ ನೀಡಬಹುದು ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಮೂಲಗಳು ತಿಳಿಸಿವೆ. ರಾಮಲಲ್ಲಾ ವಿಗ್ರಹಕ್ಕೆ ಕಣ್ಣಿಗೆ ಕಟ್ಟಿರುವ ಬಟ್ಟೆಯನ್ನು ಪ್ರಾಣ ಪ್ರತಿಷ್ಠಾಪನೆ ದಿನದಂದು ಮೋದಿ ಅವರ ಎದುರೇ ತೆರೆಯಲಾಗುತ್ತದೆ. ವಿಗ್ರಹದ ಕಣ್ಣಿಗೆ ಕಾಡಿಗೆಯನ್ನು ಮೋದಿ ಅವರೇ ಹಚ್ಚಿ, ಕನ್ನಡಿ ತೋರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶಾರ್ಜಾದಲ್ಲಿ ಹೂಡಿಕೆಗೆ ವಿಪುಲ ಅವಕಾಶ

ಯುಎಇ ಅಧಿಕಾರಿ ಅಲಿ ಸಯೀದ್ ಅಲ್ ಜರ್ವಾನ್ ಭರವಸೆ



ನಗರದ ಖಾಸಗಿ ಹೋಟೆಲ್‌ನಲ್ಲಿ ಅಸ್ಸೋಚಾಮ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸಹಯೋಗದೊಂದಿಗೆ ಆಯೋಜಿಸಿದ್ದ 'ಯುಎಇ ನಲ್ಲಿ ಮುಕ್ತ ವ್ಯಾಪಾರ ಹೂಡಿಕೆಗೆ ಅವಕಾಶಗಳು' ಸಂವಾದಾತ್ಮಕ ಕಾರ್ಯಕ್ರಮದಲ್ಲಿ ಯುಎಇ ಶಾರ್ಜಾ ಸರ್ಕಾರದ ಹಮ್ರಿಯಾ ಫ್ರೀ ಜೋನ್ ಅಥಾರಿಟಿಯ ವಾಣಿಜ್ಯ ವ್ಯವಹಾರಗಳ ವಿಭಾಗದ ಉಪ ಕಾರ್ಯನಿರ್ವಾಹಕ ನಿರ್ದೇಶಕ ಅಲಿ ಸಯೀದ್ ಅಲ್ ಜರ್ವಾನ್ ಭಾಗವಹಿಸಿದ್ದರು. (ಎಡದಿಂದ ಆರನೆಯವರು) ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಹಮ್ರಿಯಾ ಮುಕ್ತ ವಲಯದ ವ್ಯಾಪಾರ ಅಭಿವೃದ್ಧಿ ಮುಖ್ಯಸ್ಥ ಜಿಯೋಮನ್ ಜಾರ್ಜ್, ಕಾನೂನು ಸಲಹೆಗಾರ ರೋಹಿತ್‌ಕುಮಾರ್ ಮತ್ತಿತರರಿದ್ದರು.

ಮೈಸೂರು, ಜ.18(ಎಂಕೆ)–ವಿಶಾಲ ಭೂಮಿ, ಸಮುದ್ರ ಹಾಗೂ ವಾಯು ಸಂಪರ್ಕ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಒಳಗೊಂಡ ಯುಎಇ(ಯುನೈಟೆಡ್ ಅರಬ್ ಎಮಿರೇಟ್ಸ್) ಶಾರ್ಜಾ ಸರ್ಕಾರದ 'ಹಮ್ರಿಯಾ ಫ್ರೀ ಜೋನ್ ಅಥಾರಿಟಿ'(ಹಮ್ರಿಯಾ ಮುಕ್ತ ವಲಯ ಪ್ರಾಧಿಕಾರ) ಉದಯೋನ್ಮುಖ ವ್ಯಾಪಾರಸ್ಥರ ಮುಕ್ತ ಹೂಡಿಕೆಗೆ ವಿಪುಲ ಅವಕಾಶ ಕಲ್ಪಿಸಿದೆ ಎಂದು ಯುಎಇ ಶಾರ್ಜಾ ಸರ್ಕಾರದ ಹಮ್ರಿಯಾ ಫ್ರೀ ಜೋನ್ ಅಥಾರಿಟಿಯ ವಾಣಿಜ್ಯ ವ್ಯವಹಾರಗಳ ವಿಭಾಗದ ಉಪ ಕಾರ್ಯನಿರ್ವಾಹಕ ನಿರ್ದೇಶಕ ಅಲಿ ಸಯೀದ್ ಅಲ್ ಜರ್ವಾನ್ ಭರವಸೆ ನೀಡಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಅಸ್ಸೋಚಾಮ್, ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ(ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ) ಸಹಯೋಗದೊಂದಿಗೆ ಆಯೋಜಿಸಿದ್ದ 'ಯುಎಇ ನಲ್ಲಿ ಮುಕ್ತ ವ್ಯಾಪಾರ ಹೂಡಿಕೆಗೆ ಅವಕಾಶಗಳು' ಕುರಿತ ಎರಡು ದಿನಗಳ ಸಂವಾದಾತ್ಮಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈಗಾಗಲೇ 6500ಕ್ಕೂ ಹೆಚ್ಚು ಕಂಪನಿಗಳು ಶಾರ್ಜಾದಲ್ಲಿ ನೆಲೆಯೂರಿವೆ. ಅವುಗಳಲ್ಲಿ ಬಹುತೇಕ ಕಂಪನಿಗಳು ಭಾರತೀಯ ಮೂಲದವು ಎಂಬುದು ಶ್ಲಾಘನೀಯ ಎಂದರು.

ಭಾರತ ದೇಶದೊಂದಿಗೆ ಯುಎಇ ಉತ್ತಮ ಬಾಂಧವ್ಯ ಹೊಂದಿದ್ದು, ತೆರಿಗೆ ಪಾವತಿ ಇಲ್ಲದೆಯೇ ದೊಡ್ಡ ಮಟ್ಟದ ವ್ಯಾಪಾರ–ವಹಿವಾಟು ನಡೆಸಬಹುದಾಗಿದೆ. 'ಹಮ್ರಿಯಾ ಫ್ರೀ ಜೋನ್ ಅಥಾರಿಟಿ'ಯಿಂದ ಅನುಮತಿ ಪಡೆದ ಕೆಲ ಗಂಟೆಗಳಲ್ಲಿಯೇ ವ್ಯಾಪಾರ–ವಹಿವಾಟು ಪ್ರಾರಂಭಿಸಬಹುದು. ಯುಎಇನಿಂದ ಇನ್ನಿತರೆ ದೇಶಗಳಲ್ಲಿಯೂ ವ್ಯಾಪಾರ ವಿಸ್ತರಣೆಗೆ ಹಮ್ರಿಯಾ ಸಹಕಾರ ನೀಡಲಿದೆ ಎಂದು ಮಾಹಿತಿ ನೀಡಿದರು.

ಹಮ್ರಿಯಾ ಮುಕ್ತ ವಲಯದ ವ್ಯಾಪಾರ ಅಭಿವೃದ್ಧಿ ಮುಖ್ಯಸ್ಥ ಜಿಯೋಮನ್ ಜಾರ್ಜ್ ಮಾತನಾಡಿ, ಹಮ್ರಿಯಾ ಮುಕ್ತ ವಲಯದಲ್ಲಿ ವ್ಯಾಪಾರ ಘಟಕವನ್ನು ಸ್ಥಾಪಿಸಲು ಭಾರತೀಯ ಕಂಪನಿಗಳು ಅತ್ಯಂತ ಆಕರ್ಷಕವಾಗಿವೆ. ಹಮ್ರಿಯಾ ಮುಕ್ತ ವಲಯವನ್ನು ಆಫ್ರಿಕಾ ಮತ್ತು ಯುರೋಪ್‌ಗೆ ಮರು–ರಫ್ತು ಮೂಲವಾಗಿಯೂ ಬಳಸಿಕೊಳ್ಳಬಹುದು. 3.5 ಲಕ್ಷ ಭಾರತೀಯ ರೂಪಾಯಿಗಳಿಗಿಂತ ಕಡಿಮೆ ಪಾವತಿಸುವ ಮೂಲಕ, ಯಾವುದೇ ಕಂಪನಿಯು ಫ್ರೀ ಝೋನ್‌ನಲ್ಲಿ ಕಚೇರಿ ತೆರೆಯಬಹುದು. ವಿದ್ಯುತ್, ನೀರು ಸೇರಿದಂತೆ ಎಲ್ಲಾ ಮೂಲ ಸೌಕರ್ಯ ಒದಗಿಸಲಿದ್ದು, 25 ವರ್ಷಗಳ ಒಪ್ಪಂದ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಭಾರತಕ್ಕಿಂತ ಶಾರ್ಜಾದಲ್ಲಿ ತೆರಿಗೆ ಪ್ರಮಾಣ ಕಡಿಮೆ. ತೆರಿಗೆಗಳಿಂದ ಮುಕ್ತವಾಗಿ ವ್ಯಾಪಾರ–ವಹಿವಾಟು ನಡೆಸಲು ಅವಕಾಶವಿದೆ. ಸ್ಟೋರೇಜ್ ವ್ಯವಸ್ಥೆ, ಉತ್ತಮ ರಸ್ತೆ ಸಾರಿಗೆ, ಸಮೀಪದಲ್ಲೇ ವಿಮಾನ ನಿಲ್ದಾಣ, ಪಕ್ಕದಲ್ಲೇ ಸಮುದ್ರ ಮಾರ್ಗವಿದ್ದು, ಹಲವು ದೇಶಗಳಿಗೆ ಸಂಪರ್ಕ ಕೊಂಡಿಯಾಗಿ ವ್ಯಾಪಾರ ನಡೆಸಬಹುದು. ಫ್ಲಗ್ ಅಂಡ್ ಪ್ಲೆ ಬಿಸಿನೆಸ್ ಮಾದರಿಯಲ್ಲಿ ವ್ಯಾಪಾರ ವಿಸ್ತರಿಸಬಹುದಾಗಿದೆ. ಮುಕ್ತ ವಲಯ ಸ್ಥಾಪನೆ ಹಾಗೂ ಮುಕ್ತ ವಲಯ ಕಂಪನಿ ನಡೆಸಲು ವಿಪುಲ ಅವಕಾಶವಿದೆ ಎಂದು ವ್ಯಾಪಾರಸ್ಥರ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಮೈಸೂರಿನ 100ಕ್ಕೂ ಹೆಚ್ಚು ಉದ್ಯಮಿಗಳು ಭಾಗವಹಿಸಿದ್ದರು. ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಹಮ್ರಿಯಾ ಫ್ರೀ ಜೋನ್ ಅಥಾರಿಟಿ ಕಾನೂನು ಸಲಹೆಗಾರ ರೋಹಿತ್ ಕುಮಾರ್, ಅಸ್ಸೋಚಾಮ್ ಉಪ ನಿರ್ದೇಶಕ ಇರ್ಫಾನ್ ಆಲಂ, ಭಾರತಿ ಮತ್ತಿತರರು ಉಪಸ್ಥಿತರಿದ್ದರು.



ಕ್ಷಯರೋಗ ನಿರ್ಮೂಲನಾ ಅಭಿಯಾನದ ಪ್ರಯುಕ್ತ ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಕ್ಷಯರೋಗಿಗಳಿಗೆ ಉಚಿತ ಪೌಷ್ಠಿಕ ಆಹಾರ ಧಾನ್ಯದ ಕಿಟ್ ವಿತರಣೆಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್ ಅವರು ಚಾಲನೆ ನೀಡಿದರು. ಈ ವೇಳೆ ನಿ–ಕ್ಷಯ ಮಿತ್ರ ಯೋಜನೆಯಡಿ ರಾಜ್ಯಪಾಲರು ದೇಣಿಗೆ ನೀಡಿದ್ದ ಆಹಾರ ಧಾನ್ಯದ ಕಿಟ್‌ಗಳನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯವರು ಹಸ್ತಾಂತರಿಸಿದರು. ಮತ್ತೋರ್ವ ದಾನಿ ರಘುಲಾಲ್ ಫಾರ್ಮಸಿಯ ರಾಘವನ್ ಅವರು ಪ್ರೋಟಿನ್ ಪೌಡರ್ ನೀಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಮೊಹಮ್ಮದ್ ಶಿರಾಜ್ ಅಹ್ಮದ್, ಯುವ ರೆಡ್‌ಕ್ರಾಸ್ ಸಂಸ್ಥೆ ರಾಜ್ಯ ನಿರ್ದೇಶಕ ಎಂ.ಎಸ್.ಶರತ್, ಜಿಲ್ಲಾ ರೆಡ್‌ಕ್ರಾಸ್ ಸಂಸ್ಥೆ ಕಾರ್ಯದರ್ಶಿ ಎಸ್.ಎಸ್.ವೈದ್ಯನಾಥ ಮತ್ತಿತರರು ಉಪಸ್ಥಿತರಿದ್ದರು.

ಹರಣಿ ಸರೋವರದಲ್ಲಿ ದೋಣಿ ಮುಳುಗಿ

12 ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರು ಸಾವು



ಅಹಮದಾಬಾದ್, ಜ.18– ಗುಜರಾತ್‌ನ ವಡೋದರಾದ ಹರಣಿ ಸರೋವರದಲ್ಲಿ ದೋಣಿ ಮುಳುಗಿ 12 ಶಾಲಾ ಮಕ್ಕಳು ಮತ್ತು ಇಬ್ಬರು ಶಿಕ್ಷಕರು ಸೇರಿದಂತೆ ಒಟ್ಟು 14 ಮಂದಿ ಸಾವನ್ನಪ್ಪಿರುವ ದಾರುಣ ಘಟನೆ ಗುರುವಾರ ನಡೆದಿದೆ.

ದೋಣಿಯಲ್ಲಿ ನ್ಯೂ ಸನ್‌ರೈಸ್ ಶಾಲೆಯ 27 ವಿದ್ಯಾರ್ಥಿಗಳು ಪ್ರಯಾಣಿಸುತ್ತಿದ್ದರು. ಅವರಲ್ಲಿ ಯಾರೂ ಲೈಫ್ ಜಾಕೆಟ್‌ಗಳನ್ನು ಧರಿಸಿರಲಿಲ್ಲ ಎಂದು ವರದಿಯಾಗಿದೆ. ಉಳಿದ ವಿದ್ಯಾರ್ಥಿಗಳ ಪತ್ತೆಗೆ ಶೋಧ ಕಾರ್ಯ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ(ಎನ್‌ಡಿಆರ್‌ಎಫ್) ಮತ್ತು ಅಗ್ನಿಶಾಮಕ ಸಿಬ್ಬಂದಿ ರಕ್ಷಣಾ ಕಾರ್ಯ ನಡೆಸುತ್ತಿದ್ದು, ಹಲವು ಹಿರಿಯ ಅಧಿಕಾರಿಗಳು ಸ್ಥಳದಲ್ಲಿದ್ದಾರೆ ಎಂದು ಗುಜರಾತ್ ಶಿಕ್ಷಣ ಸಚಿವ ಕುಬೇರ್ ದಿಂಡೋರ್ ತಿಳಿಸಿದ್ದಾರೆ.

ದೋಣಿಯಲ್ಲಿ 27 ಮಕ್ಕಳಿದ್ದರು, ನಾವು ಇತರರನ್ನು ಪತ್ತೆ ಹಚ್ಚಲು ಮತ್ತು ರಕ್ಷಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ವಡೋದರಾ ಜಿಲ್ಲಾಧಿಕಾರಿ ಎಬಿ ಗೋರ್ ಹೇಳಿದ್ದಾರೆ. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ದುರಂತದ ನಂತರ ಸಂತಾಪ ಸೂಚಿಸಿದ್ದು, ಪ್ರಾಣ ಕಳೆದುಕೊಂಡ ಅಮಾಯಕ ಮಕ್ಕಳ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಈ ದುಃಖದ ಸಮಯದಲ್ಲಿ ಅವರ ಕುಟುಂಬಕ್ಕೆ ನನ್ನ ಆಳವಾದ ಸಂತಾಪಗಳು. ದೇವರು ಅವರಿಗೆ ದುಃಖವನ್ನು ಸಹಿಸುವ ಶಕ್ತಿ ನೀಡಲಿ ಎಂದು ಟ್ವೀಟ್ ಮಾಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ಎಲ್ಲಾ ಮದುವೆಗಳಲ್ಲಿ ವಧು ಎಡಗಡೆಗೆ ಮತ್ತು ವರ ಬಲಗಡೆಗೆ ಯಾಕೆ ಕೂತಿರುತ್ತಾರೆ?"

ಗಂಡ : "ಲಾಭ ಮತ್ತು ನಷ್ಟದ ಸ್ಟೇಟ್‌ಮೆಂಟ್ ಅಕೌಂಟ್‌ನ ಪ್ರಕಾರ ಎಲ್ಲಾ ಆದಾಯ ಬಲ ಬದಿಗೆ ಇರುತ್ತದೆ ಮತ್ತು ಖರ್ಚುಗಳು ಎಡ ಬದಿಗೆ ಇರುತ್ತದೆ ಅದಕ್ಕೆ!"

ಮೈಸೂರು ಮಿತ್ರ

ಶುಕ್ರವಾರ, 19 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಲ್ಲಾ ಮಹಾನ್ ಸಾಧನೆಗಳು ದಿಢೀರ್ ಎಂದು ಆಗುವುದಿಲ್ಲ. ಸಾಕಷ್ಟು ಸಮಯ ಬೇಕಾಗುತ್ತದೆ. ತಾಳ್ಮೆ ಮುಖ್ಯ – ಮಾಯಾ ಏಂಜೆಲೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಗ ಸಣ್ಣವನಾದರೂ, ಮಾತು ಸಣ್ಣದಲ್ಲ

ನಿಮ್ಮ ಪತ್ರಗಳು

ಮೈಸೂರಿಗೆ ತುರ್ತಾಗಿ ಫ್ಲೈ ಓವರ್ ನಿರ್ಮಾಣ ಅಗತ್ಯ

ಮಾನ್ಯರೆ,

ಮೈಸೂರು ನಗರವು ದಿನದಿಂದ ದಿನಕ್ಕೆ ಅತೀ ಶೀಘ್ರ ಗತಿಯಲ್ಲಿ ಬೆಳೆಯುತ್ತಿದ್ದು, ಸರಿ ಸುಮಾರು 20 ಲಕ್ಷ ಜನಸಂಖ್ಯೆ ಇರಬಹುದು ಎಂದು ಅಂದಾಜಿಸಲಾಗುತ್ತಿದೆ. ಮೈಸೂರು ನಗರ ಮೊದಲೇ ಪ್ರವಾಸೋದ್ಯಮ ಕೇಂದ್ರವೂ ಆಗಿರುವುದರಿಂದ ಮೈಸೂರು ನಗರಕ್ಕೆ ಪ್ರತಿ ದಿನ ಸಾವಿರಾರು ವಾಹನಗಳು ಬಂದು ಹೋಗುತ್ತವೆ. ಮೈಸೂರನ್ನು ಪ್ರವೇಶಿಸುವ ಮಣಿಪಾಲ ಆಸ್ಪತ್ರೆಯ ಬಳಿ ಕಿಲೋಮೀಟರ್ ಉದ್ದದ ವಾಹನಗಳ ನಿಲುಗಡೆ ಇರುತ್ತದೆ. ಕೆಲವು ದಿನಗಳಲ್ಲಿ ಬೆಂಗಳೂರಿನಿಂದ–ಮೈಸೂರು ತಲುಪಲು 2 ಗಂಟೆಯಾದರೇ, ಈ ಸಿಗ್ನಲ್ ಪಾಸ್ ಆಗಲು ಒಂದು ಗಂಟೆ ಕಾಯಬೇಕಾದ ಪರಿಸ್ಥಿತಿ ಇದೆ. ಇದೇ ಪರಿಸ್ಥಿತಿ ನಂಜನಗೂಡು ರಸ್ತೆಯ ಜೆಎಸ್‌ಎಸ್ ಕಾಲೇಜು ಬಳಿ ಮತ್ತು ಕೆಆರ್‌ಎಸ್ ರಸ್ತೆಯ ರಿಂಗ್ ರೋಡ್ ಬಳಿ ಹೋಟೆಲ್ ರಾಯಲ್ ಇನ್ ಹತ್ತಿರ ಕಂಡು ಬರುತ್ತದೆ. ಮೈಸೂರಿಗೆ ತುರ್ತಾಗಿ ಈ ಮೂರು ಕಡೆ ಫ್ಲೈ ಓವರ್ (ಮೇಲು ಸೇತುವೆ) ನಿರ್ಮಾಣವಾಗಲೇಬೇಕು. ಇಲ್ಲದಿದ್ದರೆ ಮೈಸೂರಿಗೆ ಬಂದು– ಹೋಗುವವರಿಗೆ ಗಂಟೆಗಟ್ಟಲೆ ಸಮಯ ವ್ಯರ್ಥವಾಗುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಸಮಾವೇಶಕ್ಕೆ ಭೀಮ ನಾಮ ಬೇಡ

ಮಾನ್ಯರೆ,

ಮಳೆ ಬಂದಾಗ ಮನೆ ಮೇಲೆ ಜ್ಞಾನ, ಅಂಬಲಿ ಕುಡಿಯುವಾಗ ಮೀಸೆ ಮೇಲೆ ಜ್ಞಾನ ಎನ್ನುವ ಗಾದೆ ಮಾತಿನಂತೆ ಬಿಜೆಪಿ ನಾಯಕರಿಗೆ ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆ ಅಂಬೇಡ್ಕರ್ ನಾಮಬಲ ಮತ್ತು ದಲಿತ ಸಮುದಾಯ ನೆನಪಿಗೆ ಬಂದಂತೆ ಕಾಣುತ್ತಿದೆ. ಬಿಜೆಪಿ ರಾಜ್ಯಾಧ್ಯಕ್ಷರು ಭೀಮ ಸಮಾವೇಶ ನಡೆಸಲು ಸಿದ್ಧತೆ ಮಾಡಿಕೊಳ್ಳಲು ಪದಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಪಾಪ ರಾಜ್ಯ ವಿಧಾನಸಭಾ ಚುನಾವಣಾ ಸೋಲು ಇವರಿಗೆ ಚೆನ್ನಾಗಿ ಅರ್ಥವಾದಂತಿದೆ. ವಿವಿಧ ರಾಜ್ಯಗಳಲ್ಲಿ ದಲಿತರ ಕಗ್ಗೊಲೆಯಾದಾಗ, ದಲಿತ ಮಹಿಳೆಯರ ಮೇಲೆ ಅತ್ಯಾಚಾರವಾದಾಗ ಚಕಾರ ಎತ್ತದ ಬಿಜೆಪಿ ನಾಯಕರು ಈಗ ಭೀಮ ಸಮಾವೇಶ ಮಾಡಲು ಹೊರಟಿರುವುದು ಎಷ್ಟು ಸರಿ? ಒಬ್ಬ ಕರಸೇವಕನ ಬಂಧನವಾದ ತಕ್ಷಣ ರಾಜ್ಯಾದ್ಯಂತ ಪ್ರತಿಭಟಿಸಿದ ಬಿಜೆಪಿ, ದಲಿತರ ಕಗ್ಗೊಲೆಯಾದಾಗ, ಮಹಿಳೆಯರ ಅತ್ಯಾಚಾರವಾದಾಗ ಏಕೆ ಪ್ರತಿಭಟಿಸಲಿಲ್ಲ. ಕೇಂದ್ರ ಸರ್ಕಾರ ದಲಿತರಿಗೆ ವಿಶೇಷ ಉದ್ಯೋಗ ಕಲ್ಪಿಸಿದೆಯೇ, ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಿದೆಯೇ, ಭೂರಹಿತರಿಗೆ ಭೂಮಿ ನೀಡಿದೆಯೇ, ದಲಿತ ಕಾಲೋನಿಗಳ ಅಭಿವೃದ್ಧಿ ಮಾಡಿದೆಯೇ, ಏನೂ ಮಾಡದವರು ಓಟಿಗಾಗಿ ಅಂಬೇಡ್ಕರ್ ನಾಮಬಲದಿಂದ ಮತ ಸೆಳೆಯಲು ಹೊರಟಿರುವುದು ಸರಿಯಲ್ಲ. ಒಂದೆಡೆ ಯಡಿಯೂರಪ್ಪನವರು ರಾಮರಾಜ್ಯವಾಗುತ್ತಿದೆ ಎನ್ನುತ್ತಿದ್ದಾರೆ. ಇತ್ತ ವಿಜಯೇಂದ್ರ ಅವರು ಭೀಮ ಸಮಾವೇಶ ಮಾಡುತ್ತೇವೆ ಎನ್ನುತ್ತಾರೆ. ಸಮಾವೇಶ ಮಾಡಿ ದಲಿತ ಸಮಾವೇಶ ಅಂತನೋ, ಇನ್ನಾವುದೋ ಹೆಸರಿನಲ್ಲಿ ಮಾಡಿ ಆದರೆ ಭೀಮ ನಾಮ ದುರ್ಬಳಕೆ ಬೇಡ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ

ಸಮಗ್ರ ತನಿಖೆಯಾಗಲಿ

ಮಾನ್ಯರೆ,

ಮೈಸೂರು ಜಿಲ್ಲೆ ನಂಜನಗೂಡು ತಾ. ಹುಲ್ಲಹಳ್ಳಿ ನಾಡಕಚೇರಿಯ ಡಾಟಾ ಎಂಟ್ರಿ ಆಪರೇಟರ್ ಶಿವಕುಮಾರ್ ಉಪತಹಸೀಲ್ದಾರ್ ಅವರ ಕಿರುಕುಳಕ್ಕೆ ಬೇಸತ್ತು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿಯಾಗಿದೆ.

ಈ ಸಂಬಂಧ ಸದರಿ ಉಪ ತಹಸೀಲ್ದಾರ್ ಅವರನ್ನು ಪ್ರಾದೇಶಿಕ ಆಯುಕ್ತರು ಅಮಾನತ್ತು ಮಾಡಿರುವುದಾಗಿ ವರದಿ (ಮೈಸೂರು ಮಿತ್ರ ,9.1.24.)ಯಾಗಿದೆ. ಕಳೆದ ಏಪ್ರಿಲ್‌ನಿಂದಲೂ ವೇತನ ಆಗದೆ ಇರುವುದರಿಂದ ಜೀವನ ನಡೆಸುವುದು ಕಷ್ಟವಾಗಿದೆ ಎಂದು ಕೂಡ ಡೆತ್‌ನೋಟ್‌ನಲ್ಲಿ ಬರೆದಿರುವುದಾಗಿ ವರದಿಯಾಗಿದೆ. ಇದು ಸರ್ಕಾರಿ ವ್ಯವಸ್ಥೆಯನ್ನು ಕೂಡ ತೆರೆದಿಟ್ಟಿದೆ.

ವೇತನ ಆಗದೇ ಇರುವುದು ಹಾಗೂ ಅಧಿಕಾರಿಯ ಕಿರುಕುಳ ಸಂಬಂಧ ಸದರಿ ನೌಕರರು ಮೇಲಧಿಕಾರಿಗಳಾದ ನಂಜನಗೂಡು ತಹಸೀಲ್ದಾರ್, ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಈವರೆವಿಗೂ ದೂರು ನೀಡಿರಲಿಲ್ಲವೇ? ಒಂದು ವೇಳೆ ದೂರು ನೀಡಿದ್ದ ಪಕ್ಷದಲ್ಲಿ ಅವರಿಂದ ಯಾವ ಉತ್ತರ ದೊರಕಿತ್ತು. ಉಪ ತಹಸೀಲ್ದಾರ್ ಅವರು ಯಾವ ಕಾರಣದ ಮೇಲೆ ಅವರಿಗೆ ವೇತನ ತಡೆ ಹಿಡಿಯಲು ಕಾರಣರಾಗಿದ್ದರು. ಅಥವಾ ಯಾವುದಾದರು ಹಣ ದುರುಪಯೋಗದ ಪ್ರಕರಣ ಇತ್ತೇ ಎನ್ನುವುದು ಕೂಡ ತಿಳಿಯಬೇಕು.

ಈ ಎಲ್ಲಾ ವಿದ್ಯಮಾನಗಳು ಮೇಲಧಿಕಾರಿಗಳ ಗಮನಕ್ಕೆ ಬಂದಿರ ಲಿಲ್ಲವೇ? ಗಮನಕ್ಕೆ ಬಂದಿದ್ದರೆ ಯಾವ ಕ್ರಮ ವಹಿಸಿದ್ದರು? ಗುತ್ತಿಗೆ ಪಡೆದಿದ್ದ ಏಜನ್ಸಿಯವರು ಏಪ್ರಿಲ್‌ನಿಂದಲೂ ವೇತನ ನೀಡದೆ ಇದ್ದುದೇಕೆ? ಈಗ ಪರಿಹಾರ ನೀಡಿದರೆ ಪ್ರಯೋಜನವೇನು? ಈ ಬಗ್ಗೆ ಸಮಗ್ರ ತನಿಖೆಯಾಗಲಿ.

–ಮುಳ್ಳೂರು ಪ್ರಕಾಶ್, ಮೈಸೂರು.

ಭಾರತ್ ನ್ಯಾಯ್ ಯಾತ್ರೆ – ಒಂದು ಅಣಕು

ಮಾನ್ಯರೇ,

"ಭಾರತ್ ನ್ಯಾಯ್ ಯಾತ್ರೆ"– ಭಾರತವನ್ನಾಳಿದ ಮೊಘಲರು, ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಬ್ರಿಟೀಷರ ಜೊತೆ ಜೊತೆಗೆ ಕಾಂಗ್ರೆಸ್ಸಿಗರ ದಾಸ್ಯದಿಂದ ಮುಕ್ತಿ ಹೊಂದಿದ ಭರತ ಭೂಮಿ ಇಂದು ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಗತವೈಭವಕ್ಕೆ ಮರಳುವಾಗ ಭಾರತೀಯರಿಂದ ತಿರಸ್ಕೃತಗೊಂಡ ಕಾಂಗ್ರೆಸ್ ಪಕ್ಷದಿಂದ ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತದ "ಭಾರತಕ್ಕೆ ನ್ಯಾಯ ಸಿಕ್ಕಿದೆ" ಎಂಬ ಯಾತ್ರೆ. ಬಹು ಸಂಖ್ಯಾತರಾದ ಹಿಂದೂಗಳ ಭಾವನೆಗಳಿಗೆ ಗೌರವ ಕೊಡದೆ, ಬಹುಸಂಖ್ಯಾತ ಹಿಂದೂಗಳ ಆರಾಧ್ಯ ದೈವ ಶ್ರೀರಾಮನ ಅಸ್ತಿತ್ವವನ್ನು ಪ್ರಶ್ನೆ ಮಾಡಿ, ನ್ಯಾಯಾಲಯದಲ್ಲಿ ಕಪಿಲ್ ಸಿಬಲ್‌ರಂತಹ ವಕೀಲರನ್ನು ನೇಮಿಸಿ ಇನ್ನಿಲ್ಲದಂತಹ ಅಡಚಣೆಗಳನ್ನು ಮಾಡಿಯೂ ಕೂಡ ಭಾರತದ ಸರ್ವೋಚ್ಚ ನ್ಯಾಯಾಲಯ ಶ್ರೀರಾಮನ ಜನ್ಮಸ್ಥಳದ ಬಗ್ಗೆ ಖಾತ್ರಿಪಡಿಸಿಕೊಂಡು ಸೂಕ್ತ ತೀರ್ಪನ್ನು ನೀಡಿದರ ಪರಿಣಾಮವಾಗಿ ಇಂದು ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಶ್ರೀರಾಮನ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಆಗುತ್ತಿದೆ. ಈ ಒಂದು ಅಮೃತ ಘಳಿಗೆಯಲ್ಲಿ ಗತವೈಭವಕ್ಕೆ ಮರಳುತ್ತಿರುವ ಅಯೋಧ್ಯೆಗೆ ಕೊನೆಗೂ ನ್ಯಾಯ ಸಿಕ್ಕ ಸಂದರ್ಭದಲ್ಲಿ ಕಾಂಗ್ರೆಸ್ಸಿಗರು ಭಾರತ್ ನ್ಯಾಯ್ ಯಾತ್ರೆ ಹೊರಟಿರುವುದು ಕಾಕತಾಳೀಯವಾಗಿದ್ದರು ಇದು ಸತ್ಯ. ಬಹುಸಂಖ್ಯಾತ ಹಿಂದೂಗಳಿಗೆ ಶ್ರೀ ರಾಮನ ಜನ್ಮಭೂಮಿ ಎಂದರೆ ಭಾರತ ಎಂಬ ನಂಬಿಕೆ ಇದೆ.

–ಕಿರಣ್ ಜೈರಾಮ್ ಗೌಡ, ಜಿಲ್ಲಾ ಕಾರ್ಯದರ್ಶಿ, ಬಿಜೆಪಿ, ಮೈಸೂರು.



ಜಿ.ಬಿ. ಅನಂತಶಯನ
ಸಲಹಾ ಸಂಪಾದಕರು,
ಶಕ್ತಿ ದಿನಪತ್ರಿಕೆ, ಮಡಿಕೇರಿ

ವಿಚಾರ ಲಹರಿ

ಸೇವೆಯ ಜೊತೆಗೆ ತ್ಯಾಗವಿದ್ದರೆ ಸಮಾಜ ಸೇವೆ

ಒಂದು ಸಮಾರಂಭ ನಡೆಯುತ್ತಿತ್ತು. ಅಂದಿನ ವಿಶೇಷ ಎಂದರೆ ಸಮಾಜ ಸೇವಕರಿಗೆ ಸನ್ಮಾನ!

ಸಮಾಜ ಸೇವೆ ಎಂದರೇನು? ವೃದ್ಧಾಶ್ರಮದಲ್ಲಿ ಕಂಬಳಿ ಹಂಚುವುದು, ಆಸ್ಪತ್ರೆಯಲ್ಲಿ ಹಣ್ಣು ನೀಡುವುದು, ಶಾಲಾ ಮಕ್ಕಳಿಗೆ ಪುಸ್ತಕ ಕೊಡುವುದು, ಬಸ್ ತಂಗುದಾಣ ನಿರ್ಮಿಸುವುದು ಇದು ಮಾತ್ರ ಸಮಾಜ ಸೇವೆಯೇ?

ಇಂದು ಶೇಕಡ ತೊಂಬತ್ತು ಮಂದಿಗೆ ಸಮಾಜ ಸೇವೆಯ ನಿಜವಾದ ಉದ್ದೇಶದ ಅರಿವಿಲ್ಲ. ಹಾಗಾಗಿ ಮೇಲಿನ ಅಲ್ಪ, ಸ್ವಲ್ಪ ನೀಡಿಕೆಯೇ ದೊಡ್ಡ ಸೇವೆ ಎಂಬ ಭಾವನೆ ಹಲವರಲ್ಲಿದೆ. ಒಬ್ಬನಿಗೆ ತಿನ್ನಲು ಒಂದು ಹಣ್ಣು ನೀಡುವುದಕ್ಕಿಂತ, ಆತ ಹಣ್ಣಿನ ಗಿಡ ಬೆಳೆಯುವುದನ್ನು ಕಲಿಸಿದರೆ ಮುಂದೆ ಅದು ಅವನ ಬಾಳುವೆಗೊಂದು ಮಾರ್ಗವಾದಾತು. ಸಮಾಜ ಸೇವೆ ನಮಗೆ ಹೆಸರು ಬರಲೋಸ್ಕರ ಮಾಡಬಾರದು.

ಅದು ನಿಸ್ವಾರ್ಥ ಉದ್ದೇಶದಿಂದ ಕೂಡಿರಬೇಕು. 'ಜನಸೇವೆಯೆ ಜನಾರ್ಧನ ಸೇವೆ' ಎಂಬ ಬರಹ ವಿಧಾನಸೌಧದ ಕಟ್ಟಡ ದೆದುರು ಕಾಣಬರುತ್ತದೆ. ಬ್ರಹ್ಮಾಂಡದ ಇರುವಿಕೆ, ಪ್ರಕೃತಿ ಪುರುಷನ ಚಲನ ವಲನಕ್ಕೆ ಸರ್ವಾಂತರ್ಯಾಮಿ ಶಕ್ತಿಯೇ ಕಾರಣ ಎಂದು ಪೂರ್ವಜರು ನಂಬಿದ್ದರು. ಆ ಚೈತನ್ಯವನ್ನು ರಾಮ, ಕೃಷ್ಣ, ಜನಾರ್ಧನ, ಅಲ್ಲಾಹು, ಜೀಸಸ್ ಇತ್ಯಾದಿಯಾಗಿ ಅವರವರ ಅನುಭವಕ್ಕೆ ತಕ್ಕಂತೆ ಕರೆದರು. ಆದರೆ, ಈ ಅಗೋಚರ ಚೈತನ್ಯಕ್ಕೆ ಕೃತಜ್ಞತೆ ಸೂಚಿಸಲು, ಸ್ಪರ್ಷಿಸಲು, ನಮಸ್ಕರಿಸಲು ಅಸಾಧ್ಯವಾದಾಗ ದೇವರನ್ನು ಮಾನವರಲ್ಲಿ ಕಾಣು, ಜನ ಸೇವೆಯೇ ಜನಾರ್ಧನ ಸೇವೆ ಎಂದು ಅರಿತುರಾಡಿದರು.

ತ್ಯಾಗ ಮತ್ತು ಸೇವೆ ನಮ್ಮ ಸಂಸ್ಕೃತಿಯ ಅವಳಿ ಆದರ್ಶಗಳು, ಅವನ್ನು ಪೋಷಿಸಿದಷ್ಟು, ಪಾಲಿಸಿದಷ್ಟು ರಾಷ್ಟ್ರೀಯ ಉತ್ಥಾನದ ಸೋಪಾನಗಳು ಸುರಕ್ಷಿತವಾಗುತ್ತವೆ ಎಂದು ಸ್ವಾಮಿ ವಿವೇಕಾನಂದ ಹೇಳುತ್ತಾರೆ. ಲೋಕ ಸೇವೆ ಎಂಬುದು ಸಾಧಕನ



ಅವಿಭಾಜ್ಯ ಅಂಗವಾಗಬೇಕು ಎಂದು ಭಗವದ್ಗೀತೆ ಸಾರುತ್ತದೆ. ದೇವರ ಮೇಲಿನ ಪ್ರೀತಿಯಿಂದ ಅನಾಥರು, ನಿರ್ಗತಿಕರ ಸಹಾಯಕ್ಕೆ ಮುಂದಾಗಲು ಇಸ್ಲಾಂ ಹೇಳುತ್ತದೆ. ಕ್ರೈಸ್ತ ಧರ್ಮದ ಮೂಲ ಮಂತ್ರವೇ ಸೇವೆ. ಸೇವೆ ಹೀಗೇ ಇರಬೇಕೆಂದಿಲ್ಲ. ಧನ ಬಲ ಉಳ್ಳವರು, ಹೃದಯ ವೈಶಾಲ್ಯತೆ ಉಳ್ಳವರು ಆಸ್ಪತ್ರೆಗಳನ್ನು ನಿರ್ಮಿಸುತ್ತಾರೆ. ಅನಾಥಾಶ್ರಮ, ವೃದ್ಧಾಶ್ರಮ ಕಟ್ಟುತ್ತಾರೆ, ಶಾಲಾ–ಕಾಲೇಜುಗಳನ್ನು ನಿರ್ಮಿಸಿ ಹಲವರ ಭವಿಷ್ಯ ರೂಪಿಸುತ್ತಾರೆ. ಜೀವನದ ಸಂಜೆಗಳನ್ನು ನೆಮ್ಮದಿಯಿಂದ ಕಳೆಯಲು ಅನುವು ಮಾಡುತ್ತಾರೆ, ಇದು ಪುಣ್ಯ ಕಾರ್ಯ. ಹಾಗೆಂದು ಹಣವಿದ್ದರೆ ಮಾತ್ರ ಸೇವೆ ಮಾಡಲು ಸಾಧ್ಯವೇ? ಹಾಗೇನೂ ಇಲ್ಲ. ಸಮಾಜದಲ್ಲಿ ದೇಶಭಕ್ತಿ ಮೂಡಿಸುವುದು ಸೇವೆ, ಧರ್ಮ ಸಂಸ್ಕೃತಿಯ ಜ್ಞಾನ ನೀಡುವುದು ಸೇವೆ, ಏಕತೆಗಾಗಿ ಶ್ರಮಿಸುವುದು ಸೇವೆ, ತನ್ನ ಜ್ಞಾನವನ್ನು ಇತರರಿಗೆ ಹಂಚುವುದು ಸೇವೆ, ನಾಲ್ಕು ಮಂದಿಯ ಉಪಯೋಗಕ್ಕಾಗುವ ಗಿಡ–ಮರಗಳಿಗೆ, ನೀರು–ಗೊಬ್ಬರ ಉಣಿಸಿ ಪೋಷಿಸುವುದು ಸೇವೆಯಾಗುತ್ತದೆ. ಕೊನೆಗೆ ಕುಟುಂಬಕ್ಕೆ, ಸಮಾಜಕ್ಕೆ ಹೊರೆ ಆಗದಂತೆ ತನ್ನ ಕಾಲ ಮೇಲೆ ತಾನು ನಿಲ್ಲುವುದು, ಆರೋಗ್ಯವಂತನಾಗಿ ಬಾಳುವುದು ಕೂಡಾ ಸೇವೆಯೆ. ಒಮ್ಮೆ ಟಿ.ಪಿ. ಕೈಲಾಸಂ ಅವರು ಬೇಕರಿ ಒಂದಕ್ಕೆ ತೆರಳುತ್ತಾರೆ. ಆ ಬೇಕರಿ ಪೂರ್ತಿ ಕಸ–ಕಡ್ಡಿ ತುಂಬಿರುತ್ತದೆ. ಬೇಕರಿಯ ಹೆಸರು "ನಿರ್ಮಲ ಬೇಕರಿ", ಕೈಲಾಸಂ ಹೇಳುತ್ತಾರೆ. ಬೋರ್ಡ್‌ನಲ್ಲಿ ನಿರ್ಮಲ ಅಂತ ಬರ್ಸಿ ಬಡ್ಕೊಂಡ್ರೆ ಬಂತೇ ಭಾಗ್ಯ ಮೊದ್ಲು ನಿರ್ಮಲವಾಗಿಟ್ಕೊಳ್ರೀ ನಿಮ್ಮ ಈ ಹಾಳ್ ಬೇಕ್ರೀನಾ ಅಂತಾರೆ. ಮನಸ್ಸು ನಿರ್ಮಲವಾಗಿದ್ದಲ್ಲಿ, ಮನೆ, ಮಠ, ಸಮಾಜ

> "ಧನ ಬಲ ಉಳ್ಳವರು, ಹೃದಯ ವೈಶಾಲ್ಯತೆ ಉಳ್ಳವರು ಆಸ್ಪತ್ರೆಗಳನ್ನು ನಿರ್ಮಿಸುತ್ತಾರೆ. ಅನಾಥಾಶ್ರಮ, ವೃದ್ಧಾಶ್ರಮ ಕಟ್ಟುತ್ತಾರೆ, ಶಾಲಾ–ಕಾಲೇಜುಗಳನ್ನು ನಿರ್ಮಿಸಿ ಹಲವರ ಭವಿಷ್ಯ ರೂಪಿಸುತ್ತಾರೆ. ಜೀವನದ ಸಂಜೆಗಳನ್ನು ನೆಮ್ಮದಿಯಿಂದ ಕಳೆಯಲು ಅನುವು ಮಾಡುತ್ತಾರೆ, ಇದು ಪುಣ್ಯ ಕಾರ್ಯ. ಹಾಗೆಂದು ಹಣವಿದ್ದರೆ ಮಾತ್ರ ಸೇವೆ ಮಾಡಲು ಸಾಧ್ಯವೇ? ಹಾಗೇನೂ ಇಲ್ಲ. ಸಮಾಜದಲ್ಲಿ ದೇಶಭಕ್ತಿ ಮೂಡಿಸುವುದು ಸೇವೆ, ಧರ್ಮ ಸಂಸ್ಕೃತಿಯ ಜ್ಞಾನ ನೀಡುವುದು ಸೇವೆ, ಏಕತೆಗಾಗಿ ಶ್ರಮಿಸುವುದು ಸೇವೆ, ತನ್ನ ಜ್ಞಾನವನ್ನು ಇತರರಿಗೆ ಹಂಚುವುದು ಸೇವೆ, ನಾಲ್ಕು ಮಂದಿಯ ಉಪಯೋಗಕ್ಕಾಗುವ ಗಿಡ–ಮರಗಳಿಗೆ, ನೀರು–ಗೊಬ್ಬರ ಉಣಿಸಿ ಪೋಷಿಸುವುದು ಸೇವೆಯಾಗುತ್ತದೆ.

ಎಲ್ಲೆಲ್ಲೂ ಶಾಂತಿ ನೆಮ್ಮದಿ ಸಾಧ್ಯ. ಮನ ನಿರ್ಮಲವಾಗಿ ಇರಬೇಕಾದಲ್ಲಿ ಪರಿಸರವನ್ನೂ ಶುಭ್ರವಾಗಿ ಇರಿಸಬೇಕು, ರಕ್ಷಿಸಬೇಕು. ಈ ಕಾಯಕದಲ್ಲಿ ತೊಡಗುವುದೂ ದೊಡ್ಡ ಮಟ್ಟಿನ ಸೇವೆಯೆ. ಸೇವೆಯ ಕುರಿತು ನೂರಾರು ದಾಸ ಪದಗಳಿವೆ. ಅವರ್ಯಾರೂ ಸೇವೆಯನ್ನು ಮಾಡುವಾತ ಮಹಾನ್ ವ್ಯಕ್ತಿ ಎನ್ನಲಿಲ್ಲ. ಬದಲು ದಾಸರ–ದಾಸನಾಗಿ ದಾಸೋಹಂ ಮಾಡು ಎನ್ನುತ್ತಾರೆ. ಸೇವೆ ಮಾಡಿ ಬೀಗುವುದಕ್ಕಿಂತ ಬಾಗಿ ನಿಲ್ಲುವುದು ಹೃದಯ ಶ್ರೀಮಂತಿಕೆಯ ಲಕ್ಷಣ. ಸೇವೆ ಮಾಡುವವನು – ಸೇವೆ ಸ್ವೀಕರಿಸಿದವನಿಗೆ ಕೃತಜ್ಞತೆ ಸಲ್ಲಿಸಬೇಕು ಎಂದು ವಿವೇಕಾನಂದರು ಹೇಳುತ್ತಾರೆ. ಪುನಿತ್ ರಾಜ್‌ಕುಮಾರ್, ಸಮಾಜದ ದೃಷ್ಟಿಯಲ್ಲಿ ಒಬ್ಬ ನಟನಾಗೇ ಕಾಣುತ್ತಿದ್ದರು. ಆದರೆ ಅವರ ಮರಣದ ಬಳಿಕ ಅವರು ಗುಟ್ಟಾಗಿ ಮಾಡುತ್ತಿದ್ದ ಅನನ್ಯ ಸೇವೆ ಬೆಳಕಿಗೆ ಬಂದಿತು. ಪದ್ಮಶ್ರೀ ಪ್ರಶಸ್ತಿಗೆ ಪಾತ್ರರಾದ ಹರೆಕಳ ಹಾಜಬ್ಬ, ಇವರ ದಿನದ ಸಂಪಾದನೆ 150 ರೂಪಾಯಿ. ಅವರಿಗೆ ಸ್ವಂತ ಜಾಗವಿಲ್ಲ, ಮನೆಯಿಲ್ಲ ಆದರೆ ಅವರು ಕಾಣುತ್ತಿದ್ದ ಕನಸೆಂದರೆ ಊರಿಗೊಂದು ಶಾಲೆ ತೆರೆಯಬೇಕು, ಊರ ಮಕ್ಕಳು ತನ್ನಂತೇ ಅನಕ್ಷರಸ್ಥರಾಗಿ ಸೊರಗಬಾರದು ಎಂದು. ಹಾಜಬ್ಬ ತನ್ನ ಸಂಪಾದನೆಯ ಹಣದಲ್ಲಿ ಅರ್ಧವನ್ನು ದಶಕಗಳಿಂದ ಕೂಡಿಟ್ಟು ಜಾಗ ಖರೀದಿ ಮಾಡುತ್ತಾರೆ. ಇತರರ ಸಹಕಾರವನ್ನು ಯಾಚಿಸಿ ಅಲ್ಲೊಂದು ಶಾಲೆ ನಿರ್ಮಾಣ ಮಾಡುತ್ತಾರೆ. ಪ್ರಾಥಮಿಕ ಶಾಲೆ ಪ್ರೌಢವಾಯಿತು, ಇದೀಗ ಪದವಿ ಪೂರ್ವ ಕಾಲೇಜಾಗಿ ಶಾಲೆ ಬದಲಾಗು ತ್ತಿದೆ. ಇದು ಒಬ್ಬ ಅನಕ್ಷರಸ್ಥನ ಅಮೋಘ ಅಕ್ಷರ ಸೇವೆ. ಕಾರ್ಕಳ ಜರಿಗುಡ್ಡೆ ಸಾಲು ಮರ ಎಂಬಲ್ಲಿ ಆಯಿಷಾಭಾನು ಎಂಬಾಕೆ ಅನಾಥಾಶ್ರಮ ಸ್ಥಾಪಿಸಿದ್ದಾರೆ. ಅಸ್ವಸ್ಥರ ಬಾಯಿಗೆ ತುತ್ತು ನೀಡುವುದು, ಆರೈಕೆ ಮಾಡುವುದೆ ಅಲ್ಲದೆ ಅಂತ್ಯ ಕಾಣುವವರನ್ನು ದಫನು ಮಾಡುವವರೆಗೆ ಆಯಿಷಾ ಅಪೂರ್ವ ಮಾನವೀಯ ಧರ್ಮ ಮೆರೆಯುತ್ತಾರೆ. ಆಯಿಷಾಗೆ ಜಾತಿ–ಮತ–ಧರ್ಮದ ಸೋಂಕಿಲ್ಲ. ವಿಜಯಪುರದಲ್ಲಿ ನೀರಿಗೆ ಬರ ಬಂದಿತ್ತು. ಪಾಟೀಲ ಎಂಬವರು ತನು–ಮನ ಸವೆಸಿ ನೀರಾವರಿ ಯೋಜನೆ ರೂಪಿಸಿ, ಊರಿಂದು ಹಸಿರಿನಿಂದ ಕಂಗೊಳಿಸುತ್ತಿದೆ. ಜನ ಅವರನ್ನು ಪರಮಾತ್ಮನಿಗೆ ಹೋಲಿಸುತ್ತಾರೆ. ವಿಶ್ವದಲ್ಲಿ ಸ್ವಾರ್ಥದ ಕೈಯ್ಯೇ ಮೇಲಾಗಿದೆಯೇ ಎಂದು ಅವಲೋಕಿಸುವಾಗ ಇಂತಹ ನಿಸ್ಪೃಹೀ ಆತ್ಮಗಳು, ನಿಸ್ವಾರ್ಥ ಮನ ಗಳು ನೂರಾರು ಎದುರಾಗುತ್ತವೆ. ಹತ್ತಾರು ಸಂಘ–ಸಂಸ್ಥೆಗಳು ಕಣ್ಣೆದುರು ಬರುತ್ತವೆ. ಲೋಕ ಹಿತಕ್ಕಾಗಿ ಶ್ರಮಿಸುವುದು ಎಲ್ಲ ಧರ್ಮಗಳ ಮೂಲವಾಗಿದೆ. ಅದಕ್ಕೆ ತಕ್ಕಂತೆ ಬಾಳುವುದು ಮಾನವನ ಧರ್ಮ ಮತ್ತು ಕರ್ತವ್ಯವಾಗಿದೆ. ಸೇವೆ ಎಂಬುದು ಭಗವಂತನಿಗೆ ನೀಡುವ 'ಕರ' ತೆರಿಗೆ ಎಂದು ವಿಶ್ವೇಶತೀರ್ಥರು ಹೇಳಿದ್ದರು. ಆ ಮಾತಿನಲ್ಲಿ ಅರ್ಥವಿದೆ.


ಗಣರಾಜ್ಯೋತ್ಸವಕ್ಕೆ ಕವಿ ಮಂಜುನಾಥ್ ದಂಪತಿಗೆ ಕೇಂದ್ರ ಸರ್ಕಾರ ಆಹ್ವಾನ

ಜೋಗುಳ ಪದ ರಚಿಸಿ ಪ್ರಧಾನಿ ಮೋದಿ ಮನ ಗೆದ್ದಿದ್ದ ಕೊಳ್ಳೇಗಾಲ ನಿವಾಸಿ

ಕೊಳ್ಳೇಗಾಲ, ಜ.18–ಪ್ರಧಾನಿ ನರೇಂದ್ರ ಮೋದಿ ಮನ ಮೆಚ್ಚುವಂತೆ ಜೋಗುಳ ಪದ ರಚಿಸಿದ್ದ ಕೊಳ್ಳೇಗಾಲದ ನಿವಾಸಿ, ಕವಿ ಬಾಳಗುಣಸೆ ಮಂಜುನಾಥ್ ದಂಪತಿಗೆ ಜ.26ರಂದು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುವಂತೆ ಕೇಂದ್ರ ಸರ್ಕಾರ ಆಹ್ವಾನ ನೀಡಿದೆ.

ಈಗಾಗಲೇ ಕೇಂದ್ರ ಸರ್ಕಾರ ಮಂಜುನಾಥ್ ದಂಪತಿಗೆ ಗಣರಾಜ್ಯೋತ್ಸವದಲ್ಲಿ ಭಾಗವಹಿಸಲು ಜ.24ರಂದು ದೆಹಲಿಗೆ ತೆರಳಲು ಮತ್ತು ಜ.29ರಂದು ವಾಪಸ್ಸಾಗಲು ವಿಮಾನ ಟಿಕೆಟ್ ಅನ್ನು ಬುಕ್ ಮಾಡಿದೆ. ಮಂಜುನಾಥ್ ಅವರು ಎಲ್‌ಐಸಿ ಪ್ರತಿನಿಧಿ ಹಾಗೂ ಕವಿಯಾಗಿ ಗುರುತಿಸಿಕೊಂಡಿದ್ದಾರೆ. ಕೇಂದ್ರ ಸರ್ಕಾರ 75ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ ಆನ್‌ಲೈನ್‌ನಲ್ಲಿ ರಂಗೋಲಿ, ದೇಶ ಭಕ್ತಿಗೀತೆ, ಲಾಲಿಹಾಡು ಸ್ಪರ್ಧೆಗಳನ್ನು ಯೋಜಿಸಿತ್ತು. ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮಂಜುನಾಥ್ ಜೋಗುಳದ ಹಾಡು ಬರೆದಿದ್ದರು.

ಈ ಸ್ಪರ್ಧೆಯಲ್ಲಿ ದೇಶದ 600ಕ್ಕೂ ಹೆಚ್ಚು ಜಿಲ್ಲೆಗಳಿಂದ ಯುವ ಕವಿಗಳು, ಬರಹಗಾರರು ಭಾಗವಹಿಸಿದ್ದರು. ಆದರೆ, ಮಂಜುನಾಥ್ ಜೋಗುಳದ ಹಾಡು ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿತ್ತು. ಈ ಹಾಡು ಪ್ರಧಾನಿ ನರೇಂದ್ರ ಮೋದಿ ಪ್ರಶಂಸೆಗೆ ಭಾಜನವಾಗಿತ್ತು. ಜೊತೆಗೆ 6 ಲಕ್ಷ ರೂ. ನಗದು ಬಹುಮಾನ ಲಭಿಸಿತ್ತು.



ಕವಿ ಮಂಜುನಾಥ್ ದಂಪತಿ

> "ಈಗ ಕೇಂದ್ರ ಸರ್ಕಾರವೇ ನನಗೆ ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನ ನೀಡಿದೆ. ಆದ್ದರಿಂದ ಪತ್ನಿಯೊಂದಿಗೆ ಜ.24ರಂದು ಬೆಳಗ್ಗೆ ತೆರಳಿ, ಜ.29ರಂದು ವಾಪಸ್ಸಾಗುತ್ತೇನೆ. ಕೇಂದ್ರ ಸರ್ಕಾರವೇ ನನಗೆ ಆಹ್ವಾನ ನೀಡಿ ವಿಮಾನದ ಟಿಕೆಟ್ ಅನ್ನು ಬುಕ್ ಮಾಡಿದ್ದು, ಈ ಪ್ರೀತಿಪೂರ್ವಕ ಆಹ್ವಾನ ನನಗೆ ಸಂತಸ ಉಂಟುಮಾಡಿದೆ.
>
> –ಬಾಳಗುಣಸೆ ಮಂಜುನಾಥ್, ಕವಿ, ಬರಹಗಾರ

ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕನ್ನಡದ ಕವಿ ಬರೆದಿರುವ ಲೋರಿ ಹಾಡು (ಲಾಲಿ ಹಾಡು) ನನ್ನ ಗಮನ ಸೆಳೆದಿದೆ. ನಾನು ಈ ಹಾಡು ಕೇಳಿದ್ದೇನೆ. ನೀವು ಕೇಳಿ ಎಂದು ಪ್ರಸ್ತಾಪಿಸಿದ್ದರು. ಜೊತೆಗೆ ಈ ಹಾಡಿಗೆ ಮನ್ ಕಿ ಬಾತ್‌ನಲ್ಲೇ ಯುವ ಹಾಡುಗಾರರು ಧ್ವನಿ ನೀಡಿ ಗಮನ ಸೆಳೆದಿದ್ದರು.

ವಿದ್ಯುತ್ ವ್ಯತ್ಯಯ

ಮೈಸೂರು, ಜ.18–ಜ.19ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ. ಜೆ.ಎಸ್.ಎಸ್ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದೆ.

ಆದ್ದರಿಂದ ನಾಡನಹಳ್ಳಿ, ಪ್ರಕೃತಿ ಬಡಾವಣೆ, ಜೆ.ಎಸ್.ಎಸ್. ಬಡಾವಣೆ 2ನೇ ಹಂತ, ಪೊಲೀಸ್ ಬಡಾವಣೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಶಾಂತವೇರಿ ಗೋಪಾಲಗೌಡ ನಗರ, ಯಾಂದಹಳ್ಳಿ, ವಸಂತನಗರ, ಬನ್ನೂರು ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದ್ದು, ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ನ.ರಾ.ಮೊಹಲ್ಲಾ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಓಟಕ್ಕೆ ಕಡಿವಾಣ ಹಾಕಲು ಲೋಕಸಭಾ ಕಣಕ್ಕೆ ಕುಮಾರಸ್ವಾಮಿ ಇಳಿಸಲು ಬಿಜೆಪಿ ನಿರ್ಧಾರ

ಬೆಂಗಳೂರು, ಜ.18(ಕೆಎಂಶಿ)– ಕರ್ನಾಟಕ ಕಾಂಗ್ರೆಸ್‌ನ ಓಟಕ್ಕೆ ಕಡಿವಾಣ ಹಾಕಲು ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಯುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸಲಹೆ ನೀಡಿದ್ದಾರೆ.

ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ದೆಹಲಿಯಲ್ಲಿ ಈ ನಾಯಕರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದ ಸಂದರ್ಭದಲ್ಲಿ ಅಮಿತ್ ಷಾ, ನಾಲ್ಕು ಕ್ಷೇತ್ರಗಳನ್ನು ಹೆಸರಿಸಿ, ಇವುಗಳ ಪೈಕಿ ಒಂದರಲ್ಲಿ ಕಣಕ್ಕಿಳಿಯುವಂತೆ ಹೇಳಿದ್ದಾರೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಬಿಜೆಪಿ ನಡೆಸಿರುವ ಚುನಾವಣಾ ಪೂರ್ವ ಸಮೀಕ್ಷೆಯನ್ನು ಮುಂದಿಟ್ಟುಕೊಂಡು ಚರ್ಚೆ ಮಾಡಿರುವ ನಾಯಕರು ಕೆಲವು ಕ್ಷೇತ್ರಗಳಲ್ಲಿ ವರ್ಚಸ್ವಿ ಮತ್ತು ಪ್ರಭಾವಿ ನಾಯಕರನ್ನು ಕಣಕ್ಕಿಳಿಸುವ ಬಗ್ಗೆಯೂ ತೀರ್ಮಾನ ಕೈಗೊಂಡಿದ್ದಾರೆ.

28 ಕ್ಷೇತ್ರಗಳ ಪೈಕಿ ಜೆಡಿಎಸ್‌ಗೆ ಹಾಸನ, ಮಂಡ್ಯ, ತುಮಕೂರು ಹಾಗೂ ಕೋಲಾರ ಕ್ಷೇತ್ರಗಳನ್ನು ನೀಡಿರುವ ಮುಖಂಡರು ಚಿಕ್ಕಬಳ್ಳಾಪುರ ಇಲ್ಲವೇ ಬೆಂಗಳೂರು ಗ್ರಾಮಾಂತರ ಕೊನೆ ಗಳಿಗೆಯಲ್ಲಿ ಈ ಪಕ್ಷಕ್ಕೆ ದಕ್ಕುವ ಸಾಧ್ಯತೆ ಇದೆ.

ಕರ್ನಾಟಕದಲ್ಲಿ ಗೆಲುವೇ ಮಾನದಂಡ, ಅದನ್ನು ಆಧಾರವಾಗಿಟ್ಟುಕೊಂಡೇ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬಗ್ಗೆ ತೀರ್ಮಾನ ಕೈಗೊಂಡಿದ್ದಾರೆ. ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ನಂತರ ದೆಹಲಿಯಲ್ಲಿ ನಡೆಯುವ ಸಮಾರಂಭದಲ್ಲಿ ಜೆಡಿಎಸ್ ಅಧಿಕೃತವಾಗಿ ಎನ್‌ಡಿಎ ಮೈತ್ರಿಕೂಟ ಸೇರಲಿದೆ.

ಅಂದಿನ ಸಮಾರಂಭದಲ್ಲೇ ಕರ್ನಾಟಕದಲ್ಲಿ ಸೀಟು ಹಂಚಿಕೆ ಹಾಗೂ ಯಾರಿಗೆ ಯಾವ ಕ್ಷೇತ್ರ ಎಂಬ ಪಟ್ಟಿಯೂ ಹೊರ ಬೀಳಲಿದೆ. ಕೇಂದ್ರ ನಾಯಕರೊಂದಿಗೆ ಚರ್ಚೆ ನಡೆಸಿದ ನಂತರ ಇಂದು ದೆಹಲಿಯಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಕುಮಾರಸ್ವಾಮಿ, ಕರ್ನಾಟಕದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಬಲಪಡಿಸಿ ಎಲ್ಲಾ 28 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲುವುದೇ



ಮುಂದಿನ ಗುರಿ ಎಂದರು.

ಬಿಜೆಪಿ ಗುರಿಯೂ ಇದೇ ಆಗಿದೆ, ರಾಜ್ಯಕ್ಕೆ ಒಳ್ಳೆಯದಾಗಬೇಕು ಎಂಬ ಏಕೈಕ ಉದ್ದೇಶದಿಂದ ಎನ್‌ಡಿಎ ಮೈತ್ರಿಕೂಟವನ್ನು ಜೆಡಿಎಸ್ ಸೇರಿದೆ ಎಂದರು.

ರಾಜ್ಯದ ಸ್ಥಿತಿಗತಿ, ಕ್ಷೇತ್ರಾವಾರು ಪರಿಸ್ಥಿತಿ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಬಳಿ ಸಮೀಕ್ಷಾ ವರದಿಗಳಿವೆ, ನಮ್ಮ ಪಕ್ಷವೂ ವರದಿ ಸಿದ್ಧ ಮಾಡಿದೆ, ಎರಡೂ ಕಡೆಯ ಮಾಹಿತಿ ಹಾಗೂ ವರದಿಗಳ ಬಗ್ಗೆ ಸುದೀರ್ಘ ಮತ್ತು ಮುಕ್ತ ಚರ್ಚೆ ಮಾಡಿದ್ದೇವೆ.

ಕ್ಷೇತ್ರಗಳ ಹಂಚಿಕೆ ಬಗ್ಗೆ ಎರಡೂ ಪಕ್ಷಗಳಲ್ಲಿ ಅತ್ಯಂತ ಸೌಹಾರ್ದ ಮನೋಭಾವನೆ ಇದೆ, ಯಾವುದೇ ಗೊಂದಲ ಇಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ ಎಂದರು.

ಜೆಡಿಎಸ್ ಚಿಕ್ಕ ಪಕ್ಷ, ಬಿಜೆಪಿ ದೊಡ್ಡ ಪಕ್ಷ ಎಂಬ ಭೇದ–ಭಾವವಿಲ್ಲದೆ, ಕೇಂದ್ರ ಗೃಹ ಸಚಿವ ಅಮಿತ್ ಷಾ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅತ್ಯಂತ ಪ್ರೀತಿ, ವಿಶ್ವಾಸ ಹಾಗೂ ಸ್ನೇಹಪೂರ್ವಕವಾಗಿ ಮಾತುಕತೆ ನಡೆಸಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮೇಲೆ ಬಿಜೆಪಿ ಕೇಂದ್ರ ನಾಯಕರು ಅಪಾರ ಗೌರವ ಇಟ್ಟುಕೊಂಡಿದ್ದಾರೆ. ನಮ್ಮ ಹಾಗೂ ಪಕ್ಷದ ನಡವಳಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ, ಅವರ ನಂಬಿಕೆ, ವಿಶ್ವಾಸಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನಡೆದುಕೊಳ್ಳುತ್ತೇವೆ, ಪರಸ್ಪರ ವಿಶ್ವಾಸ, ನಂಬಿಕೆ ತಳಹದಿಯ ಮೇಲೆ ಮೈತ್ರಿ ಚಿರಕಾಲ ಮುಂದುವರಿಯುತ್ತದೆ ಎಂಬ ವಿಶ್ವಾಸವಿದೆ ಎಂದರು. ತಾವು ಕೇಂದ್ರ ಸಚಿವರಾಗುವ ವದಂತಿಗಳನ್ನು ಸಾರಾಸಗಟಾಗಿ ಅಲ್ಲಗಳೆದ ಕುಮಾರಸ್ವಾಮಿ, ಯಾವ ಕಾರಣಕ್ಕೆ ಈ ಸುದ್ದಿ ಹುಟ್ಟಿಕೊಂಡಿತು ಎನ್ನುವುದು ಈಗಲೂ ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ, ಯಾವ ಮೂಲಗಳಿಂದ ಇದು ಅಷ್ಟು ಪ್ರಾಮುಖ್ಯತೆ ಪಡೆಯಿತು ಎನ್ನುವುದೂ ಗೊತ್ತಿಲ್ಲ, ಎಲ್ಲಿಂದ ಹುಟ್ಟಿತು ಎನ್ನುವುದೂ ತಿಳಿದಿಲ್ಲ, ಮಾಧ್ಯಮಗಳ ಮೂಲಕವೇ ತಮಗೂ ಗೊತ್ತಾಯಿತು ಎಂದರು. ಲೋಕಸಭಾ ಚುನಾವಣೆ ಹತ್ತಿರದಲ್ಲಿರುವಾಗ ಕೇಂದ್ರ ಮಂತ್ರಿಯಾಗಿ ಮಾಡುವುದೇನಿದೆ, ಇಷ್ಟು ಅಲ್ಪ ಅವಧಿಯಲ್ಲಿ ರಾಜ್ಯಕ್ಕೆ, ರಾಷ್ಟ್ರಕ್ಕೆ ಏನು ಸೇವೆ ಮಾಡಲು ಸಾಧ್ಯ, ಚುನಾವಣಾ ನೀತಿ ಸಂಹಿತೆ ಜಾರಿಯಾದ ಮೇಲೆ ಏನನ್ನೂ ಮಾಡಲು ಸಾಧ್ಯವಿಲ್ಲ, ಅದರಿಂದ ಉಪಯೋಗವೂ ಇಲ್ಲ. ಯಾವ ಕಾರಣಕ್ಕೆ ಆ ಸುದ್ದಿ ಹುಟ್ಟಿಕೊಂಡಿತು ಎನ್ನುವುದು ಅರ್ಥವಾಗುತ್ತಿಲ್ಲ ಎಂದರು.

ಕೇಂದ್ರ ಸಚಿವನಾಗಬೇಕು ಎನ್ನುವ ಆಸಕ್ತಿಯೂ ಇಲ್ಲ. ನನಗಿರುವ ಉದ್ದೇಶ ಒಂದೇ, ಮುಂದಿನ ಲೋಕಸಭೆ ಚುನಾವಣೆಯಲ್ಲಿ ಎಲ್ಲಾ 28 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲಬೇಕು ಎಂಬುದೇ ಮುಂದಿರುವ ಏಕೈಕ ಅಜೆಂಡಾ ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೋಚಿಂಗ್ ಕೇಂದ್ರಗಳಿಗೆ ಹೊಸ ಮಾರ್ಗಸೂಚಿ
16 ವರ್ಷದೊಳಗಿನವರ ದಾಖಲಾತಿ ಬೇಡ



ದಂಡ: ಅತಿಯಾದ ಶುಲ್ಕ ವಿಧಿಸುವ, ವಿದ್ಯಾರ್ಥಿಗಳ ಆತ್ಮಹತ್ಯೆ ಅಥವಾ ಇತರ ದುಷ್ಕೃತ್ಯಗಳಿಗೆ ಕಾರಣವಾಗುವ ಕೋಚಿಂಗ್ ಕೇಂದ್ರಗಳಿಗೆ 1 ಲಕ್ಷ ದಂಡ ವಿಧಿಸಲು ಅಥವಾ ಕೇಂದ್ರದ ನೋಂದಣಿಯನ್ನು ರದ್ದುಗೊಳಿಸಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಕೋಚಿಂಗ್ ಕೇಂದ್ರಗಳ ಚಟುವಟಿಕೆಗಳ ಮೇಲೆ ನಿಗಾ, ಮೇಲ್ವಿಚಾರಣೆ, ನೋಂದಣಿಯ ಜವಾಬ್ದಾರಿ ಆಯಾ ರಾಜ್ಯ ಸರ್ಕಾರಗಳದ್ದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ನವದೆಹಲಿ, ಜ.18– ಕೋಚಿಂಗ್ ಕೇಂದ್ರಗಳಿಗೆ ದಾಖಲಾಗುವ ವಿದ್ಯಾರ್ಥಿಗಳ ವಯಸ್ಸು 16 ವರ್ಷಕ್ಕಿಂತ ಕೆಳಗಿರಬಾರದು. ದಾರಿ ತಪ್ಪಿಸುವಂತ ಸುಳ್ಳು ಭರವಸೆಗಳನ್ನು ನೀಡುವಂತಿಲ್ಲ ಮತ್ತು ರ್‍ಯಾಂಕ್ ಅಥವಾ ಅಧಿಕ ಅಂಕಗಳ ಗ್ಯಾರೆಂಟಿ ನೀಡುವಂತಿಲ್ಲ' ಎಂಬ ಷರತ್ತುಗಳನ್ನು ಒಳಗೊಂಡ ಹೊಸ ಮಾರ್ಗಸೂಚಿಯನ್ನು ಕೇಂದ್ರ ಶಿಕ್ಷಣ ಮಂತ್ರಾಲಯ ಗುರುವಾರ ಬಿಡುಗಡೆ ಮಾಡಿದೆ.

ಹೆಚ್ಚುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ದೂರುಗಳನ್ನು ಗಂಭೀರವಾಗಿ ಪರಿಗಣಿಸಿದ ಸಚಿವಾಲಯವು, ಖಾಸಗಿ ಕೋಚಿಂಗ್ ಕೇಂದ್ರಗಳ ಅನಿಯಂತ್ರಿತ ಬೆಳವಣಿಗೆಗೆ ಕಡಿವಾಣ ಹಾಗೂ ಇವುಗಳ ನಿಯಂತ್ರಣಕ್ಕೆ ಕಾನೂನಿನ ಚೌಕಟ್ಟು ರಚಿಸುವ ಉದ್ದೇಶದಿಂದ ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ.

ಯಾವುದೇ ಕೋಚಿಂಗ್ ಕೇಂದ್ರಗಳು ಪದವಿ ತರಗತಿಗಿಂತ ಕಡಿಮೆ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ನೇಮಿಸಿಕೊಳ್ಳುವಂತಿಲ್ಲ. ವಿದ್ಯಾರ್ಥಿಗಳ ದಾಖಲಾತಿಗೆ ಅಧಿಕ ರ್‍ಯಾಂಕ್ ಹೆಚ್ಚಿನ ಅಂಕ ಗಳಿಕೆಯ ಸುಳ್ಳು ಭರವಸೆಗಳನ್ನು ಪಾಲಕರಿಗೆ ನೀಡುವಂತಿಲ್ಲ. 16 ವರ್ಷದೊಳಗಿನ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವಂತಿಲ್ಲ. ಪ್ರೌಢ ಶಾಲೆ ಪರೀಕ್ಷೆ ನಂತರವೇ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಬೇಕು. ಯಾವುದೇ ಕೋಚಿಂಗ್ ಕೇಂದ್ರಗಳು ತಮ್ಮ ಫಲಿತಾಂಶ ಅಥವಾ ತಮ್ಮ ಕೇಂದ್ರದ ವಿದ್ಯಾರ್ಥಿಯ ಫಲಿತಾಂಶ ಆಧರಿಸಿ ಸಂಸ್ಥೆಯ ಶಿಕ್ಷಣ ಗುಣಮಟ್ಟ ಕುರಿತು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ಜಾಹೀರಾತು ನೀಡುವಂತಿಲ್ಲ. ಪ್ರತಿ ಕೋಚಿಂಗ್ ಕೇಂದ್ರಗಳು ತಮ್ಮದೇ ಆದ ವೆಬ್‌ಸೈಟ್ ಹೊಂದಿರಬೇಕು. ಅದರಲ್ಲಿ ತನ್ನ ಎಲ್ಲ ಬೋಧಕರ ಅರ್ಹತೆ, ಲಭ್ಯವಿರುವ ಕೋರ್ಸ್‌ಗಳು, ಅದರ ಅವಧಿ, ಪಠ್ಯಕ್ರಮ, ಹಾಸ್ಟೆಲ್ ಸೌಲಭ್ಯ, ಪರಿಷ್ಕರಿಸಿದ ಶುಲ್ಕ ವಿವರಗಳನ್ನು ಪ್ರಕಟಿಸಬೇಕು. ಕಲಿಕೆಯಿಂದ ವಿದ್ಯಾರ್ಥಿಗಳು ಒತ್ತಡಕ್ಕೆ ಸಿಲುಕದಂತೆಯೂ ಕೋಚಿಂಗ್ ಕೇಂದ್ರಗಳು ನೋಡಿಕೊಳ್ಳಬೇಕು. ಅಲ್ಲದೆ ಮನೋವೈದ್ಯರು ಮತ್ತು ನುರಿತ ಸಮಾಲೋಚಕರ ಹೆಸರು ಮತ್ತು ಅವರು ಲಭ್ಯವಿರುವ ಸಮಯದ ಮಾಹಿತಿಯನ್ನು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ನೀಡಬೇಕು. ಈ ಮೂಲಕ ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಮಾರ್ಗದರ್ಶನ ದೊರೆಯುವಂತೆ ನೋಡಿಕೊಳ್ಳಬೇಕು. ವಿವಿಧ ಕೋರ್ಸ್‌ಗಳಿಗೆ ವಿಧಿಸುವ ಬೋಧನಾ ಶುಲ್ಕ ನ್ಯಾಯೋಚಿತ ಮತ್ತು ಸಮಂಜಸವಾಗಿರಬೇಕು. ಈ ಶುಲ್ಕಕ್ಕೆ ಸರಿಯಾದ ರಸೀದಿಗಳನ್ನು ನೀಡಬೇಕು. ಯಾವುದೇ ಕೋರ್ಸ್‌ಗೆ ಪೂರ್ಣ ಶುಲ್ಕ ಪಾವತಿಸಿದ ವಿದ್ಯಾರ್ಥಿಯೂ ಕೋರ್ಸ್ ಅನ್ನು ಅರ್ಧಕ್ಕೆ ಮೊಟಕುಗೊಳಿಸಿದರೆ, ಉಳಿದ ಮೊತ್ತವನ್ನು ಲೆಕ್ಕ ಹಾಕಿ, 10 ದಿನಗಳಲ್ಲಿ ಮರುಪಾವತಿಸಬೇಕು. ಅಂತೆಯೇ ವಿದ್ಯಾರ್ಥಿ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದರೆ ಹಾಸ್ಟೆಲ್ ಶುಲ್ಕ, ಮೆಸ್ ಶುಲ್ಕಗಳನ್ನೂ ಮರು ಪಾವತಿಸಬೇಕು.

ಅಂತಿಮ ಹಂತದಲ್ಲಿ ಬೆಳೆ ಹಾನಿ ಪರಿಹಾರ ಮೊದಲನೇ ಕಂತು ಜಮೆ ಪ್ರಕ್ರಿಯೆ



ತಾಲೂಕುವಾರು ಸಹಾಯವಾಣಿ ಆರಂಭ





ಪರಿಹಾರ ಸಹಾಯವಾಣಿ

ತಾಲೂಕು	ದೂರವಾಣಿ
ಮೈಸೂರು	0821–2414812
ನಂಜನಗೂಡು	08221–223108
ತಿ.ನರಸೀಪುರ	9148555170
ಹೆಚ್.ಡಿ.ಕೋಟೆ	08228–255325
ಹುಣಸೂರು	08222–252959
ಪಿರಿಯಾಪಟ್ಟಣ	08223–274175
ಸರಗೂರು	08228– 296100
ಕೆ.ಆರ್.ನಗರ	08223–262371
ಸಾಲಿಗ್ರಾಮ	08223– 262371


ಡಾ.ರಾಜೇಂದ್ರ

ಮೈಸೂರು, ಜ.18(ಎಸ್‌ಬಿಡಿ)– ಮುಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ಬೆಳೆ ಹಾನಿಗೆ ಮೊದಲ ಕಂತಾಗಿ ಪ್ರತಿ ರೈತರಿಗೆ ಗರಿಷ್ಠ 2 ಸಾವಿರ ರೂ.ಗಳನ್ನು ಡಿಬಿಟಿ ಮೂಲಕ ಜಮಾ ಮಾಡುವ ಪ್ರಕ್ರಿಯೆ ಹಂತಿಮ ಹಂತದಲ್ಲಿದ್ದು, ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ತಾಲೂಕುವಾರು ಸಹಾಯವಾಣಿ ಆರಂಭಿಸಲಾಗಿದೆ.

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ ಎಲ್ಲಾ 9 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ರಾಜ್ಯ ಸರ್ಕಾರ ಘೋಷಣೆ ಮಾಡಿದೆ. ಈ ಹಿನ್ನೆಲೆಯಲ್ಲಿ ಹಾನಿಯಾಗಿರುವ ಬೆಳೆಗಳಿಗೆ ಬೆಳೆ ಸಮೀಕ್ಷೆ ದತ್ತಾಂಶದ ಮಾಹಿತಿ ಆಧಾರದ ಮೇರೆಗೆ ಪರಿಹಾರ ನೀಡಲು ಕ್ರಮ ವಹಿಸಲಾಗಿದೆ. ಫ್ರೂಟ್ಸ್ ಐಡಿ ಹೊಂದಿರುವ ಹಾಗೂ ಪಹಣಿ ಜೋಡಣೆಯಾಗಿರುವ ರೈತರಿಗೆ ಡಿಬಿಟಿ ಮೂಲಕ ಎಸ್‌ಡಿಆರ್‌ಎಫ್/ ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಮೊದಲನೇ ಕಂತಾಗಿ ಗರಿಷ್ಠ 2 ಸಾವಿರ ರೂ.ವರೆಗೆ ಬೆಳೆ ಹಾನಿ ಪರಿಹಾರವನ್ನು ವಿತರಿಸಲಾಗುತ್ತಿದೆ. ಅದರಂತೆ ಮೊದಲನೇ ಮತ್ತು 2ನೇ ಹಂತದಲ್ಲಿ ಜಿಲ್ಲೆಯ ಅರ್ಹ 72,277 ರೈತರಿಗೆ ಒಟ್ಟು 12.81 ಕೋಟಿ ರೂ. ಪರಿಹಾರವನ್ನು ವಿತರಿಸಲಾಗುತ್ತಿದೆ.

ಬೆಳೆ ಹಾನಿ ಪರಿಹಾರದ ಹಣ ತಮ್ಮ ಖಾತೆಗೆ ಜಮಾ ಆಗದೇ ಇರುವ ಬಗ್ಗೆ ದೂರುಗಳನ್ನು ಸಲ್ಲಿಸಲು ಹಾಗೂ ಈ ಸಂಬಂಧ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಲು ರೈತರಿಗೆ ಅನುಕೂಲವಾಗುವಂತೆ ತಾಲೂಕು ಹಂತದಲ್ಲಿ ಸಹಾಯವಾಣಿಗಳನ್ನು ತೆರೆಯಲಾಗಿದ್ದು, ಕಚೇರಿ ವೇಳೆಯಲ್ಲಿ ಕರೆ ಮಾಡಬಹುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫ್ರೂಟ್ಸ್ ಐಡಿ ಜೋಡಣೆ ಕಡ್ಡಾಯ: ಬೆಳೆಹಾನಿ ಪರಿಹಾರ ಪಡೆದುಕೊಳ್ಳಲು ಫ್ರೂಟ್ಸ್ ಐಡಿಗೆ ಪಹಣಿ ಜೋಡಣೆ ಕಡ್ಡಾಯವಾಗಿದೆ. ಹಾಗಾಗಿ ಇದುವರೆಗೂ ಫ್ರೂಟ್ಸ್ ಐಡಿ ಸೃಜಿಸಿಕೊಂಡಿರದ ರೈತರು ತಮ್ಮ ಆಧಾರ್ ಹಾಗೂ ಪಹಣಿ ಮಾಹಿತಿ ನೀಡಿ, ಐಡಿ ಸೃಜಿಸಿಕೊಳ್ಳಬೇಕು. ಇಲ್ಲವಾದಲ್ಲಿ ಅಂತಹ ರೈತರು ಪರಿಹಾರಕ್ಕೆ ಅರ್ಹರಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಹೇಳಿದ್ದಾರೆ.

ಜಿಲ್ಲೆಯಲ್ಲಿ ಈವರೆಗೆ ಸುಮಾರು 7.56 ಲಕ್ಷ ಪ್ಲಾಟ್‌ಗಳನ್ನು ಫ್ರೂಟ್ಸ್ ಐಡಿಗೆ ಜೋಡಣೆ ಮಾಡಲಾಗಿದ್ದು, ಇನ್ನೂ 87 ಸಾವಿರ ಪ್ಲಾಟ್‌ಗಳು ಜೋಡಣೆಯಾಗಬೇಕಿದೆ ಎಂದು ಕೃಷಿ ಇಲಾಖೆ ಮೂಲಗಳು ತಿಳಿಸಿವೆ.



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಆಯೋಜಿಸಿರುವ ಎರಡು ದಿನಗಳ 'ಹೈ ಲೈಫ್ ಬ್ರೈಡ್ಸ್', ಹೈ ಬ್ರೈಡಲ್ ಕೌಚರ್(ವೇಷಭೂಷಣ), ಆಭರಣಗಳು, ಪರಿಕರಗಳು ಸೇರಿದಂತೆ ವಿವಿಧ ಬಗೆಯ ವಿನ್ಯಾಸ ಮತ್ತು ಕರಕುಶಲತೆಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಗುರುವಾರ ಚಾಲನೆ ದೊರಕಿತು. ಈ ಸಂದರ್ಭದಲ್ಲಿ ಅಬೈ ಡಾಮಿನಿಕ್, ಶೋಮಿಕಾ ಎಸ್.ರಾವ್, ಸ್ವಾತಿ ಭಗವತ್, ಸಿಂಚನ, ಕೌಶಲ್ಯ, ಶ್ರದ್ಧಾ, ಅಣ್ಣ ಚೇರಿನ್, ರೂಪಾಲ್, ಪೂಜಾ, ಭಾವನ, ಕೃತಿಕಾ, ಶ್ರೀಕಾಂತ್ ಮತ್ತಿತರರು ಉಪಸ್ಥಿತರಿದ್ದರು. ಶುಕ್ರವಾರ ಸಮಾರೋಪಗೊಳ್ಳಲಿದ್ದು, ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಭೇಟಿ ನೀಡಬಹುದು.

ಮೈಸೂರು ಫೆಸ್ಟ್‌ನಲ್ಲಿ ಅಂಗಡಿ ತೆರೆಯಲು ಅರ್ಜಿ ಆಹ್ವಾನ

ಮೈಸೂರು, ಜ.18(ಎಸ್‌ಬಿಡಿ)– ಪ್ರವಾಸೋದ್ಯಮ ಹಾಗೂ ಸ್ಥಳೀಯರ ಆರ್ಥಿಕ ಅಭಿವೃದ್ಧಿ ಉತ್ತೇಜಿಸುವ ಉದ್ದೇಶದಿಂದ ಆಯೋಜಿಸಲಾಗಿರುವ 'ಮೈಸೂರು ಫೆಸ್ಟ್'ನ ಫ್ಲೀ ಮಾರುಕಟ್ಟೆ ಮತ್ತು ಮೈಸೂರು ಫುಡ್ ಫೆಸ್ಟ್‌ನಲ್ಲಿ ಮಳಿಗೆಗಳನ್ನು ತೆರೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಕ್ಲಾಕ್ ಟವರ್ ಪಕ್ಕದ ಆಟದ ಮೈದಾನದಲ್ಲಿ ಜ.26ರಿಂದ 28ರವರೆಗೆ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಫುಡ್ ಫೆಸ್ಟ್‌ನಲ್ಲಿ ಮಳಿಗೆ ತೆರೆಯಲು ಆಸಕ್ತರು ಜ.19ರಿಂದ 21ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಫ್ಲೀ ಮಾರುಕಟ್ಟೆಗೆ 10x10 ಅಳತೆಯ 50 ಮಳಿಗೆ ಹಾಗೂ ಫುಡ್ ಫೆಸ್ಟ್‌ನ 40 ಮಳಿಗೆಗಳಿಗೆ ಮಾತ್ರ ಸ್ಥಳಾವಕಾಶ ನೀಡಲಾಗುವುದು. ಒಟ್ಟಾರೆ ಸಲ್ಲಿಕೆಯಾದ ಅರ್ಜಿಗಳಲ್ಲಿ ಆಯ್ಕೆ ಸಮಿತಿ ಆಯ್ಕೆ ಮಾಡಿದವರಿಗೆ ಅವಕಾಶ ಸಿಗಲಿದೆ. ಆಯ್ಕೆಯಾದ ಪ್ರತಿ ಮಳಿಗೆಗೆ ದಿನಕ್ಕೆ 5 ಸಾವಿರ ಬಾಡಿಗೆ ಪಾವತಿಸಬೇಕು. ಮಳಿಗೆದಾರರಿಗೆ ಯಾವುದೇ ಊಟೋಪಚಾರ ಇತರೆ ಯಾವುದೇ ಭತ್ಯೆಗಳು ಇರುವುದಿಲ್ಲ. ಮಳಿಗೆದಾರರು ಆಯ್ಕೆ ಸಮಿತಿ ತೀರ್ಮಾನ, ನಿಯಮ ಹಾಗೂ ಷರತ್ತುಗಳಿಗೆ ಬದ್ಧರಾಗಿರಬೇಕು. ಆಯ್ಕೆಯಾದ ಮಳಿಗೆದಾರರ ಅಂತಿಮ ಪಟ್ಟಿಯನ್ನು ಜ.23ರಂದು ಇನ್ಸ್ಟಾಗ್ರಾಮ್ ಪೇಜ್‌ನಲ್ಲಿ ಪ್ರಕಟಿಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 7411564510 ಅಥವಾ ಪ್ರವಾಸೋದ್ಯಮ ಇಲಾಖೆ ಫೇಸ್‌ಬುಕ್ ಅಥವಾ ಇನ್ಸ್ಟಾಗ್ರಾಮ್ ಪೇಜ್ ಸಂಪರ್ಕಿಸಬಹುದು.

ರೇಷ್ಮೆ ಇಲಾಖೆ ವಿಲೀನಗೊಳಿಸದಿರಲು ಒತ್ತಾಯ


ಸುದ್ದಿಗೋಷ್ಠಿಯಲ್ಲಿ ಎನ್.ವೈ.ಚಿಗರಿ ಮಾತನಾಡುತ್ತಿರುವುದನ್ನು ಕಾಣಬಹುದು.

ಮೈಸೂರು,ಜ.18(ಜಿಎ)–ರೇಷ್ಮೆ ಇಲಾಖೆಯನ್ನು ಯಾವುದೇ ಇಲಾಖೆಯೊಟ್ಟಿಗೆ ವಿಲೀನಗೊಳಿಸಬಾರದು ಎಂದು ರೇಷ್ಮೆ ಇಲಾಖೆ ನಿವೃತ್ತ ನೌಕರರ ಸೇವಾ ಸಂಸ್ಥೆ ಒತ್ತಾಯಿಸಿದೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರೇಷ್ಮೆ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಹಾಗೂ ಸಂಸ್ಥೆಯ ಗೌರವ ಅಧ್ಯಕ್ಷರೂ ಆದ ಎಸ್.ಎಸ್.ಸದಾನಂದ ಮಾತನಾಡಿ, ಸರ್ಕಾರ ರೇಷ್ಮೆ ಇಲಾಖೆ, ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯನ್ನು ವಿಲೀನಗೊಳಿಸುವ ಚಿಂತನೆ ನಡೆಸುತ್ತಿದೆ ಎಂಬ ಸುದ್ದಿ ಹರಡುತ್ತಿದ್ದು, ರೇಷ್ಮೆ ಉತ್ಪಾದನೆಗಿರುವ ವಿಫುಲ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲು ಹಾಗೂ ರೇಷ್ಮೆ ಉದ್ಯಮದ ಪಾಲುದಾರರ ಹಿತದೃಷ್ಟಿಯಿಂದ ರೇಷ್ಮೆ ಇಲಾಖೆಯನ್ನು ಬೇರೆ ಇಲಾಖೆಯೊಂದಿಗೆ ವಿಲೀನಗೊಳಿಸಬಾರದು ಎಂದು ಆಗ್ರಹಿಸಿದರು.

ಚೀನಾ ದೇಶದಲ್ಲಿ ರೇಷ್ಮೆ ಉತ್ಪಾದನೆ ಕಡಿಮೆಯಾಗುತ್ತಿದ್ದು, ಮತ್ತೊಂದೆಡೆ ಭಾರತದಲ್ಲಿ ಪ್ರತಿ ವರ್ಷ ಉತ್ಪಾದನೆ ಹೆಚ್ಚಾಗುತ್ತಿದೆ. ಜಾಗತಿಕ ಬೇಡಿಕೆ ಪೂರೈಸಲು ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ರೇಷ್ಮೆ ಉತ್ಪಾದನೆಗೆ ಅದರಲ್ಲೂ ಕರ್ನಾಟಕಕ್ಕೆ ವಿಫುಲ ಅವಕಾಶವಿದೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರು ರೇಷ್ಮೆ ಇಲಾಖೆಯನ್ನು ಬೇರೆ ಇಲಾಖೆಗೆ ವಿಲೀನಗೊಳಿಸದಂತೆ ತಮ್ಮ ರಾಜಕೀಯ ಇಚ್ಛಾಶಕ್ತಿಯೊಂದಿಗೆ ಕ್ರಮ ವಹಿಸುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಅಧ್ಯಕ್ಷ ಎನ್.ವೈ ಚಿಗರಿ, ಕಾರ್ಯದರ್ಶಿ ಕೆ.ಎಂ.ರುದ್ರಪ್ಪ, ಸಂಘಟನಾ ಕಾರ್ಯದರ್ಶಿ ಬಿ.ಸಿ. ಕೆಂಪೇಗೌಡ ಉಪಸ್ಥಿತರಿದ್ದರು.

ನಾಳೆ ವಿದ್ಯುತ್ ಗ್ರಾಹಕರ ಸಂವಾದ ಸಭೆ

ಮೈಸೂರು, ಜ.18–ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತದ ವತಿಯಿಂದ ವಿ.ವಿ ಮೊಹಲ್ಲಾ, ಕಾರ್ಯ–ಪಾಲನ ವಿಭಾಗ ವ್ಯಾಪ್ತಿಯ ಚಾ.ವಿ.ಸ.ನಿ.ನಿ ಉಪವಿಭಾಗಗಳಾದ ವಿವಿ ಮೊಹಲ್ಲಾ, ಹೂಟಗಳ್ಳಿ, ಕುವೆಂಪುನಗರ, ರಾಮಕೃಷ್ಣನಗರ ಉಪವಿಭಾಗಗಳಲ್ಲಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆಗಳ ಬಗ್ಗೆ ಹಾಗೂ ಗ್ರಾಹಕರಿಗೆ ವಿದ್ಯುತ್ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಜ.20ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಗ್ರಾಹಕರ ಸಂವಾದ ಸಭೆ ಹಮ್ಮಿಕೊಳ್ಳಲಾಗಿದೆ. ವಿದ್ಯುತ್ ಗ್ರಾಹಕರು ಹೂಟಗಳ್ಳಿ ಉಪವಿಭಾಗ ಕಚೇರಿ, ರಾಮಕೃಷ್ಣನಗರ ಉಪವಿಭಾಗ ಕಚೇರಿ, ವಿ.ವಿ.ಮೊಹಲ್ಲಾ ಉಪವಿಭಾಗ ಕಚೇರಿ ಹಾಗೂ ಕುವೆಂಪುನಗರ ಉಪವಿಭಾಗ ಕಚೇರಿಗಳಲ್ಲಿ ನಡೆಯುವ ವಿದ್ಯುತ್ ಗ್ರಾಹಕರ ಸಂವಾದ ಸಭೆಗೆ ಭಾಗವಹಿಸಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆಗಳೇನಾದರೂ ಇದ್ದಲ್ಲಿ, ಲಿಖಿತ ಅರ್ಜಿಗಳನ್ನು ಸಲ್ಲಿಸಿ ವಿದ್ಯುತ್ ಸಮಸ್ಯೆ ಹಾಗೂ ವಿದ್ಯುತ್ ಸುರಕ್ಷತಾ ಜಾಗೃತಿಯ ಬಗ್ಗೆ ಯಾವುದೇ ಪ್ರಶ್ನೆ/ಸಮಸ್ಯೆಗಳಿದ್ದಲ್ಲಿ ಬಗೆಹರಿಸಿಕೊಳ್ಳುವಂತೆ ವಿ.ವಿ ಮೊಹಲ್ಲಾದ ಚಾ.ವಿ.ಸ.ನಿ.ನಿ ಕಾರ್ಯ ಮತ್ತು ಪಾಲನ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್, ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರಿಗೆ ಮೂರು ದಿನಗಳ ತರಬೇತಿ

ಮೈಸೂರು, ಜ.18–ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಜ.22ರಿಂದ ಜ.24ರವರೆಗೆ "ಬಾಳೆ ಬೆಳೆಯಲ್ಲಿ ತಳಿ ಆಯ್ಕೆ, ಆಧುನಿಕ ಕೃಷಿ ಪದ್ಧತಿಗಳು, ಸೂಕ್ಷ್ಮ ನೀರಾವರಿ ಮತ್ತು ರಸಾವರಿ ತಾಂತ್ರಿಕತೆಗಳ ಅಳವಡಿಕೆ ಮೂಲಕ ಅಧಿಕ ಲಾಭ" ಎಂಬ ವಿಷಯದ ಬಗ್ಗೆ ರೈತರು/ರೈತಮಹಿಳೆಯರಿಗೆ 3 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತರು/ರೈತ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇದೆ. ಆಸಕ್ತ 30 ಮಂದಿ ರೈತರು/ರೈತ ಮಹಿಳೆಯರು ತಮ್ಮ ಹೆಸರನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರ ದೂ.ಸಂ: 9945493589ಗೆ ಕರೆ ಮಾಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಮೊದಲು ನೋಂದಣಿ ಮಾಡಿದವರಿಗೆ ಆದ್ಯತೆ ನೀಡಲಾಗುವುದು ಎಂದು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾ ಅಧ್ಯಕ್ಷರಾಗಿ ನೂತನವಾಗಿ ನೇಮಕವಾದ ಎಲ್.ಆರ್.ಮಹಾದೇವಸ್ವಾಮಿ ಅವರನ್ನು ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್‌ಗೌಡ ಅಭಿನಂದಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹಾದೇವಯ್ಯ, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ಟಿ.ರವಿ, ಎಪಿಎಂಸಿ ಮಾಜಿ ಸದಸ್ಯ ಇಲವಾಲ ರವಿ, ಯುವಮೋರ್ಚಾ ಮಾಜಿ ಜಿಲ್ಲಾಧ್ಯಕ್ಷ ವಿಜಯ ಗೌಡ, ಕಾರ್ಯಾಲಯ ಕಾರ್ಯದರ್ಶಿ ಹಿನಕಲ್ ಪಾಪಣ್ಣ, ಮುಖಂಡರಾದ ಮಹಾದೇವಯ್ಯ, ಎನ್.ಕೆ.ರವಿಕುಮಾರ್, ಅನಿಲ್ ಮತ್ತಿತರರು ಉಪಸ್ಥಿತರಿದ್ದರು.


ಮೈಸೂರಿನ ಪಡುವಾರಹಳ್ಳಿ(ವಿನಾಯಕನಗರ)ಯಲ್ಲಿ ಆದಿಚುಂಚನಗಿರಿ ಕ್ಷೇತ್ರದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯ 79ನೇ ಜಯಂತಿ ಆಚರಿಸಿ, ಶ್ರೀಗಳ ಸಮಾಜಮುಖಿ ಸೇವೆಯನ್ನು ಸ್ಮರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಮೂಗಪ್ಪರ ಸ್ವಾಮಣ್ಣ, ಬೊಮ್ಮರಾಯಣ್ಣ, ಚೆಲುವರಾಯ, ರಾಮಣ್ಣ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ನಗರಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುಂದರ್ ಕುಮಾರ್, ಯೋಗನರಸಿಂಹೇಗೌಡ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಸಿ.ಡಿ.ಕುಮಾರ್, ಸಂತೋಷ್, ಕೇಬಲ್ ವೆಂಕಟಗಿರಿಗೌಡ(ಕಿಟ್ಟಿ), ಫಾಲ್ಕನ್ ಮಾದೇಗೌಡ, ಅಭಿಗೌಡ, ದಿ ಸಿಟಿ ಕೋ ಆಪರೇಟಿವ್ ನಿರ್ದೇಶಕ ವಿ.ಮಧು ಮತ್ತಿತರರು ಭಾಗವಹಿಸಿದ್ದರು.

ನಾಳೆ ನವೋದಯ ಶಾಲೆಯ 6ನೇ ತರಗತಿ ಪ್ರವೇಶ ಪರೀಕ್ಷೆ

ಮೈಸೂರು: ಜಿಲ್ಲೆಯ ಜವಹಾರ ನವೋದಯ ವಿದ್ಯಾಲಯಕ್ಕೆ 2024–25ನೇ ಸಾಲಿನ 6ನೇ ತರಗತಿಗೆ ಅರ್ಜಿ ಸಲ್ಲಿಸಿರುವವರು ಪ್ರವೇಶ ಪರೀಕ್ಷೆಯು ಜ.20ರಂದು ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ನಡೆಯಲಿದ್ದು, ಪ್ರವೇಶ ಪತ್ರಗಳನ್ನು www.navodaya.gov.inನಲ್ಲಿ ಪಡೆದು, ಪರೀಕ್ಷೆಗೆ ಬೆಳಗ್ಗೆ 10.30ಕ್ಕೆ ಹಾಜರಾಗುವುದು. ಮಾಹಿತಿಗೆ ದೂ.ಸಂ:0821–2970040/ ಮೊ. 9448413479 ಸಂಪರ್ಕಿಸಿ.

ಮಹಾಯೋಗಿ ವೇಮನ, ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತಿ

ಮೈಸೂರು,ಜ.18–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜ.21ರಂದು ಬೆಳಗ್ಗೆ 10.30 ಗಂಟೆಗೆ ಕಲಾಮಂದಿರದಲ್ಲಿ ಮಹಾಯೋಗಿ ಶ್ರೀ ವೇಮನ ಜಯಂತಿ ಹಾಗೂ ನಿಜ ಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತಿಯನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಸಂಸದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಶ್, ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ದರ್ಶನ್ ಧ್ರುವನಾರಾಯಣ, ಅನಿಲ್ ಕುಮಾರ್, ಜಿ.ಡಿ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ಮರಿತಿಬ್ಬೇಗೌಡ, ಡಾ.ಡಿ. ತಿಮ್ಮಯ್ಯ, ಮಧುಜಿ.ಮಾದೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ವಕೀಲರ ಸಂಘದ ಉಪಾಧ್ಯಕ್ಷರ ಚಿನ್ನಾಭರಣ ದೋಚಿದ್ದ ಖದೀಮ ಬಂಧನ

ಮೈಸೂರು,ಜ.18(ಎಂಕೆ)–ಫೇಸ್ ಬುಕ್‌ನಲ್ಲಿ ಪರಿಚಯವಾದ ಬೆಂಗಳೂರು ವಕೀಲರ ಸಂಘದ ಉಪಾಧ್ಯಕ್ಷರ ಚಿನ್ನಾಭರಣ ದೋಚಿದ್ದ ಆರೋಪಿಯನ್ನು ಬಂಧಿಸಿರುವ ಮಂಡಿ ಠಾಣೆ ಪೊಲೀಸರು, ಬಂಧಿತನಿಂದ 7.25 ಲಕ್ಷ ರೂ. ಮೌಲ್ಯದ 149 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ನಿವಾಸಿ ಮುರಳಿ(28) ಬಂಧಿತ ಆರೋಪಿ. ಬೆಂಗಳೂರಿನ ಚಂದ್ರಾ ಲೇಔಟ್ ನಿವಾಸಿಯಾಗಿರುವ ಬೆಂಗಳೂರು ವಕೀಲರ ಸಂಘದ ಉಪಾಧ್ಯಕ್ಷ ಸಿ.ಗಜೇಂದ್ರ (50) ಅವರನ್ನು ಚೀಟಿ ವ್ಯವಹಾರ ನಡೆಸುತ್ತೇನೆಂದು ಫೇಸ್‌ಬುಕ್‌ನಲ್ಲಿ ಪರಿಚಯ ಮಾಡಿಕೊಂಡಿದ್ದ ಆರೋಪಿ, ಜ.10ರಂದು ರಾತ್ರಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್‌ನ 104ನೇ ಸಂಖ್ಯೆಯ ಕೊಠಡಿಯಲ್ಲಿ ಗಜೇಂದ್ರ ಅವರೊಂದಿಗೆ ವಾಸ್ತವ್ಯ ಹೂಡಿದ್ದಲ್ಲದೆ ಬೆಳಗಾಗುವಷ್ಟರಲ್ಲಿ ಅವರ ಸೂಟ್‌ಕೇಸ್‌ನಲ್ಲಿದ್ದ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾನೆ.

ಈ ಸಂಬಂಧ ಜ.12 ರಂದು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಮಂಡಿ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು, ಬಂಧಿತನಿಂದ 7,25,000 ರೂ ಮೌಲ್ಯದ 149 ಗ್ರಾಂ ತೂಕದ ಚಿನ್ನದ ಆಭರಣಗಳನ್ನು ವಶಪಡಿಸಿಕೊಂಡಿರುತ್ತಾರೆ. ಮೈಸೂರು ನಗರದ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಮತ್ತು ನರಸಿಂಹರಾಜ ವಿಭಾಗದ ಎಸಿಪಿ ಅಶ್ವತ್ ನಾರಾಯಣ ಮಾರ್ಗದರ್ಶನದಲ್ಲಿ ಮಂಡಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಸ್.ನಾಗೇಶ್, ಪಿಎಸ್‌ಐಗಳಾದ ರೇವಣ್ಣ ಸಿದ್ದಪ್ಪ ರಂಗಸ್ವಾಮಿ, ಎಎಸ್‌ಐ ಕೆ.ಎಸ್.ಗುರುಸ್ವಾಮಿ, ಸಿಬ್ಬಂದಿಗಳಾದ ರಾಜೇಂದ್ರ ಜಿ.ಸಿ, ಜನಾರ್ದನರಾವ್, ಮಹಮದ್ ಖಯ್ಯೂಂ, ರಾಜುಸಾಬ್, ಮೆಹಬೂಬ್ ಖಾನ್, ಜಯಕುಮಾರ್, ಇಸ್ಮಾಯಿಲ್, ಸಮೀರ್, ಕರಿಯಪ್ಪ, ಯೋಗೇಶ್, ಕುಮಾರ್, ಮಂಜು ಹಾಗೂ ಶ್ಯಾಮ್ ಸುಂದರ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಜ.21, ಶಿವಕುಮಾರ ಸ್ವಾಮೀಜಿ ಸ್ಮರಣೆ: ಭಕ್ತಿಗೀತೆ ಕಾರ್ಯಕ್ರಮ

ಮೈಸೂರು: ತ್ರಿವಿಧ ದಾಸೋಹಿ, ನಡೆದಾಡುವ ದೇವರು ಡಾ.ಶಿವಕುಮಾರ ಸ್ವಾಮೀಜಿಯವರ ಪುಣ್ಯಾರಾಧನೆ ಪ್ರಯುಕ್ತ ಜನವರಿ 21ರ ಭಾನುವಾರದಂದು ಬೆಳಗ್ಗೆ 11.30ಕ್ಕೆ ಮಾದೇಶ್ ಅವರಿಂದ ಭಕ್ತಿಗೀತೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಧ್ಯಾಹ್ನ 12.30ಕ್ಕೆ ಕುದೇರು ಮಠಾಧ್ಯಕ್ಷರಾದ ಶ್ರೀ ಗುರುಶಾಂತ ಸ್ವಾಮೀಜಿ ಅವರು ಶಿವಕುಮಾರ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ನಂತರ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ವೀರನಗೆರೆ ವೀರಶೈವ ಮಂಡಳಿ ಸದಸ್ಯರು ತಿಳಿಸಿದ್ದಾರೆ.

ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘದಿಂದ ಪ್ರತಿಭಟನೆ



ಮೈಸೂರಿನ ಸಾಲುಮರದ ತಿಮ್ಮಕ್ಕ ಉದ್ಯಾನವನದ ಬಳಿ ದಿನಗೂಲಿ ನೌಕರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.18(ಜಿಎ)–ದಿನಗೂಲಿ ನೌಕರನನ್ನು ಏಕಾಏಕಿ ಕೆಲಸದಿಂದ ತೆಗೆದುಹಾಕಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘದಿಂದ ಜಯನಗರದ ಸಾಲುಮರದ ತಿಮ್ಮಕ್ಕ ಉದ್ಯಾನವನದ ಬಳಿ ಪ್ರತಿಭಟನೆ ನಡೆಸಲಾಯಿತು.

ಅರಣ್ಯ ಭವನದ ನಗರ ಹಸರೀಕರಣ ವಲಯ ಕಚೇರಿಯಲ್ಲಿ ದಿನಗೂಲಿ ನೌಕರನಾಗಿ ಕಳೆದ 2011–12ನೇ ಸಾಲಿನಿಂದ ಕೆಲಸ ನಿರ್ವಹಿಸುತ್ತಿರುವ ನಿಂಗರಾಜು ಅವರನ್ನು ಯಾವುದೇ ಸೂಚನೆ ನೀಡದೆ ಕಳೆದ ಏಪ್ರಿಲ್ 2023 ರಿಂದ ಕೆಲಸದಿಂದ ತೆಗೆಯಲಾಗಿದೆ. ಈ ಸಂಬಂಧ ನೌಕರರು ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಏಕಾಏಕಿ ಕೆಲಸದಿಂದ ತೆಗೆದಿದ್ದರಿಂದ ದಿನಗೂಲಿ ಕೆಲಸವನ್ನೇ ನಂಬಿ ಬದುಕು ಕಟ್ಟಿಕೊಂಡಿರುವ ನೌಕರನ ಕುಟುಂಬ ಬೀದಿಗೆ ಬಿದ್ದಿದೆ. ನಗರದ ಮಧ್ಯೆ ಇರುವ ಮಳಲವಾಡಿ ಕೆರೆಯಲ್ಲಿ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನವನ ಕಾಮಗಾರಿ 2011–12ರಲ್ಲಿ ಪ್ರಾರಂಭವಾಗಿದ್ದು, ಈಗ ಈ ಜಾಗದಲ್ಲಿ ಸುಂದರವಾದ ಟ್ರಿಪಾರ್ಕ್ ನಿರ್ಮಿಸಿದ್ದು, ಸರ್ಕಾರ ಪ್ರತಿ ವರ್ಷ ಹತ್ತಾರು ಲಕ್ಷ ವೆಚ್ಚ ಮಾಡುತ್ತಿದೆ. ಹೀಗಿರುವಾಗ ಒಬ್ಬ ನೌಕರನಿಗೆ ಕೆಲಸವಿಲ್ಲ ಎಂದು ಹೇಳುವ ಇಲಾಖೆ ಕ್ರಮ ಖಂಡನೀಯ. ಹೀಗಾಗಿ ಕೂಡಲೇ ನಿಂಗರಾಜು ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮಾಜಿ ಉಪಮೇಯರ್ ಶೈಲೇಂದ್ರ, ಸಂಘದ ಅಧ್ಯಕ್ಷ ಎ.ಎಂ.ನಾಗರಾಜು, ನಿಂಗರಾಜು ಕುಟುಂಬದವರು ಮತ್ತಿತರರು ಪಾಲ್ಗೊಂಡಿದ್ದರು.

ನಿಧನ



ಗೌರಮ್ಮ

ಮೈಸೂರು, ಜ.18– ಮೈಸೂರಿನ ವಿವೇಕಾನಂದ ನಗರ ನಿವಾಸಿ ಗೌರಮ್ಮ (94) ಅವರು ಗುರುವಾರ ನಿಧನರಾದರು. ಇವರು ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ಬೆಳಗ್ಗೆ 10.30ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ವಿ.ಶಿವಕುಮಾರ್ ಹಿರಾಸ್ಕರ್



ಮೈಸೂರಿನ ಕೆ.ಆರ್. ವೃತ್ತದಲ್ಲಿರುವ ರಾಯಲ್ ಫ್ಯಾಷನ್ಸ್ ಮಾಲೀಕ, ಜಯಲಕ್ಷ್ಮಿಪುರಂ ನಿವಾಸಿ ಬಿ.ವಿ.ಶಿವಕುಮಾರ್ ಹಿರಾಸ್ಕರ್(71) ಗುರುವಾರ ಸಂಜೆ ನಿಧನರಾದರು. ಇವರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಾಜಪೇಯಿ, ಮನಮೋಹನ್‌ಸಿಂಗ್, ನಾನು ಮಾಡದ ಸಾಧನೆಯನ್ನು ಮೋದಿ ಮಾಡುತ್ತಿದ್ದಾರೆ

ಬಾಲಗಂಗಾಧರನಾಥ ಶ್ರೀಗಳ ಜಯಂತ್ಯುತ್ಸವದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಬಣ್ಣನೆ

ಮಂಡ್ಯ, ಜ.18– ಪ್ರಧಾನಿ ನರೇಂದ್ರ ಮೋದಿ ಈ ದೇಶ ಕಂಡ ಶ್ರೇಷ್ಠ ವ್ಯಕ್ತಿ. ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ, ಡಾ.ಮನಮೋಹನ್‌ಸಿಂಗ್ ಹಾಗೂ ನಾನು ಮಾಡದ ಸಾಧನೆಯನ್ನು ಮೋದಿ ಮಾಡುತ್ತಿದ್ದಾರೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಬಣ್ಣಿಸಿದರು.

ನಾಗಮಂಗಲ ತಾಲೂಕಿನ ಶ್ರೀಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಬಿಜಿಎಸ್ ಸಭಾಂಗಣದಲ್ಲಿ ಗುರುವಾರ ನಡೆದ ಶ್ರೀಬಾಲಗಂಗಾಧರನಾಥ ಸ್ವಾಮೀಜಿ ಅವರ 79ನೇ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾನು ರೈತ ಮತ್ತು ಬಡ ಕುಟುಂಬ ದಿಂದ ಬೆಳೆದು ಬಂದ ವ್ಯಕ್ತಿ. ತುಂಬಾ ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಬೆಳೆದಿದ್ದೇನೆ. ಪ್ರಧಾನಿ ಮೋದಿ ಅವರಿಗೆ ಸಂಘ ಪರಿವಾರದ ಸಂಪೂರ್ಣ ಬೆಂಬಲ ಇದೆ. ಆದರೆ ನನಗೆ ಪರಿವಾರವೇ ರೈತರಾಗಿದ್ದಾರೆ. ಅವರ ಬೆಂಬಲದಿಂದ ಬೆಳೆದಿದ್ದೇನೆ ಎಂದು ವ್ಯಾಖ್ಯಾನಿಸಿದರು.

ನಾನು ಕಳೆದ 60 ವರ್ಷದಿಂದ ಒಂದೇ ಒಂದು ಸುಳ್ಳು ಹೇಳಿಲ್ಲ. ಮೋದಿ ವಿರುದ್ಧ ಕಳೆದ 10 ವರ್ಷ ದಿಂದ ಮಾತನಾಡಿಲ್ಲ. ಮೋದಿ ಹುಟ್ಟಿದ್ದು ಗುಜರಾತ್‌ನಲ್ಲಿ. ಆದರೆ ಅವರ ಕ್ಷೇತ್ರ ವಾರಣಾಸಿ. ಗಂಗಾ ನದಿ ಮಾನಸ ಸರೋವರದಿಂದ ಹರಿಯುತ್ತದೆ. ಮೋದಿ ಗಂಗಾ ನದಿ ಶುದ್ಧೀಕರಣ ಮಾಡಿದರು. ಆ ಶುದ್ಧೀಕರಣ ತೆಂಗಿನ ಮರದ ಎಳ ನೀರಿಗಿಂತ ಶುದ್ಧ ವಾಗಿದೆ. ಈ ಬಣ್ಣನೆ ನನ್ನ ಮನಸಿನ ಮಾತಷ್ಟೇ ಎಂದರು.



ಆದಿಚುಂಚನಗಿರಿಯಲ್ಲಿ ನಡೆದ ಶ್ರೀಬಾಲಗಂಗಾಧರನಾಥ ಸ್ವಾಮೀಜಿಯವರ 79ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಉದ್ಘಾಟಿಸಿದರು.

ಹಿಂದೂ–ಮುಸ್ಲಿಂ ಸಂಘರ್ಷದ ಬಗ್ಗೆ ನಾನು ಮಾತನಾಡುವುದಿಲ್ಲ. 90 ವರ್ಷದ ನಾನು ಒಂದು ಕಡೆಯಾದರೆ, 74 ವರ್ಷದ ಮೋದಿ ಒಂದು ಕಡೆ ಇದ್ದಾರೆ. ಆದರೆ ನಾವು ಶಿವನ ಆಶೀರ್ವಾದದಿಂದ ಹುಟ್ಟಿದ್ದೇವೆ. ಶಿವ, ರಾಮ, ವಿಷ್ಣು ನಡುವೆ ಯಾವುದೇ ತಾರತಮ್ಯ ಇಲ್ಲ. ನಾನು ಕೊನೆಯದಾಗಿ ನನ್ನ ಪುತ್ರರಾದ ಹೆಚ್.ಡಿ. ರೇವಣ್ಣ ಹಾಗೂ ಹೆಚ್.ಡಿ.ಕುಮಾರ ಸ್ವಾಮಿ ಜೊತೆ ಮೋದಿ ಭೇಟಿಯಾದಾಗ ನನ್ನನ್ನು ಖುರ್ಚಿ ಮೇಲೆ ಕೂರಿಸಿ, ಕೂರಿಸಿದ ಫೋಟೋವನ್ನು ಟ್ವೀಟ್ ಮಾಡಿ ಈ ಮನುಷ್ಯ ಮಾಡಿದ ಸಾಧನೆ ನಾವು ಮಾಡಲು ಸಾಧ್ಯವಿಲ್ಲ ಎಂದು ಬರೆದುಕೊಂಡಿದ್ದರು. ಆದರೆ ಪ್ರಧಾನಿ ಶ್ರೇಷ್ಠರಾಗಿದ್ದಾರೆ. ಇದನ್ನು ರಾಜಕೀಯ ಲಾಭ–ನಷ್ಟಕ್ಕೆ ಹೇಳುತ್ತಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ರಾಮ ಎನ್ನುವ ಪದವೇ ಶ್ರೇಷ್ಠ. 7–8 ಮಂದಿ ರಾಮಾಯಣ ಬರೆದಿದ್ದು, ಅದರಲ್ಲಿ ವಾಲ್ಮೀಕಿ ರಾಮಾಯಣವೇ ಶ್ರೇಷ್ಠ. ಅಯೋಧ್ಯೆಯಲ್ಲಿ ಅದ್ಭುತ ದೇಗುಲ ಕಟ್ಟಿದ್ದಾರೆ. ಅಲ್ಲಿಗೆ ಹೋಗುವ ದಿನಾಂಕ ಮುಖ್ಯವಲ್ಲ. ಭಕ್ತಿ ಮುಖ್ಯ. ತ್ರೇತಾಯುಗದಲ್ಲಿ ಶಬರಿ ಕೊಟ್ಟ ಕೊಳಕು ಹಣ್ಣನ್ನು ರಾಮ ತಿಂದಿದ್ದನ್ನು ಕಂಡಿದ್ದೇವೆ. ಅಲ್ಲಿ ಕೊಳೆತ ಹಣ್ಣಿಗಿಂತ ಶಬರಿಯಲ್ಲಿದ್ದ ಭಕ್ತಿ ಮುಖ್ಯ ಎಂದು ಬಣ್ಣಿಸಿದರು.

ಜ.22ರಂದು ಅಯೋಧ್ಯೆಯಲ್ಲಿ ಪ್ರಧಾನಿ ಮೋದಿ ಅವರಿಂದ ಉದ್ಘಾಟನೆಯಾಗುವ ಶ್ರೀರಾಮ ಮಂದಿರ ಸಾವಿರಾರು ವರ್ಷಗಳ ಕಾಲ ಭಾರತ ಸೇರಿದಂತೆ ವಿದೇಶಿಯರ ಜನಮಾನಸದಲ್ಲಿ ಉಳಿಯಲಿದ್ದು, ಸೂರ್ಯ, ಚಂದ್ರ ಇರುವವರೆಗೆ ದೇಗುಲ ಶಾಶ್ವತವಾಗಿ ಉಳಿಯಲಿದೆ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಮೋದಿ ಸಾಕಷ್ಟು ಶ್ರಮಿಸಿದ್ದಾರೆ. ಈ ದೇಶದ ಸಮಸ್ಯೆಗಳನ್ನು ಬಗೆಹರಿಸಲು ಮೋದಿ ಅವರಿಗೆ ಪರಮೇಶ್ವರ ಜನ್ಮ ಕೊಟ್ಟು ಭೂಮಿಗೆ ಕಳುಹಿಸಿದ್ದಾನೆ. ಈ ದೇಶದ ಹಲವು ಸಮಸ್ಯೆಗಳನ್ನು ಮೋದಿ ಹಂತ ಹಂತವಾಗಿ ಬಗೆಹರಿಸಿದ್ದಾರೆ. ಶ್ರೀ ರಾಮಚಂದ್ರ ಪ್ರಧಾನಿಗೆ ದೀರ್ಘಾಯುಷ್ಯ ಕೊಡಲಿ. ರಾಷ್ಟ್ರದ ಹಾಗೂ ವಿಶ್ವದ ಸಮಸ್ಯೆ ಬಗೆಹರಿಸುವ ಶಕ್ತಿಯನ್ನು ದೇವರು ಅವರಿಗೆ ನೀಡಲಿ ಎಂದು ಶ್ಲಾಘಿಸಿದರು.

ಬಾಲಗಂಗಾಧರನಾಥ ಸ್ವಾಮೀಜಿ ಕಟ್ಟಿದ ಈ ಬೃಹತ್ ಧಾರ್ಮಿಕ ಕ್ಷೇತ್ರವನ್ನು ಇನ್ನಷ್ಟು ದೊಡ್ಡ ಮಟ್ಟಕ್ಕೆ ನಿರ್ಮಲಾನಂದ ಶ್ರೀಗಳ ನೇತೃತ್ವದಲ್ಲಿ ಕೊಂಡೊಯ್ಯುಬೇಕೆಂಬುದು ನನ್ನ ಮಹದಾಸೆ. ಇದನ್ನು ನಿರ್ಮಲಾನಂದಶ್ರೀಗಳು ಚಾಚು ತಪ್ಪದೇ ಮಾಡುತ್ತಾರೆ.ಮಠ ಕಟ್ಟುವಲ್ಲಿ ಇಲ್ಲಿನ ಮಠದ ಶ್ರೀಭಕ್ತರು ಶ್ರದ್ಧೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ಶುಭವಾಗಲಿ ಎಂದರು. ವಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ದಿಕ್ಕು, ದೆಸೆ, ಗುರಿ ಇಲ್ಲದ ಕಾಲದಲ್ಲಿ ಬಾಲಗಂಗಾಧರರು ನಮ್ಮ ಸಮಾಜಕ್ಕೆ ದಿಕ್ಕನ್ನು ತೋರಿಸಿದರು. ಸಮಾಜದ ಜನರಿಗೆ ಗೌರವ ತಂದು ಕೊಟ್ಟರು. ಸಮಾಜದ ಅಧಿಕಾರಿಗಳು ಭಯ ದಿಂದ ಕೆಲಸ ಮಾಡುತ್ತಿದ್ದ ಸಂದರ್ಭ ದಲ್ಲಿ ತಲೆ ಎತ್ತಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟರು. ಇದು ನಿಜಕ್ಕೂ ಹೆಮ್ಮೆಯ ಸಂಗತಿ ಎಂದರು.

ಬಾಲಗಂಗಾಧರ ಶ್ರೀಗಳು ಹುಟ್ಟಿಲ್ಲ ಎಂದಿದ್ದರೆ ನಮ್ಮ ಸಮಾಜ ಏನಾಗುತ್ತಿತ್ತು. ಬಾಲಗಂಗಾಧರರು ಹುಟ್ಟಿದ್ದು ನಮ್ಮ ಸಮಾಜದ ಪುಣ್ಯ. ಆತ್ಮಗೌರವ, ಶಕ್ತಿ ಎಲ್ಲವನ್ನು ತಂದುಕೊಟ್ಟರು. ಅದನ್ನು ನಾವು ಸ್ಮರಣೆ ಮಾಡಬೇಕು. ಶ್ರೀ ಮಠ ಇಂದು ಈ ಮಟ್ಟಕ್ಕೆ ಬೆಳೆದಿದೆ. ಅದಕ್ಕೆ ಶ್ರೀಗಳೇ ಕಾರಣ. ಈ ಮಠಕ್ಕೆ ರಾಷ್ಟ್ರಕವಿ ಕುವೆಂಪು ಬಂದು ಹೋಗಿದ್ದಾರೆ. ಮಣ್ಣಿನ ಮಗ ದೇವೇಗೌಡರು, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಈ ಮಠದ ಭಕ್ತರು. ಇವರೆಲ್ಲರೂ ಮಠವನ್ನು ಗುರುತಿಸಿದರು. ಆದ್ದರಿಂದ ಮಠಕ್ಕೆ ದೊಡ್ಡ ಗೌರವ ಬಂದಿದೆ ಎಂದರು. ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾ ನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಿವಾನಂದ ಆಶ್ರಮದ ಪೀಠಾಧ್ಯಕ್ಷ ಶ್ರೀಪರಮಾತ್ಮಾ ನಂದ ಸರಸ್ವತಿ ಸ್ವಾಮೀಜಿ, ಮಾದಾರ ಗುರುಪೀಠದ ಶ್ರೀಮಾದಾರಚನ್ನಯ್ಯ ಸ್ವಾಮೀಜಿ, ಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ, ಶ್ರೀಗೋಸಾಯಿ ಮಹಾಸಂಸ್ಥಾನ ಮಠದ ಶ್ರೀಮಂಜುನಾಥ ಭಾರತಿ ಸ್ವಾಮೀಜಿ, ಶ್ರೀಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠದ ಪುರುಷೋತ್ತಮಾನಂದಶ್ರೀ ಹಾಗೂ ಪ್ರಸನ್ನನಾಥಶ್ರೀ, ಶಾಸಕ ಡಾ.ಸಿ.ಅಶ್ವಥ್ ನಾರಾಯಣ್, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕರಾದ ಕೆ.ಸುರೇಶ್ ಗೌಡ, ಡಾ.ಕೆ.ಅನ್ನದಾನಿ ಉಪಸ್ಥಿತರಿದ್ದರು.

ಆದಿಚುಂಚನಗಿರಿ ಅಭಿವೃದ್ಧಿಗೆ ಬಾಲಗಂಗಾಧರಶ್ರೀಗಳೇ ಕಾರಣ: ಜಿಟಿಡಿ

ಮಂಡ್ಯ: ಇಡೀ ದೇಶಕ್ಕೆ ತಮ್ಮ ಸಾಮಾಜಿಕ ಸೇವೆಯಿಂದ ಒಕ್ಕಲಿಗ ಮಠವೊಂದಿದೆ ಎಂದು ತೋರಿಸಿಕೊಟ್ಟವರು ಬಾಲಗಂಗಾಧರನಾಥ ಶ್ರೀಗಳು. ಆದಿಚುಂಚನಗಿರಿ ಕ್ಷೇತ್ರ ಹಲವು ದಶಕಗಳ ಹಿಂದೆ ಹೇಗಿತ್ತು ಎಂಬುದು ಎಲ್ಲರಿಗೂ ಗೊತ್ತು. ಆದರೆ ಈ ಕ್ಷೇತ್ರ ಈಗ ಈ ಮಟ್ಟಕ್ಕೆ ಅಭಿವೃದ್ಧಿಯಾಗಿದೆ ಎಂದರೆ ಅದಕ್ಕೆ ಬಾಲಗಂಗಾಧರರು ಕಾರಣ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಶಿಕ್ಷಣ, ಊಟ, ಸಾಮಾಜಿಕ ಸೇವೆ ಮೂಲಕ ಯಾವುದೇ ಜಾತಿ, ಪಂಥ, ಧರ್ಮ ನೋಡದೇ ಎಲ್ಲರನ್ನು ಒಂದೇ ರೀತಿ ಬಾಲಗಂಗಾಧರರು ಕಾಣುತ್ತಿದ್ದರು. ಗ್ರಾಮೀಣ ಬಡ, ದಲಿತ ಮಕ್ಕಳಿಗೆ ಶ್ರೀಮಠದಲ್ಲಿ ಉಚಿತ ಶಿಕ್ಷಣ ನೀಡಿ, ಅವರಿಗೆ ಸಾಮಾಜಿಕ ಪಾಠ ಮಾಡಿದ್ದು ಬಾಲಗಂಗಾಧರರು. ಜಾತ್ಯಾತೀತವಾಗಿ ಎಲ್ಲರನ್ನು ಮಠದ ಭಕ್ತರನ್ನಾಗಿ ಸ್ವೀಕಾರ ಮಾಡಿದರು. ಶ್ರೀಗಳು ಹಾಕಿಕೊಟ್ಟ ಹಾದಿಯಲ್ಲಿ ನಾವು ಸಾಗಬೇಕಿದೆ. ಹಳ್ಳಿಯಲ್ಲೇ ಆಸ್ಪತ್ರೆ ಕಟ್ಟಬೇಕೆಂಬ ಉದ್ದೇಶದಿಂದ ಮಠ, ಕಾಲೇಜು, ಧಾರ್ಮಿಕ ಸಂಸ್ಥೆ ಕಟ್ಟಿದ್ದಾರೆ. ನಗರದಲ್ಲಿ ಆಸ್ಪತ್ರೆ ಕಟ್ಟಿ ಹಣ ಮಾಡಬೇಕೆಂಬ ಉದ್ದೇಶ ಇರುವವರ ನಡುವೆ ಸ್ವಾಮೀಜಿ ಗ್ರಾಮೀಣ ಮಕ್ಕಳಿಗೆ ಅನುಕೂಲವಾಗಲಿ ಎಂದು ಆದಿಚುಂಚನಗಿರಿಯಲ್ಲಿ ಆಸ್ಪತ್ರೆ ಕಟ್ಟಿದರು ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ನೀರಾವರಿಗಾಗಿ ಮಂತ್ರಿ ಸ್ಥಾನ ತ್ಯಾಗ ಮಾಡಿದರು. ಆಗ ಬಾಲಗಂಗಾಧರ ಶ್ರೀಗಳು ಒಕ್ಕಲಿಗ ಸಮುದಾಯಕ್ಕೆ ಸಿಎಂ ಸ್ಥಾನ ಸಿಗುತ್ತಿಲ್ಲವೆಂದು 1994ರಲ್ಲಿ ಸಮಾಜದ ಜನರಿಗೆ ಹೋರಾಟಕ್ಕೆ ಕರೆ ಕೊಟ್ಟರು. ಆಗ ಲಕ್ಷಾಂತರ ಒಕ್ಕಲಿಗರು ಸಭೆಯಲ್ಲಿ ಭಾಗವಹಿಸಿ, ಹೋರಾಡಿದ ಫಲವಾಗಿ ರಾಜ್ಯದ ಮುಖ್ಯಮಂತ್ರಿಯಾಗಿ 18 ತಿಂಗಳ ಕಾಲ ದೇವೇಗೌಡರು ಆಳ್ವಿಕೆ ನಡೆಸಿದರು. ತಮ್ಮ ಅವಧಿಯಲ್ಲಿ ದೀನ ದಲಿತರು, ಮಹಿಳೆಯರಿಗೆ ಸ್ಥಳೀಯ ಸಂಸ್ಥೆಯಲ್ಲಿ ಮೀಸಲಾತಿ ತಂದು ಕೊಟ್ಟರು ಎಂದು ಬಣ್ಣಿಸಿದರು. ಹತ್ತೂವರೆ ತಿಂಗಳು ಪ್ರಧಾನಿಯಾಗಿ ದೇಶಕ್ಕೆ ದೇವೇಗೌಡರು ಕೀರ್ತಿ ತಂದರು. ಹಿಂದಿ ಬರಲ್ಲ ಎಂದು ಅಣಕಿಸಿದ ಜನರೆದುರು ಹಿಂದಿ ರಾಜ್ಯಗಳ ಜನರಿಂದ ಮೆಚ್ಚುಗೆ ಪಡೆದರು. ಅವರ ಆಡಳಿತ ಮೆಚ್ಚಿ ಪ್ರಧಾನಿ ಮೋದಿ ದೇವೇಗೌಡರನ್ನು ಆಲಂಗಿಸುತ್ತಿದ್ದಾರೆ ಎಂದರು.

ಲೋಕಸಭಾ ಚುನಾವಣೆಯಲ್ಲಿ ತಟಸ್ಥ

ಮಂಡ್ಯ, ಜ.18– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಟಸ್ಥನಾಗಿ ಉಳಿಯಲು ನಿರ್ಧರಿಸಿದ್ದೇನೆ ಎಂದು ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಘೋಷಿಸಿದರು.



ನಗರದ ಪಿಎಲ್‌ಡಿ ಬ್ಯಾಂಕ್‌ನಲ್ಲಿ ಜಿ.ಮಾದೇಗೌಡ ಸಭಾಂಗಣ ಲೋಕಾರ್ಪಣೆಗೊಳಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಗೊಂದಲ ಇದೆ. ನಾನಂತೂ ತಟಸ್ಥವಾಗಿರಲು ನಿರ್ಧರಿಸಿದ್ದೇನೆ. ಇದಕ್ಕೆ ಸೂಕ್ತ ಕಾಲದಲ್ಲಿ ಉತ್ತರ ನೀಡಲಿದ್ದೇನೆ ಎಂದರು.

ಸಂಸದೆ ಸುಮಲತಾ ಅಂಬರೀಶ್ ಕಾಂಗ್ರೆಸ್ ಅಭ್ಯರ್ಥಿಯಾಗಲಿದ್ದಾರಾ ಎಂಬ ಪ್ರಶ್ನೆಗೂ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸಭೆ ನಡೆದಿದೆ. ಗೊಂದಲ ಇರುವುದರಿಂದ ನಾನು ತಟಸ್ಥವಾಗಿರುತ್ತೇನೆ ಎಂದು ಉತ್ತರಿಸಿದರು.

ಬಿಜೆಪಿ ಸಂಸದ ಅನಂತ್ ಕುಮಾರ್ ಹೆಗಡೆ ತಲೆ ಸರಿ ಇಲ್ಲ. ಆತನ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯ ಇಲ್ಲ. ನಮ್ಮೂರಲ್ಲೂ ರಾಮಮಂದಿರ ಇದೆ. ನಾನು ಅಲ್ಲಿಯೇ ಪೂಜೆ ಮಾಡಿಕೊಳ್ಳುತ್ತೇನೆ. ಚುನಾವಣೆಗೋಸ್ಕರ ಬಿಜೆಪಿ ಪಕ್ಷದವರು ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಮಾಡುತ್ತಿದ್ದಾರೆ. ಚುನಾವಣೆ ಬರುತ್ತಿದೆ ಎಂದರೆ ಪುಲ್ವಾಮಾ ದಾಳಿ ಕೂಡ ನಡೆಯುತ್ತೆ. ರಾಮಮಂದಿರವೂ ಉದ್ಘಾಟನೆ ಆಗುತ್ತದೆ ಎಂದರು.

ಮನೆ ಬಾಗಿಲು ಮುರಿದು ನಗದು, ಚಿನ್ನಾಭರಣ ಕಳವು

ಮದ್ದೂರು, ಜ.18– ಮನೆ ಬಾಗಿಲು ಮುರಿದು ದುಷ್ಕರ್ಮಿಗಳು ಲಕ್ಷಾಂತರ ರೂ. ನಗದು ಹಾಗೂ ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ಪಟ್ಟಣದ ಕೆ.ಹೆಚ್. ನಗರದಲ್ಲಿ ಬುಧವಾರ ತಡರಾತ್ರಿ ನಡೆದಿದೆ.

ಕೆ.ಹೆಚ್.ನಗರದ ನಿವಾಸಿ ಲೇ.ಕೆ.ತಮ್ಮಯ್ಯ ಅವರ ಪುತ್ರ ಡಾ.ಟಿ.ಚಂದ್ರು ಅವರ ಮನೆ ಬಾಗಿಲು ಮುರಿದು ಒಳ ನುಗ್ಗಿರುವ ದುಷ್ಕರ್ಮಿಗಳು ಸುಮಾರು 8 ಲಕ್ಷ ರೂ., 40 ಲಕ್ಷ ರೂ. ಬೆಲೆ ಬಾಳುವ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.

ಚಂದ್ರು ಕುಟುಂಬ ಸಮೇತರಾಗಿ ಬುಧವಾರ ಬೆಳಗ್ಗೆ ಕಾಂಚಿಪುರಂಗೆ ಪ್ರವಾಸಕ್ಕೆ ತೆರಳಿದ್ದರು. ಇದನ್ನು ಗಮನಿಸಿದ್ದ ದುಷ್ಕರ್ಮಿಗಳು ರಾತ್ರಿ ಮನೆ ಬಾಗಿಲು ಮುರಿದು ಒಳನುಗ್ಗಿ 14 ಚಿನ್ನದ ಬಳೆಗಳು, 4 ಜೊತೆ ಡೈಮಂಡ್ ಓಲೆಗಳು, 2 ಕರಿಮಣಿ ಸರ, 1 ಚಿನ್ನದ ತುಳಸಿ ಹಾರ, 5 ಚಿನ್ನದ ಸರಗಳು, 3 ವೈಟ್ ಪೆಂಡೆಂಟ್, 3 ಗ್ಲೋಡ್ ಪೆಂಡೆಂಟ್ ಹಾಗೂ 2 ಎಳೆ ಚಿನ್ನದ ಸರ ಹಾಗೂ ಗ್ರೀನ್ ಪೆಂಡೆಂಟ್ ಚಿನ್ನದ ಸರ ಕದ್ದೊಯ್ದಿದ್ದಾರೆ. ಡಾ.ಟಿ.ಚಂದ್ರು ಅವರು ತೈಲೂರಮ್ಮ ದೇವಾಲಯದ ಟ್ರಸ್ಟ್ ಅಧ್ಯಕ್ಷರಾಗಿದ್ದು, ದೇವಾಲಯಕ್ಕೆ ಸಂಬಂಧಿಸಿದ್ದ 8 ಲಕ್ಷ, ಚಿನ್ನದ ಬಿಳಿಕಲ್ಲಿನ ಗುಂಡಿನ ಸರ ಹಾಗೂ ಇತರೆ ಆಭರಣಗಳನ್ನು ದೋಚಿ ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸರಿಗೆ ಡಾ.ಚಂದ್ರು ಮಾಹಿತಿ ನೀಡಿದ್ದಾರೆ.

ಗುರುವಾರ ಬೆಳಗ್ಗೆ ಸಹೋದರನ ಪುತ್ರ ಮನೆ ಬಳಿ ಬಂದಾಗ ಪ್ರಕರಣ ಬೆಳಕಿಗೆ ಬಂದಿದ್ದು, ಬಳಿಕ ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ಶ್ವಾನದಳ, ಬೆರಳಚ್ಚು ತಜ್ಞರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಅಗತ್ಯ ಮಾಹಿತಿ ಕಲೆಹಾಕಿದ್ದು ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಗಂಗಾಧರ್, ಮಳವಳ್ಳಿ ಡಿವೈಎಸ್‌ಪಿ ಕೃಷ್ಣಪ್ಪ ಮತ್ತು ವೃತ್ತ ನಿರೀಕ್ಷಕ ಶಿವಕುಮಾರ್, ವೆಂಕಟೇಗೌಡ ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮವಹಿಸಿದ್ದು ಮದ್ದೂರು ಎಸ್‌ಐ ಮಂಜುನಾಥ್ ನೇತೃತ್ವದಲ್ಲಿ ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿದೆ.

ಕಲ್ಲಡ್ಕ ಪ್ರಭಾಕರ್ ಭಟ್ ಪರ ವಾದ ಮಾಡಿದ್ದ ವಕೀಲ ಕಾಂಗ್ರೆಸ್‌ನಿಂದ ಉಚ್ಚಾಟನೆ

ಮಂಡ್ಯ, ಜ.18– ಮುಸ್ಲಿಂ ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಪರ ವಕಾಲತ್ತು ವಹಿಸಿ, ನಿರೀಕ್ಷಣಾ ಜಾಮೀನು ಕೊಡಿಸಿದ ಶ್ರೀರಂಗಪಟ್ಟಣ ಕ್ಷೇತ್ರದ ಕಾಂಗ್ರೆಸ್ ಕಾನೂನು ಘಟಕದ ತಾಲೂಕು ಅಧ್ಯಕ್ಷ ಡಿ.ಚಂದ್ರೇಗೌಡರನ್ನು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿಸಲಾಗಿದೆ.

ವಕೀಲ ಡಿ.ಚಂದ್ರೇಗೌಡ, ಕಲ್ಲಡ್ಕ ಪ್ರಭಾಕರ್ ಭಟ್ ಪ್ರಚೋದನಾಕಾರಿ ಭಾಷಣ ಮಾಡಿದ ಹಾಗೂ ಮುಸ್ಲಿಂ ಮಹಿಳೆಯರ ಬಗ್ಗೆ ಆಕ್ಷೇಪಾರ್ಹ ಭಾಷಣ ಮಾಡಿದ ಆರೋಪದಡಿ ಕಲಂ 354, 294, 509, 506, 295, 298 ಇತ್ಯಾದಿ ಅಡಿ ದಾಖಲಾಗಿರುವ ಪ್ರಕರಣವೊಂದಕ್ಕೆ ಸಂಬಂಧಪಟ್ಟಂತೆ ಕಲ್ಲಡ್ಕ ಪ್ರಭಾಕರ್ ಪರ ವಕಾಲತ್ತು ವಹಿಸಿ, ಅವರಿಗೆ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಕೊಡಿಸಿದ್ದು, ಈ ನಡವಳಿಕೆ ಕಾಂಗ್ರೆಸ್ ಪಕ್ಷದ ಕಾನೂನು ಘಟಕದ ನಿಯಮ ನಿಬಂಧನೆಗಳಿಗೆ ವಿರುದ್ಧವಾಗಿರುವುದರಿಂದ ಅವರನ್ನು ಶ್ರೀರಂಗಪಟ್ಟಣ ತಾಲೂಕು ಕಾನೂನು ಘಟಕದ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಲಾಗಿದೆ ಎಂದು ಕಾನೂನು ಘಟಕದ ಮಂಡ್ಯ ಜಿಲ್ಲಾಧ್ಯಕ್ಷ ಎ.ಎಸ್.ಗೌರಿಶಂಕರ್ ತಿಳಿಸಿದ್ದಾರೆ.

ರೈತರ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ಅಪಾರ

ಭಾರತೀಪುರದಲ್ಲಿ ಸಹಕಾರ ಸಂಘ ಉದ್ಘಾಟಿಸಿದ ಶಾಸಕ ಹೆಚ್.ಟಿ. ಮಂಜು


ಕೆ.ಆರ್.ಪೇಟೆ ತಾಲೂಕಿನ ಭಾರತೀಪುರದಲ್ಲಿ ನೂತನ ಸಹಕಾರ ಸಂಘವನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಕೆ.ಆರ್.ಪೇಟೆ, ಜ.18– ರೈತರ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ಅಪಾರ. ಹೀಗಾಗಿ ಸಹಕಾರ ಸಂಘಗಳಲ್ಲಿ ರಾಜಕೀಯ ಮಾಡದೇ ಅವುಗಳ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಭಾರತೀಪುರ ಗ್ರಾಮದಲ್ಲಿ ನೂತನ ಭಾರತೀಪುರ ಕ್ರಾಸ್ ಪ್ರಾಥಮಿಕ ಕೃಷಿ ಪತ್ತಿನ ವಿವಿಧೋದ್ದೇಶ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಬೆನ್ನೆಲುಬು ರೈತ. ರೈತರ ಬೆನ್ನೆಲುಬು ಸಹಕಾರ ಸಂಘಗಳಾಗಿವೆ. ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ಸಾಲ ನೀಡುತ್ತಿರುವ ಏಕೈಕ ಸಂಸ್ಥೆ ಎಂದರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು. ರೈತರು ಖಾಸಗಿಯವರಿಂದ ಸಾಲ ಪಡೆಯದೇ ಸಹಕಾರ ಸಂಘದಲ್ಲಿ ಸಾಲ ಪಡೆದು ಸಕಾಲದಲ್ಲಿ ಮರುಪಾವತಿ ಮಾಡಬೇಕು. ಇಂತಹ ಸಹಕಾರಿ ವ್ಯವಸ್ಥೆ ಭದ್ರಪಡಿಸಲು ಎಲ್ಲಾ ಸಹಕಾರಿ ಧುರೀಣರು, ರೈತರು ಪೂರ್ಣ ಸಹಕಾರ ನೀಡಬೇಕಾಗಿದೆ. ನಾನೂ ಸಹ ಶಾಸಕನಾಗಿ ಸಹಕಾರ ಸಂಘದ ಸಮಗ್ರ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಮಂಡ್ಯ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ ಮಾತನಾಡಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿದರೆ ಸಂಘದ ಅಭಿವೃದ್ಧಿ ಸಾಧ್ಯವಿಲ್ಲ. ಅಲ್ಲದೇ ರಾಜಕೀಯ, ಗುಂಪುಗಾರಿಕೆ ಸೃಷ್ಟಿಯಾಗುತ್ತದೆ. ಹೊಸ ಸಂಘವಾಗಿರುವ ಕಾರಣ ಸಂಘದ ವ್ಯಾಪ್ತಿಯ ಎಲ್ಲಾ ಮುಖಂಡರು ಸಂಘದ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಘದ ಮುಖ್ಯ ಪ್ರವರ್ತಕ ಕೆ.ಎಸ್.ದಿನೇಶ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ರಾಜ್ಯ ನಿರ್ದೇಶಕ ಎಸ್.ಎಲ್.ಮೋಹನ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾವ್, ತಾಪಂ ಮಾಜಿ ಸದಸ್ಯ ಮೋಹನ್, ಶಿವಣ್ಣ, ಸಂತೇಬಾಚಹಳ್ಳಿ ಹೋಬಳಿ ಜೆಡಿಎಸ್ ಅಧ್ಯಕ್ಷ ರವಿಕುಮಾರ್, ಗ್ರಾಪಂ ಅಧ್ಯಕ್ಷ ಕುಬೇರ, ಸಂಘದ ಪ್ರವರ್ತಕ ಕೆ.ಎಸ್.ದಿನೇಶ್, ಗಣೇಶ್, ಕೃಷ್ಣೇಗೌಡ, ಎಸ್.ಎನ್.ಪ್ರಭಾಕರ್, ಚಂದ್ರಹಾಸ, ದೇವರಾಜು, ಕೆ.ಎನ್.ರವಿ, ಕೃಷ್ಣೇಗೌಡ, ಬಿ.ದೇವರಾಜು, ಚಂದ್ರೇಗೌಡ, ಮಂಜೇಗೌಡ, ಕುಮಾರ್, ಯುವ ಮುಖಂಡ ಕೃಷ್ಣೇಗೌಡ, ಮುಖಂಡರಾದ ಪುಟ್ಟಣ್ಣ, ಮಂಜುನಾಥ್, ಕೆ.ಎಸ್.ರವಿಚಂದ್ರ, ಟಿಎಪಿಸಿಎಂಎಸ್ ಉಪಾಧ್ಯಕ್ಷ ಮೋಹನ್, ನಿರ್ದೇಶಕರಾದ ಬಲದೇವ್, ಮಂಜುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷರಾದ ಚಂದ್ರೇಗೌಡ, ಚಂದ್ರಹಾಸ, ಸಾರಂಗಿ ಸೊಸೈಟಿ ಅಧ್ಯಕ್ಷ ಎಸ್.ಎನ್.ನಾಗೇಶ್, ಪಿಡಿಓ ದಿನೇಶ್‌ಕುಮಾರ್, ಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಆದಿಲ್ ಪಾಷಾ, ಡಿಸಿಸಿ ಬ್ಯಾಂಕ್ ತಾಲೂಕು ವ್ಯವಸ್ಥಾಪಕ ಅಶ್ವತ್, ಸಂಘದ ಸಿಇಓ ಮುರಳೀಧರ್ ಸೇರಿದಂತೆ ನೂರಾರು ಷೇರುದಾರರು ಹಾಗೂ ವಿವಿಧ ಗ್ರಾಮಗಳ ಮುಖಂಡರು, ಸಹಕಾರಿ ಧುರೀಣರು ಉಪಸ್ಥಿತರಿದ್ದರು.

ಲೋಕಸಭೆಗೆ ಸಚಿವ ಮಹದೇವಪ್ಪರನ್ನು ಕಣಕ್ಕಿಳಿಸಿ ಬಲಿ ಪಶು ಮಾಡಲು ಸಂಚು

ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು ಆರೋಪ

ತಿ.ನರಸೀಪುರ, ಜ.18– ರಾಜ್ಯದ ಮುಖ್ಯಮಂತ್ರಿ ಆಗುವ ಅರ್ಹತೆ ಹೊಂದಿರುವ ಹಿರಿಯ ಮುತ್ಸದ್ದಿ ರಾಜಕಾರಣಿ ಹಾಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪನವರನ್ನು ಚಾಮರಾಜನಗರ ಲೋಕಸಭೆಗೆ ನಿಲ್ಲಿಸಿ ಬಲಿ ಪಶು ಮಾಡಲು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಚು ರೂಪಿಸಿದ್ದಾರೆ ಎಂದು ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು ಆಪಾದಿಸಿದ್ದಾರೆ.


ಬಸವರಾಜು

ಲೋಕಸಭೆ ಚುನಾವಣೆಯ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದಿಲ್ಲ, ರಾಜ್ಯದಲ್ಲೇ ಕಾಂಗ್ರೆಸ್ ಮೂರು ಭಾಗವಾಗಲಿದೆ. ಸಿದ್ದರಾಮಯ್ಯನವರು ತಮ್ಮ ಬೆಂಬಲಿಗ 63ಕ್ಕೂ ಹೆಚ್ಚು ಶಾಸಕರೊಂದಿಗೆ ಬಿಜೆಪಿ ಜೊತೆ ಸೇರಿ ಐದು ವರ್ಷ ಮುಖ್ಯಮಂತ್ರಿ ಆಗಿರಲು ರಾಜ್ಯ ಬಿಜೆಪಿ ಸರ್ವೋಚ್ಚ ನಾಯಕರೊಂದಿಗೆ ಒಳಒಪ್ಪಂದ ಮಾಡಿಕೊಂಡಿದ್ದಾರೆ. ಅದಕ್ಕಾಗಿ ತಮ್ಮ ಅಧಿಕಾರ ಪೂರ್ಣಾವಧಿಗೊಳ್ಳಲು ಅಡ್ಡಗಾಲು ಹಾಕುವ ಸಚಿವರನ್ನು ಲೋಕಸಭೆ ಚುನಾವಣೆಗೆ ನಿಲ್ಲಿಸಿ ಬಲಿ ಪಶು ಮಾಡಲು ಹೊರಟಿದ್ದಾರೆ ಎಂದರು. ಕಳೆದ ಬಾರಿ ಅವರೇ ಮುಖ್ಯಮಂತ್ರಿ ಆಗಿದ್ದ ವೇಳೆ ವಿ.ಶ್ರೀನಿವಾಸಪ್ರಸಾದ್ ಅವರನ್ನು ಸಚಿವ ಸ್ಥಾನದಿಂದ ಕೆಳಗಿಳಿಸಿದ್ದರು. ಈಗ ಹಿರಿಯ ಸಚಿವ, ಶ್ರೇಷ್ಠ ಮುತ್ಸದ್ದಿ ರಾಜಕಾರಣಿ ಮುಖ್ಯಮಂತ್ರಿ ಆಗುವ ಅರ್ಹತೆ ಇರುವ ಡಾ.ಎಚ್.ಸಿ. ಮಹದೇವಪ್ಪನವರನ್ನು ಚಾಮರಾಜನಗರ ಲೋಕಸಭೆಗೆ ನಿಲ್ಲಿಸಿ ಬಲಿ ಪಶು ಮಾಡಲು ಹೊರಟಿದ್ದಾರೆ ಎಂದರು.

ಯತೀಂದ್ರ ಹೇಳಿಕೆಗೆ ಕಿಡಿ: ಭಾರತ ಹಿಂದೂ ರಾಷ್ಟ್ರವಾದರೆ ಅಪಾಯ ಎಂಬ ಯತೀಂದ್ರ ಸಿದ್ದರಾಮಯ್ಯ ನವರ ಹೇಳಿಕೆಯನ್ನು ಖಂಡಿಸಿದ ಬಸವರಾಜು ಸನಾತನ ಕಾಲದಿಂದಲೂ ಭಾರತ ಯಾವತ್ತೂ ಹಿಂದೂ ರಾಷ್ಟ್ರವೇ ಆಗಿದೆ.ಭಾರತ ಹಿಂದೂ ರಾಷ್ಟ್ರವಾಗಿರುವುದರಿಂದಲೇ ಅಂಬೇಡ್ಕರ್ ರವರ ವಿಶ್ವ ಶ್ರೇಷ್ಠ ಸಂವಿಧಾನ ಉಳಿದಿರುವುದು. ಯಾವಾಗ ಭಾರತ ಹಿಂದೂ ರಾಷ್ಟ್ರವಾಗಿರುವುದಿಲ್ಲವೋ ಆಗ ನಮ್ಮ ಸಂವಿಧಾನವೂ ಉಳಿದಿರುವುದಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಇಮ್ಮಾವು ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ನಂಜನಗೂಡು: ತಾಲೂಕಿನ ಇಮ್ಮಾವು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ಮಹೇಂದ್ರ, ಉಪಾಧ್ಯಕ್ಷರಾಗಿ ಪ್ರಭುಸ್ವಾಮಿ ಅವಿರೋಧವಾಗಿ ಆಯ್ಕೆಯಾದರು.

12 ಸದಸ್ಯ ಬಲದ ಹಾಲು ಉತ್ಪಾದಕರ ಸಂಘದ ಕಚೇರಿಯಲ್ಲಿ ಗುರುವಾರ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಸಿ.ಮಹೇಂದ್ರ ಉಪಾಧ್ಯಕ್ಷ ಸ್ಥಾನಕ್ಕೆ ಪ್ರಭುಸ್ವಾಮಿ ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ರಮೇಶ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಸಿ.ಮಹೇಂದ್ರ ಮಾತನಾಡಿ ನಿರ್ದೇಶಕರ ಸಹಕಾರದಿಂದ ನಾನು ಅವಿರೋಧವಾಗಿ ಆಯ್ಕೆಯಾಗಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಸಹಕಾರ ಸಂಘದಿಂದ ರೈತರಿಗೆ ಅನುಕೂಲವಾಗುವಂತೆ ಸರ್ಕಾರದ ಸವಲತ್ತುಗಳನ್ನು ತಲುಪಿಸುವ ಜೊತೆಗೆ ರೈತರಲ್ಲಿ ಹೈನುಗಾರಿಕೆಯನ್ನು ಅನುಸರಿಸುವಂತೆ ಉತ್ತೇಜನ ನೀಡುವ ಜೊತೆಗೆ ಸಂಘದ ಉನ್ನತಿಗೆ ಶ್ರಮಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ನಿರ್ದೇಶಕರಾದ ಎಂ.ನಾಗರಾಜು, ಪ್ರಮೋದ್, ಬಸವರಾಜು, ಎಂ.ಪ್ರಕಾಶ್, ಗಿರೀಶ್, ರಾಜಮ್ಮ, ಮಹದೇವಮ್ಮ, ಅಣ್ಣಪ್ಪಸ್ವಾಮಿ, ಪ್ರಕಾಶ್ ಹಾಗೂ ಪ್ರಮುಖರು ಇದ್ದರು.

ಶ್ರೀರಂಗಪಟ್ಟಣ ಟಿಎಪಿಸಿಎಂಎಸ್‌ಗೆ ನಂದೀಶ್ ಅಧ್ಯಕ್ಷ


ಶ್ರೀರಂಗಪಟ್ಟಣ ಟಿಎಪಿಸಿಎಂಎಸ್‌ಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ನಂದೀಶ್ ಅವರನ್ನು ಶಾಸಕ ರಮೇಶ್‌ಬಾಬು, ಇತರರು ಅಭಿನಂದಿಸಿದರು.

ಶ್ರೀರಂಗಪಟ್ಟಣ, ಜ.18– ಪಟ್ಟಣದ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ನಂದೀಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

11 ಮಂದಿ ಚುನಾಯಿತ ನಿರ್ದೇಶಕರು, ಓರ್ವ ಡಿಸಿಸಿ ಬ್ಯಾಂಕ್ ನಿರ್ದೇಶಕ, ಇಬ್ಬರು ಅಧಿಕಾರಿ ವರ್ಗ, ಓರ್ವ ಸರ್ಕಾರದ ನಾಮಿನಿ ಸೇರಿ ಒಟ್ಟು 15 ನಿರ್ದೇಶಕರ ಪೈಕಿ 11 ಮಂದಿ ನಂದೀಶ್ ಪರವಾಗಿದ್ದರಿಂದ ಅಧ್ಯಕ್ಷ ಸ್ಥಾನಕ್ಕೆ ನಂದೀಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಒ ರವಿ ಘೋಷಿಸಿದರು.

ನಿಕಟಪೂರ್ವ ಅಧ್ಯಕ್ಷ ಎಂ.ದಿವಾಕರ್ ವಿರುದ್ಧ ನಿರ್ದೇಶಕರು ಅವಿಶ್ವಾಸ ನಿರ್ಣಯ ಮಂಡಿಸಿ ಪದಚ್ಯುತಿಗೊಳಿಸಿದ್ದರಿಂದ, ಟಿಎಪಿಸಿಎಂಎಸ್‌ನ ಹಂಗಾಮಿ ಅಧ್ಯಕ್ಷರಾಗಿ ಉಪಾಧ್ಯಕ್ಷೆ ಲಕ್ಷ್ಮಿದೇವಮ್ಮ ಕಾರ್ಯ ನಿರ್ವಹಿಸುತ್ತಿದ್ದರು. ಇದೀಗ ನೂತನ ಅಧ್ಯಕ್ಷರಾಗಿ ನಂದೀಶ್ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷರನ್ನು ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಸೇರಿದಂತೆ ಇನ್ನಿತರರು ಅಭಿನಂದಿಸಿದರು. ಈ ವೇಳೆ ಮನ್‌ಮುಲ್ ಅಧ್ಯಕ್ಷ ಬೋರೇಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಚಂದ್ರಶೇಖರ್, ಪುರಸಭಾ ಸದಸ್ಯ ಎಂ.ಎಲ್.ದಿನೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಸ್ವಾಮಿಗೌಡ, ದಯಾನಂದ್, ಕಾಂಗ್ರೆಸ್ ನಗರ ಘಟಕ ಅಧ್ಯಕ್ಷ ಎಂ.ಸುರೇಶ್, ಸೋಮಸುಂದರ್ ಸೇರಿದಂತೆ ನಿರ್ದೇಶಕರು ಹಾಗೂ ನೂರಾರು ಮಂದಿ ಕಾಂಗ್ರೆಸ್ ಕಾರ್ಯಕರ್ತರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ಪುಟ್ಟಸ್ವಾಮಿ ನಿಧನ

ಶ್ರೀರಂಗಪಟ್ಟಣ, ಜ.18– ತಾಲೂಕಿನ ಪಾಲಹಳ್ಳಿ ಗ್ರಾಮದ ನಿವಾಸಿ ಪಿ.ಕೆ. ಪುಟ್ಟಸ್ವಾಮಿ(69) ಗುರುವಾರ ನಿಧನರಾದರು.



ಮೃತರು ಪತ್ನಿ, ಮೂವರು ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಶುಕ್ರವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಕ್ಷ್ಮಮ್ಮ

ಕೆ.ಆರ್.ಪೇಟೆ, ಜ.18– ತಾಲೂಕಿನ ನಾಟನಹಳ್ಳಿ ಗ್ರಾಮದ ನಿವಾಸಿ, ನಿವೃತ್ತ ಸರ್ವೇ ಸೂಪರ್‌ವೈಸರ್ ದೇವೇಗೌಡರ ತಾಯಿ ಲಕ್ಷ್ಮಮ್ಮ(85) ಗುರುವಾರ ನಿಧನರಾದರು.



ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಂ.ಗೂಡಲ್ಲಿ ಲಾರಿ ಮಾಲೀಕರು, ಚಾಲಕರ ಮುಷ್ಕರ ಆರಂಭ

ವಾಹನ ಚಾಲಕರಿಗೆ ಮಾರಕವಾಗಿರುವ ಕಾನೂನು ಹಿಂಪಡೆಯಲು ಆಗ್ರಹ

ನಂಜನಗೂಡು, ಜ.18– ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ವಾಹನ ಚಾಲಕರಿಗೆ 10 ವರ್ಷ ಕಠಿಣ ಶಿಕ್ಷೆ 7 ಲಕ್ಷವರೆಗೆ ಭಾರೀ ಪ್ರಮಾಣದ ದಂಡ ವಿಧಿಸುವಂತಹ ಕಾನೂನು ಜಾರಿಗೆ ತರಲು ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿ ಗುರುವಾರ ಲಾರಿ ಚಾಲಕರು ಮತ್ತು ಮಾಲೀಕರ ಸಂಘದ ಪದಾಧಿಕಾರಿಗಳು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

ನಗರದ ಎಪಿಎಂಸಿ ಮಾರುಕಟ್ಟೆಯ ಮುಂಭಾಗ ಜಮಾವಣೆಗೊಂಡ ಪ್ರತಿಭಟನಾಕಾರರು ನಗರದ ಹುಲ್ಲಹಳ್ಳಿ ವೃತ್ತದವರೆಗೆ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿ ಹುಲ್ಲಹಳ್ಳಿ ವೃತ್ತದ ಬಳಿ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿ ತಡೆದು ಮಾನವ ಸರಪಳಿ ನಿರ್ಮಿಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.


ವಾಹನ ಚಾಲಕರಿಗೆ ಮಾರಕವಾಗಿರುವ ಕಾನೂನನ್ನು ಹಿಂಪಡೆಯುವಂತೆ ಆಗ್ರಹಿಸಿ ನಂಜನಗೂಡಿನಲ್ಲಿ ಲಾರಿ ಚಾಲಕರು, ಮಾಲೀಕರು ಪ್ರತಿಭಟನೆ ನಡೆಸಿದರು.

ಲಾರಿ ಚಾಲಕರ ಸಂಘದ ತಾಲೂಕು ಅಧ್ಯಕ್ಷ ಸಿದ್ದಪ್ಪ ಮಾತನಾಡಿ ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ನೂತನ ಕಾಯ್ದೆಯು ವಾಹನ ಚಾಲಕರ ಮನೋಸ್ಥೈರ್ಯವನ್ನು ಕುಗ್ಗಿಸುವಂತಹ ಕಾನೂನಾಗಿದೆ. ವಾಹನ ಚಾಲಕರ ಬಳಿ 7 ಲಕ್ಷದವರೆಗೆ ಹಣವಿದ್ದರೆ ಈ ವಾಹನ ಚಾಲನೆ ವೃತ್ತಿಯನ್ನೇ ಅವಲಂಬಿಸದೆ ಅನ್ಯ ಉದ್ಯೋಗ ಮಾಡಲಿದ್ದಾರೆ. ಅಪಘಾತ ಉದ್ದೇಶ ಪೂರ್ವಕವಾಗಿ ನಡೆಯುವುದಿಲ್ಲ. ಅಂತಹ ಸಂಧರ್ಭದಲ್ಲಿ ಚಾಲಕರಿಗೆ 10 ವರ್ಷ ಜೈಲು, 7 ಲಕ್ಷದವರೆಗೆ ದಂಡ ವಿವಿಧಿಸುವ ಕಾನೂನು ಜಾರಿಯಾದರೆ ನಾವು ಚಾಲಕ ವೃತ್ತಿಯನ್ನೇ ತೊರೆಯಲಿದ್ದೇವೆ. ನಮ್ಮ ಚಾಲನಾ ಪರವಾನಗಿಯನ್ನು ಹಿಂಪಡೆದು ಅನ್ಯ ಉದ್ಯೋಗ ದೊರಕಿಸಿಕೊಡಿ ಎಂದು ತಮ್ಮ ಡಿಎಲ್‌ಗಳನ್ನು ಸುಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಗೃಹ ಸಚಿವರು ನೂತನ ಕಾಯ್ದೆಯ ಸಾಧಕ ಬಾಧಕಗಳ ಬಗ್ಗೆ ಚರ್ಚೆ ನಡೆಸದೆ ಆತುರವಾಗಿ ನಿರ್ಣಯ ಕೈಗೊಂಡಿದ್ದು ಈ ಕೂಡಲೇ ಚಾಲಕರಿಗೆ ಮಾರಕವಾಗಿರುವ ಕಾನೂನನ್ನು ಹಿಂಪಡೆಯಬೇಕು ಅಲ್ಲಿಯವರೆಗೆ ಲಾರಿಗಳನ್ನು ರಸ್ತೆಯಲ್ಲಿಯೇ ನಿಲ್ಲಿಸಿ ನಮ್ಮ ಧರಣಿ ಮುಂದುವರೆಸುತ್ತಿದ್ದೇವೆ ಎಂದರು.

ಗೌರವಾಧ್ಯಕ್ಷ ವಿಶ್ವನಾಥ್ ಮಾತನಾಡಿ ಚಾಲಕರು ನಿರ್ಭೀತಿಯಿಂದ ಚಾಲನೆಯಲ್ಲಿ ತೊಡಗುವಂತಹ ವಾತಾವರಣವನ್ನು ಕೇಂದ್ರ ಸರ್ಕಾರ ಕಲ್ಪಿಸಿಕೊಡಬೇಕು, ಚಾಲಕರಿಗೆ ಹೆದ್ದಾರಿಗಳಲ್ಲಿ ವಿಶ್ರಾಂತಿ ಕೇಂದ್ರ ತೆರೆಯಬೇಕು ಮತ್ತು ಚಾಲಕರಿಗೆ ಮಾರಕವಾಗಿದ್ದು ಕೇಂದ್ರ ಸರ್ಕಾರದ ವಿರುದ್ಧ ಧ್ವನಿ ಎತ್ತುವ ಸಲುವಾಗಿ ಈ ಅನಿರ್ದಿಷ್ಟಾವಧಿ ಲಾರಿ ಮುಷ್ಕರ ಹಮ್ಮಿಕೊಂಡಿದ್ದೇವೆ. ಒಂದು ವೇಳೆ ಕೇಂದ್ರ ಸರ್ಕಾರ ತಮ್ಮ ನಿಲುವು ಬದಲಿಸದಿದ್ದಲ್ಲಿ ನಾಳೆಯಿಂದ ಅಗತ್ಯ ವಸ್ತುಗಳ ಸೇವೆಯನ್ನೂ ನಿಲ್ಲಿಸಿ ಪ್ರತಿಭಟನೆ ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಬಣ್ಣಾರಿ ಅಮ್ಮನ್ ಶುಗರ್ಸ್ ಕಾರ್ಖಾನೆಯ ಲಾರಿ ಚಾಲಕರು, ಲಾರಿ ಚಾಲಕರ ಪರಿಷತ್ ಸದಸ್ಯರು, ಲಾರಿ ಮಾಲೀಕರ ಸಂಘದವರು ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿಭಟನೆಯಲ್ಲಿ ಲಾರಿ ಮಾಲೀಕರ ಸಂಘದ ಜಿಲ್ಲಾಧ್ಯಕ್ಷ ಕೊಂದಂಡರಾಮು, ಲಾರಿ ಚಾಲಕರ ಪರಿಷತ್ ರಾಜ್ಯಾಧ್ಯಕ್ಷ ರಾಜೇಂದ್ರ, ಚಾಲಕರಾದ ಶ್ರೀನಿವಾಸ್, ಸುರೇಶ್, ರಾಜು, ರಫೀಕ್ ಪಾಷ, ಸ್ವಾಮಿ, ಅಭಿ, ನಿಂಗರಾಜು, ಉಮೇಶ, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಭ್ರೂಣ ಹತ್ಯೆ ತಡೆಗೆ ರಾಜ್ಯ, ಜಿಲ್ಲಾ ಮಟ್ಟದಲ್ಲಿ ಕಾರ್ಯಪಡೆ ರಚನೆ

●5 ವರ್ಷ ಜೈಲು, 5 ಲಕ್ಷ ದಂಡ ವಿಧಿಸಲು ಕಾನೂನು ತಿದ್ದುಪಡಿ ಚಿಂತನೆ ●ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ



ಬೆಂಗಳೂರು: ಭ್ರೂಣ ಹತ್ಯೆ ತಡೆಯಲು ಕಠಿಣ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಭ್ರೂಣ ಹತ್ಯೆ ತಡೆಗೆ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯಪಡೆ ರಚಿಸುವುದಾಗಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಗುರುವಾರ PC & PNDT ಕಾಯ್ದೆ ಅಡಿ ರಚಿಸಲಾಗಿದ್ದ ಮೇಲ್ವಿಚಾರಣಾ ಸಮಿತಿಯ ಜೊತೆ ಸಭೆ ನಡೆಸಿದ ಭ್ರೂಣ ಹತ್ಯೆ ವಿಚಾರದಲ್ಲಿ ಜಾಗೃತಿಯ ಜೊತೆಗೆ ಕಠಿಣ ಕ್ರಮಗಳು ಆಗಬೇಕು ಎಂದು ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು.

ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ದಿನೇಶ್ ಗುಂಡೂರಾವ್, ಮೇಲ್ವಿಚಾರಣಾ ಸಮಿತಿಯ ಮೊದಲ ಸಭೆ ಇಂದು ಸೇರಲಾಗಿತ್ತು. ನಾಲ್ವರು ಶಾಸಕಿಯರು ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿಗಳು ಸಮಿತಿಯ ಸದಸ್ಯರಿದ್ದಾರೆ. ಭ್ರೂಣ ಹತ್ಯೆ ತಡೆ ನಿಟ್ಟಿನಲ್ಲಿ ಶಾಸಕಿ ರೂಪಕಲಾ, ನಯನಾ ಮೋಟಮ್ಮ, ಲತಾ ಮಲ್ಲಿಕಾರ್ಜುನ್ ಅವರುಗಳು ತಮ್ಮ ಸಲಹೆಗಳನ್ನು ನೀಡಿದ್ದಾರೆ. ಪ್ರತಿ ಹಂತದಲ್ಲಿ ಮೇಲ್ವಿಚಾರಣೆ ನಡೆಸುವುದರ ಜೊತೆಗೆ, ಹೆಣ್ಣು ಮಕ್ಕಳು ಸಮಾಜಕ್ಕೆ ಎಷ್ಟು ಮುಖ್ಯ ಎಂಬುದರ ಬಗ್ಗೆ ದೊಡ್ಡ ಮಟ್ಟದಲ್ಲಿ ಜಾಗೃತಿ ಮೂಡಿಸಲಾಗುವುದು ಎಂದರು.

ಭ್ರೂಣ ಹತ್ಯೆಗಳ ತಡೆಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ರಾಜ್ಯಮಟ್ಟದಲ್ಲಿ ಆರೋಗ್ಯ ಇಲಾಖೆ ಆಯುಕ್ತರ ನೇತೃತ್ವದಲ್ಲಿ ಟಾಸ್ಕ್ ಫೋರ್ಸ್ ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಜಿಲ್ಲಾ ಮಟ್ಟದಲ್ಲೂ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳನ್ನೊಳಗೊಂಡ ಕಾರ್ಯಪಡೆ ರಚಿಸಲು ನಿರ್ಧರಿಸಿದ್ದೇವೆ. ಈ ಕಾರ್ಯಪಡೆಗಳು ಭ್ರೂಣ ಹತ್ಯೆ ಪ್ರಕರಣಗಳ ವಿಚಾರದಲ್ಲಿ pc & pndt ಕಾಯ್ದೆ ಅಡಿ ಕಾರ್ಯನಿರ್ವಹಿಸಿ ಹೆಚ್ಚಿನ ನಿಗಾ ವಹಿಸಲಿವೆ

ಅಲ್ಲದೇ ಆರೋಗ್ಯ ಇಲಾಖೆಯ ಸಕ್ಷಮ ಪ್ರಾಧಿಕಾರಕ್ಕೆ ಪ್ರತ್ಯೇಕವಾಗಿ ಎಸಿಪಿ ಮಟ್ಟದ ಪೊಲೀಸ್ ಅಧಿಕಾರಿ ಹಾಗೂ ಇಬ್ಬರು ಸಬ್ ಇನ್ಸ್‌ಪೆಕ್ಟರ್ ನಿಯೋಜಿಸುವಂತೆ ಗೃಹ ಇಲಾಖೆಗೆ ಪತ್ರ ಬರೆಯಲಾಗುವುದು. ಇದರಿಂದ ಭ್ರೂಣ ಹತ್ಯೆ ಪ್ರಕರಣಗಳನ್ನ ಟ್ರೇಸ್ ಮಾಡಲು ಸಹಕಾರಿಯಾಗಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

5 ಲಕ್ಷ ದಂಡ; 5 ವರ್ಷ ಜೈಲು ಶಿಕ್ಷೆ: ಭ್ರೂಣ ಹತ್ಯೆ ನಡೆಸುತ್ತಿರುವವರ ಮೇಲೆ ಕಠಿಣ ಕ್ರಮಗಳು ಆಗಬೇಕು ಎಂದು ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ಈಗಿರುವ ಕಾಯ್ದೆಯಲ್ಲಿ 10 ಸಾವಿರ ದಂಡ, 3 ವರ್ಷ ಜೈಲು ಶಿಕ್ಷೆ ಇದೆ. 5 ಲಕ್ಷದ ವರೆಗೆ ದಂಡ ವಿಧಿಸಿ, 5 ವರ್ಷ ಜೈಲು ಶಿಕ್ಷೆ ವಿಧಿಸುವ ನಿಟ್ಟಿನಲ್ಲಿ ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದೇವೆ. ನಾನ್ ಬೇಲಬಲ್ ಕೇಸ್ ಆಗಬೇಕು. ಈ ನಿಟ್ಟಿನಲ್ಲಿ ಮುಂದಿನ ಸಭೆ ತೀರ್ಮಾನ ಕೈಗೊಳ್ಳುವುದಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಜ.25ರಂದು ರಾಷ್ಟ್ರೀಯ ಮತದಾರರ ದಿನಾಚರಣೆ

ಮೈಸೂರು ಜಿಲ್ಲಾ ಸ್ವೀಪ್ ಸಮಿತಿಯಿಂದ ಕಲಾಮಂದಿರದಲ್ಲಿ ಆಯೋಜನೆ



ಮೈಸೂರು ಜಿಪಂ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಸ್ವೀಪ್ ಸಮಿತಿ ಸಭೆ ಗುರುವಾರ ನಡೆಯಿತು.

ಮೈಸೂರು,ಜ.18(ಪಿಎಂ)–ಮೈಸೂರು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಜ.25ರಂದು ಕಲಾಮಂದಿರದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಆಯೋಜಿಸಲಾಗುವುದು ಎಂದು ಜಿಪಂ ಸಿಇಓ ಕೆ.ಎಂ.ಗಾಯತ್ರಿ ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯಿತಿಯ ದೇವರಾಜ ಅರಸು ಸಭಾಂಗಣದಲ್ಲಿ ಗುರುವಾರ ನಡೆದ ರಾಷ್ಟ್ರೀಯ ಮತದಾರರ ದಿನಾಚರಣೆ (ಭಾರತ ಚುನಾವಣಾ ಆಯೋಗದ ಸಂಸ್ಥಾಪನಾ ದಿನದ ನೆನಪಿಗಾಗಿ ಪ್ರತಿವರ್ಷ ಜ.25ರಂದು ಆಚರಿಸಲಾಗುತ್ತದೆ) ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ಲೋಕಸಭಾ ಚುನಾವಣೆ ಇರುವ ಹಿನ್ನೆಲೆಯಲ್ಲಿ ಈ ಬಾರಿಯ ಮತದಾರರ ದಿನ ಅತ್ಯಂತ ಮಹತ್ವದ್ದಾಗಲಿದೆ. ಅರ್ಥಪೂರ್ಣ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಬೇಕು. ಯುವ ಮತದಾರರಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸಲು ವಿಶೇಷ ಒತ್ತು ನೀಡಲು ಅಗತ್ಯ ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಂದು ಬೆಳಗ್ಗೆ 10ಕ್ಕೆ 'ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ' ಘೋಷವಾಕ್ಯದೊಂದಿಗೆ ದಿನಾಚರಣೆ ಆಯೋಜಿಸಬೇಕು. ಚುನಾವಣಾ ರಾಯಭಾರಿ ಜಾವಗಲ್ ಶ್ರೀನಾಥ್ ಸೇರಿದಂತೆ ಜಿಲ್ಲಾ ನ್ಯಾಯಾಧೀಶರು, ಜಿಲ್ಲಾಧಿಕಾರಿಗಳು, ಪೊಲೀಸ್ ಆಯುಕ್ತರು ಹಾಗೂ ಚುನಾವಣಾ ಐಕಾನ್‌ಗಳನ್ನು ಆಹ್ವಾನಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮತದಾನದ ಜಾಗೃತಿ ಕುರಿತಂತೆ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳು ಮತ್ತು ನವ ಮತದಾರರಿಗೆ ಬಹುಮಾನ ವಿತರಿಸಲಾಗುವುದು. ಹೊಸದಾಗಿ ನೋಂದಣಿ ಮಾಡಿಕೊಂಡಿರುವ ಯುವ ಮತದಾರರಿಗೆ ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿಯನ್ನೂ ಇದೇ ವೇಳೆ ನೀಡಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಯಶಸ್ಸಿಗೆ ಎನ್‌ಸಿಸಿ, ಎನ್‌ಎಸ್‌ಎಸ್, ವೈದ್ಯಕೀಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್, ಚುನಾವಣಾ ಸಾಕ್ಷರತಾ ಕ್ಲಬ್ ಸದಸ್ಯರು, ಪ್ಯಾರಾಮೆಡಿಕಲ್ ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕು. ನಗರದ ಪ್ರಮುಖ ವೃತ್ತಗಳಲ್ಲಿ ಬ್ಯಾನರ್, ಪೋಸ್ಟರ್ ಅಳವಡಿಸುವ ಮೂಲಕ ಹೆಚ್ಚು ಪ್ರಚಾರ ನೀಡಬೇಕು. ವಿವಿಧ ಇಲಾಖೆಗಳು ಸಮನ್ವಯದಲ್ಲಿ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಶಾಲಾ ಹಂತ, ಮತಗಟ್ಟೆ ವ್ಯಾಪ್ತಿ ಹಾಗೂ ತಾಲೂಕು ಹಂತದಲ್ಲಿಯೂ ಕಾರ್ಯಕ್ರಮ ಆಯೋಜಿಸಬೇಕು. ಅಲ್ಲದೆ, ಮತದಾನ ಮಾಡುವಂತೆ ಹಿರಿಯ ನಾಗರಿಕರು, ವಿಶೇಷಚೇತನರು, ದುರ್ಬಲ ವರ್ಗದವರು ಮತ್ತು ತೃತೀಯಲಿಂಗಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್, ಉಪ ಆಯುಕ್ತ ಸೋಮಶೇಖರ್, ತೋಟಗಾರಿಕೆ ಇಲಾಖೆ ಅಧಿಕಾರಿ ಶಾಂತ, ಚುನಾವಣಾ ಶಿರಸ್ತೇದಾರ್ ಸುರೇಶ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ರಾಮ ಮಂದಿರ ಉದ್ಘಾಟನೆ: ವಿಜಯಪುರದ ಖಾಸಗಿ ಆಸ್ಪತ್ರೆಯಲ್ಲಿ ಇಂದಿನಿಂದ 22ರ ವರೆಗೆ ಉಚಿತ ಹೆರಿಗೆ!

ವಿಜಯಪುರ: ಅಯೋಧ್ಯೆಯಲ್ಲಿ ರಾಮ ಮಂದಿರದ ಉದ್ಘಾಟನೆಯನ್ನು ಸಂಭ್ರಮಿಸಲು ವಿಜಯಪುರದ ಖಾಸಗಿ ಆಸ್ಪತ್ರೆಯೊಂದು ಜನವರಿ 18 ರಿಂದ ಜನವರಿ 22 ರವರೆಗೆ ಉಚಿತ ಹೆರಿಗೆ ಮಾಡಿಸುವುದಾಗಿ ಗುರುವಾರ ಘೋಷಿಸಿದೆ.

ವಿಜಯಪುರದಲ್ಲಿ ಜೆಎಸ್‌ಎಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಡೆಸುತ್ತಿರುವ 'ಶ್ರೀ ಸಿದ್ದೇಶ್ವರ ಲೋಕ ಕಲ್ಯಾಣ ಚಾರಿಟೇಬಲ್ ಟ್ರಸ್ಟ್' ಈ ನಿರ್ಧಾರ ಪ್ರಕಟಿಸಿದೆ.

"ಅಯೋಧ್ಯೆಯಲ್ಲಿ ಇದೇ ಸೋಮವಾರ ನಡೆಯಲಿರುವ 'ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ'ಯನ್ನು ಆಚರಿಸಲು ಇಂದಿನಿಂದ(ಗುರುವಾರ) ಜನವರಿ 22 ರವರೆಗೆ ನಮ್ಮ ಆಸ್ಪತ್ರೆಯಲ್ಲಿ ಎಲ್ಲಾ ಹೆರಿಗೆಯನ್ನು ಉಚಿತವಾಗಿ ಮಾಡಲಾಗುತ್ತದೆ. ಇದು ಒಂದು ದೊಡ್ಡ ಸಂದರ್ಭವಾಗಿದ್ದು, ಈ ಸಮಯದಲ್ಲಿ ನಾವು ಮಹತ್ವದ ಕೊಡುಗೆ ನೀಡಲು ನಾವು ನಿರ್ಧರಿಸಿದ್ದೇವೆ. ಐದು ದಿನಗಳ ನಿರ್ದಿಷ್ಟ ಅವಧಿಗೆ ನಮ್ಮ ಆಸ್ಪತ್ರೆಯಲ್ಲಿ ನಡೆಯುವ ಎಲ್ಲಾ ಹೆರಿಗೆಗಳನ್ನು ಉಚಿತವಾಗಿ ಮಾಡಲಾಗುತ್ತದೆ ಎಂದು ಆಸ್ಪತ್ರೆಯ ಸಿಬ್ಬಂದಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

"ಇಂದು, ಇಲ್ಲಿಯವರೆಗೆ, ನಾವು ಏಳು ಹೆರಿಗೆಗಳನ್ನು ಉಚಿತವಾಗಿ ಮಾಡಿದ್ದೇವೆ" ಎಂದು ಅವರು ಹೇಳಿದ್ದಾರೆ. ಖಾಸಗಿ ಆಸ್ಪತ್ರೆಯ ಈ ಕ್ರಮವನ್ನು ವಿಜಯಪುರದ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಶ್ಲಾಘಿಸಿದ್ದಾರೆ.

ಶ್ರೀರಂಗಪಟ್ಟಣ ತಾಲೂಕಲ್ಲಿ ಹುಲಿ ಪ್ರತ್ಯಕ್ಷ ಪ್ರಕರಣ

ಟ್ರ್ಯಾಪ್ ಕ್ಯಾಮರಾದಲ್ಲಿ ಹುಲಿ ಸೆರೆ

●ವ್ಯಾಘ್ರನ ಚಲನವಲನ ದೃಶ್ಯಾವಳಿ ಕಲೆ ಹಾಕುವಲ್ಲಿ ಅರಣ್ಯ ಇಲಾಖೆ ಯಶಸ್ವಿ ●ಹುಲಿ ಸೆರೆಗೆ ಮುಂದುವರೆದ ಕಾರ್ಯಾಚರಣೆ

ಮೈಸೂರು,ಜ.18(ಪಿಎಂ)–ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಚನ್ನಹಳ್ಳಿ ಗ್ರಾಮದ ಕಾಲುವೆ ಬಳಿಯ ಖಾಸಗಿ ಜಮೀನಿನಲ್ಲಿ ಅಳವಡಿಸಿದ್ದ ಟ್ರ್ಯಾಪ್ ಕ್ಯಾಮರಾದಲ್ಲಿ ಹುಲಿಯ ಚಲನವಲನದ ದೃಶ್ಯ ಸೆರೆಯಾಗಿದೆ.

ಬುಧವಾರ ರಾತ್ರಿ ಹುಲಿ ಇಲ್ಲಿ ಸಂಚರಿಸಿರುವ ದೃಶ್ಯವು ಟ್ರ್ಯಾಪ್ ಕ್ಯಾಮರಾದಲ್ಲಿ ಚಿತ್ರೀಕರಣಗೊಂಡಿದೆ. ಶ್ರೀರಂಗಪಟ್ಟಣ ತಾಲೂಕಿನ ಶೂಟಿಂಗ್ ಮಹದೇವಪುರ, ಚನ್ನಹಳ್ಳಿ ಸೇರಿದಂತೆ ಸುತ್ತಮುತ್ತ ಹುಲಿಯೊಂದು ಸಂಚರಿಸುತ್ತಿರುವುದು ಇದೀಗ ಮತ್ತಷ್ಟು ಖಾತ್ರಿಯಾಗಿದೆ.

ಮಹದೇವಪುರ, ಚನ್ನಹಳ್ಳಿ ಮತ್ತು ಬಿದರಹಳ್ಳಿಹುಂಡಿ ಆಸುಪಾಸಿನಲ್ಲಿ ಕಳೆದ ಹಲವು ದಿನಗಳಿಂದ ವನ್ಯಮೃಗವೊಂದು ಗೋಚರಿಸಿತ್ತಾದರೂ ಅದು ಹುಲಿಯೇ ಎಂಬುದು ಖಚಿತವಾಗಿರಲಿಲ್ಲ. ಆದರೆ ಮಂಗಳವಾರ ಸಂಜೆ ವನ್ಯಜೀವಿ ತಜ್ಞರು ಅದು ಹುಲಿಯೇ ಆಗಿದೆ ಎಂದು ಖಚಿತ ಅಭಿಪ್ರಾಯ ವ್ಯಕ್ತಪಡಿಸಿದ್ದರು.



ಟ್ರ್ಯಾಪ್ ಕ್ಯಾಮರಾದಲ್ಲಿ ಸೆರೆಯಾಗಿರುವ ಹುಲಿಯ ಚಲನವಲನದ ದೃಶ್ಯ

ಹೆಜ್ಜೆ ಗುರುತು, ಸಿಸಿಟಿವಿ ಕ್ಯಾಮರಾದಲ್ಲಿ ಸಿಕ್ಕಿರುವ ಸುಳಿವು ಕೂಡ ಹುಲಿ ಎಂಬುದನ್ನು ಖಚಿತಪಡಿಸಿತ್ತು. ಇದೀಗ ಟ್ರ್ಯಾಪ್ ಕ್ಯಾಮರಾ ಸಹಾಯದಿಂದ ಅದು ಹುಲಿ ಎಂಬುದು ಸ್ಪಷ್ಟವಾಗಿದೆ ಮೈಸೂರು ಸಮೀಪದ ಜೈಪುರ ಬಳಿಯ ಮಾದಾಪುರ ಅರಣ್ಯ ಪ್ರದೇಶದಿಂದ ಸದರಿ ಹುಲಿ ಇತ್ತ ಬಂದಿರುವ ಸಾಧ್ಯತೆಯನ್ನು ಊಹಿಸಲಾಗಿದ್ದು, ಈ ಭಾಗದಲ್ಲಿ ಹುಲಿ ಕಾಣಿಸಿಕೊಂಡಿರುವುದು ಇದೇ ಮೊದಲು ಎನ್ನಲಾಗಿದೆ

ಹುಲಿ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ಮುಂದುವರೆಸಿದ್ದು, ಮದಾಪುರ, ಚನ್ನಹಳ್ಳಿ ಸೇರಿದಂತೆ ಹುಲಿ ಸಂಚರಿಸಿರುವ ಕುರುಹು ಕಂಡು ಬಂದಿರುವ ಸ್ಥಳಗಳಲ್ಲಿ ಟ್ರ್ಯಾಪ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಅರಣ್ಯ ಇಲಾಖೆ ಮೈಸೂರು ವೃತ್ತದ ಸಿಎಫ್‌ಓ ಡಾ.ಮಾಲತಿ ಪ್ರಿಯಾ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯುತ್ತಿದೆ. ಮೈಸೂರು ಲೇಪೋರ್ಡ್ ಟಾಸ್ಕ್ ಫೋರ್ಸ್ ತಂಡವನ್ನು ಸ್ಥಳಕ್ಕೆ ಕರೆಸಿಕೊಳ್ಳಲಾಗಿದ್ದು, ಹುಲಿ ಪತ್ತೆಗೆ ವ್ಯಾಪಕ ಶೋಧ ನಡೆಸಲಾಗುತ್ತಿದೆ. ಹುಲಿಗಾಗಿ ಸೆರೆ ಬೋನ್ ಸಹ ಇಡಲಾಗಿದ್ದು, ಹುಲಿ ಹೆಜ್ಜೆ ಪತ್ತೆಗೆ ಅಗತ್ಯ ಕ್ರಮ ವಹಿಸಲಾಗಿದೆ.

ಟ್ರ್ಯಾಪ್ ಕ್ಯಾಮರಾದಲ್ಲಿ ಹುಲಿ ಓಡಾಟ ಚಿತ್ರೀಕರಣಗೊಂಡಿರುವುದನ್ನು ಅರಣ್ಯ ಇಲಾಖೆಯ ಮಂಡ್ಯ ಪ್ರಾದೇಶಿಕ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿಗಳು ಗುರುವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಶ್ರೀರಂಗಪಟ್ಟಣ ತಾಲೂಕಿನ ಗೆಂಡೆಹೊಸಹಳ್ಳಿ, ಬಿದರಹಳ್ಳಿಹುಂಡಿ, ಚನ್ನಹಳ್ಳಿ ಹಾಗೂ ಮಹದೇವಪುರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹುಲಿಯ ಪಾದಗಳ ಗುರುತು ಕಂಡುಬಂದಿವೆ. ಸದರಿ ಹುಲಿ ಚಲನವಲನ ಗಮನಿಸಲು ಸುಮಾರು 15 ಟ್ರ್ಯಾಪ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಸದರಿ ಒಂದು ಕ್ಯಾಮರಾದಲ್ಲಿ ಹುಲಿ ಕಾಣಿಸಿಕೊಂಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸದರಿ ಹುಲಿ ಸೆರೆಗೆ ಬೋನ್ ಅಳವಡಿಸಲಾಗಿದೆ. ಸದರಿ ಹುಲಿಯು ಗೆಂಡೆಹೊಸಹಳ್ಳಿ ಅರಣ್ಯ ಪ್ರದೇಶದೊಳಗೆ ಹೋಗಿರುವುದಾಗಿ ಊಹಿಸಲಾಗಿದೆ. ಸದರಿ ಪ್ರದೇಶದಲ್ಲಿ ಒಂದು ಕಾಡು ಹಂದಿಯು ಹುಲಿಯ ದಾಳಿಗೆ ತುತ್ತಾಗಿರುವುದು ಕಂಡು ಬಂದಿದೆ. ಸದರಿ ಪ್ರದೇಶಗಳಲ್ಲಿ ಲೇಪೋರ್ಡ್ ಟಾಸ್ಕ್ ಫೋರ್ಸ್‌ನೊಂದಿಗೆ ಕಾರ್ಯಾಚರಣೆ ಮುಂದುವರೆದಿದೆ. ಹಾಗಾಗಿ ಈ ಪ್ರದೇಶಗಳಲ್ಲಿ ಸಾರ್ವಜನಿಕರು ಎಚ್ಚರಿಕೆಯಿಂದ ಇರಲು ಪ್ರಕಟಣೆಯಲ್ಲಿ ಕೋರಲಾಗಿದೆ. ಯಾವುದೇ ಸಂದರ್ಭದಲ್ಲಿ ಹುಲಿ ಕಾಣಿಸಿದ್ದಲ್ಲಿ ವಲಯ ಅರಣ್ಯಾಧಿಕಾರಿಗಳು, ಶ್ರೀರಂಗಪಟ್ಟಣ ವಲಯ (99728 45176) ಮತ್ತ ಸಿಬ್ಬಂದಿಗೆ (94482 06917, 94804 42454) ದೂರವಾಣಿ ಮೂಲಕ ತಿಳಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ.

ಕೆಲಸದಿಂದ ವಜಾಗೊಳಿಸಿದ ಆರೋಪ

ಬೆಳಗ್ಗೆಯಿಂದ ಸಂಜೆವರೆಗೂ ಮೊಬೈಲ್ ಟವರ್ ಏರಿ ಕುಳಿತ್ತಿದ್ದ ವ್ಯಕ್ತಿ

ಪೊಲೀಸ್, ಅಗ್ನಿಶಾಮಕ ದಳ, ಸೆಸ್ಕ್ ಅಧಿಕಾರಿಗಳ ಕ್ಷಿಪ್ರ ಕಾರ್ಯಾಚರಣೆ, ಮನವೊಲಿಸಲು ಯತ್ನ, ಮೈಸೂರು ತಾಲೂಕು, ವರುಣ ಗ್ರಾಮದಲ್ಲಿ ದಿನವಿಡೀ ಹೈಡ್ರಾಮಾ

ಮೈಸೂರು, ಜ.18(ಆರ್‌ಕೆ)– ಕೆಲಸದಿಂದ ವಜಾ ಮಾಡಿದ್ದಾರೆಂದು ಆರೋಪಿಸಿ, ನ್ಯಾಯಕ್ಕೆ ಆಗ್ರಹಿಸಿ ವ್ಯಕ್ತಿಯೋರ್ವ ಮೊಬೈಲ್ ಟವರ್ ಏರಿ ಕುಳಿತ್ತಿದ್ದ ಪ್ರಸಂಗ ಮೈಸೂರು ತಾಲೂಕು, ವರುಣ ಗ್ರಾಮದಲ್ಲಿ ಇಂದು ನಡೆದಿದೆ.

ಕೆ.ಆರ್.ನಗರ ತಾಲೂಕು, ಸಿದ್ದೇಗೌಡನ ಕೊಪ್ಪಲು ಗ್ರಾಮದ ನಿವಾಸಿ ಬೀರೇಗೌಡ (45) ಮೊಬೈಲ್ ಟವರ್ ಏರಿ ಬೆಳಗ್ಗೆಯಿಂದ ಸಂಜೆವರೆಗೂ ಹೆಣಗಾಡಿಸಿದವರು. ಹಾಸನ ಜಿಲ್ಲೆ, ಹೊಳೇನರಸೀಪುರ ತಾಲೂಕಿನ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ (ಈ ಹಿಂದಿನ ಹೇಮಾವತಿ ಷುಗರ್ ಫ್ಯಾಕ್ಟರಿ)ಯಲ್ಲಿ ಮೆಕ್ಯಾನಿಕ್ ಆಗಿದ್ದ ಬೀರೇಗೌಡರನ್ನು ಕೆಲ ಬಲವಾದ ಕಾರಣಗಳಿಂದಾಗಿ ಕಾನೂನಾತ್ಮಕವಾಗಿ ಕಳೆದ 3 ತಿಂಗಳ ಹಿಂದೆ ಕಾರ್ಖಾನೆ ಆಡಳಿತ ಮಂಡಳಿ ಅಧಿಕಾರಿಗಳು ಕೆಲಸದಿಂದ ತೆಗೆದು ಹಾಕಿದ್ದರು ಎಂದು ತಿಳಿದು ಬಂದಿದೆ.

ಇಂದು ಬೆಳಗ್ಗೆ 9.45 ಗಂಟೆಗೆ ವರುಣ ಗ್ರಾಮದ ಮೊಬೈಲ್ ಟವರ್ ಮೇಲೆ ಹತ್ತಿದ ಬೀರೇಗೌಡ, ತಾನೇ ಪೊಲೀಸರಿಗೆ ಮೊಬೈಲ್ ಮೂಲಕ ಮಾಹಿತಿ ನೀಡಿದರಲ್ಲದೇ, ಜೋರಾಗಿ ಕೂಗಿಕೊಂಡು ಗ್ರಾಮದ ಜನರ ಗಮನವನ್ನು ಸೆಳೆದಿದ್ದ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವರುಣ ಠಾಣೆ ಸಬ್ ಇನ್ಸ್‌ಪೆಕ್ಟರ್ ಚೇತನ್ ಹಾಗೂ ಸಿಬ್ಬಂದಿ, ಅಗ್ನಿಶಾಮಕ ಅಧಿಕಾರಿಗಳನ್ನು ಕರೆಸಿಕೊಂಡು ಅಗತ್ಯ ಸುರಕ್ಷತಾ ಕ್ರಮಕ್ಕೆ ಸಿದ್ಧತೆ ಮಾಡಿಕೊಂಡಿದ್ದರು.

ಕೆಳಕ್ಕಿಳಿಯುವಂತೆ ಮನವಿ ಮಾಡಿಕೊಂಡರೂ, ಸ್ಪಂದಿಸದ ಬೀರೇಗೌಡ, ನಾನು ಕೆಲಸ ಮಾಡುತ್ತಿದ್ದ ಸಕ್ಕರೆ ಕಾರ್ಖಾನೆಯಲ್ಲಿ ಅನ್ಯಾಯ ತಾಂಡವವಾಡುತ್ತಿದೆ. ಕೆಲವೊಂದು ವಿಷಯಗಳಲ್ಲಿ ಎದುರು ಮಾತನಾಡಿದ ಕಾರಣಕ್ಕೆ ನನ್ನನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ನನಗೆ ನ್ಯಾಯ ಬೇಕು. ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು. ಮುಖ್ಯಮಂತ್ರಿಗಳು, ಸರ್ಕಾರದ ಗಮನ ಸೆಳೆಯಲೆಂದೇ ಸಿದ್ದರಾಮಯ್ಯರ ತವರು ಕ್ಷೇತ್ರದಲ್ಲೇ ಆತ್ಮಹತ್ಯೆ ಮಾಡಿಕೊಳ್ಳಲು ಟವರ್ ಏರಿದ್ದೇನೆ ಎಂದು ಹೇಳಿದ.


ಈ ಸಂಬಂಧ ಚಾಮುಂಡೇಶ್ವರಿ ಷುಗರ್ಸ್ ಅಧಿಕಾರಿಗಳನ್ನು ಪೊಲೀಸ್ ಅಧಿಕಾರಿಗಳು ಮೊಬೈಲ್ ಮೂಲಕ ಸಂಪರ್ಕಿಸಿದಾಗ, ಬೀರೇಗೌಡ ತುಂಬಾ ಕಿರಿಕಿರಿ ಮಾಡಿ ಕಾರ್ಖಾನೆ ಕೆಲಸದ ಸ್ಥಳದಲ್ಲಿ ವಾತಾವರಣ ಹಾಳು ಮಾಡಿ, ಕೆಲಸಕ್ಕೂ ಅಡ್ಡಿಪಡಿಸುತ್ತಿದ್ದ. ಕ್ರಮಕ್ಕೆ ಮುಂದಾದಾಗ ಈ ಹಿಂದೆಯೂ ಒಮ್ಮೆ ಕಾರ್ಖಾನೆ ಬಾಯ್ಲರ್ ಏರಿ ಹೈಡ್ರಾಮಾ ಮಾಡಿದ್ದ. ಅದಕ್ಕೂ ಹಿಂದೆ ದಾವಣಗೆರೆಯಲ್ಲೂ ಆತ ಹೀಗೆಯೇ ಮೊಬೈಲ್ ಟವರ್ ಏರಿ ಆತ್ಮಹತ್ಯೆ ಬೆದರಿಕೆ ಹಾಕಿದ್ದ ಎಂದು ಪ್ರತಿಕ್ರಿಯೆ ಬಂತು.

ಈತನ ವರ್ತನೆ, ನಡವಳಿಕೆಯಿಂದ ಬೇಸತ್ತು, ಕಾನೂನಾತ್ಮಕವಾಗಿ ಎಲ್ಲಾ ಹಂತದ ಪ್ರಕ್ರಿಯೆ ಪೂರ್ಣಗೊಳಿಸಿ ಬೀರೇಗೌಡರನ್ನು ನಿಯಮಾನುಸಾರ ಕೆಲಸದಿಂದ ತೆಗೆದು ಹಾಕಲಾಗಿದೆ. ಈ ಹಂತದಲ್ಲಿ ನಾವು ಏನೂ ಮಾಡಲು ಸಾಧ್ಯವಿಲ್ಲ ಎಂದು ಫ್ಯಾಕ್ಟರಿ ಅಧಿಕಾರಿಗಳು ವಿವರಿಸಿದರು.

ಆತನನ್ನು ಸುರಕ್ಷಿತವಾಗಿ ಕೆಳಗಿಳಿಸಲು ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ಡಾ. ಎನ್.ನಂದಿನಿ, ಗ್ರಾಮ ಪಂಚಾಯ್ತಿ ಅಧಿಕಾರಿಗಳು, ಅಗ್ನಿಶಾಮಕ ಅಧಿಕಾರಿಗಳು ಎಷ್ಟೇ ಪ್ರಯತ್ನಿಸಿದರೂ, ಕಾರ್ಖಾನೆ ಅಧಿಕಾರಿಗಳನ್ನೇ ಇಲ್ಲಿಗೆ ಕರೆಸಿ ನನಗೆ ಮರು ನೇಮಕಾತಿ ಆದೇಶ ಪ್ರತಿ ನೀಡುವವರೆಗೂ ನಾನು ಕೆಳಗೆ ಇಳಿಯುವುದಿಲ್ಲ ಎಂದು ಬೀರೇಗೌಡ ಪಟ್ಟು ಹಿಡಿದು ಟವರ್ ಮೇಲೆ ಕುಳಿತ್ತಿದ್ದ.

ಆತ ಕೆಳಕ್ಕೆ ಜಿಗಿದರೂ ಪೆಟ್ಟಾಗದಂತೆ ಟವರ್ ಸುತ್ತ ಬಲೆ ಕಟ್ಟಲಾಗಿತ್ತಲ್ಲದೆ, ಆತನನ್ನು ಸುರಕ್ಷಿತವಾಗಿ ಇಳಿಸಲು ಬೇಕಾದ ಎಲ್ಲಾ ಅಗತ್ಯ ಸಿದ್ಧತೆಗಳೊಂದಿಗೆ ಸಜ್ಜುಗೊಂಡು ಪರಿಪರಿಯಾಗಿ ಕೇಳಿಕೊಂಡರೂ, ಲೆಕ್ಕಿಸದೇ ಟವರ್ ಮೇಲೆ ಕುಳಿತೇ ಇದ್ದು ಪಟ್ಟು ಸಡಿಸಲಿಲ್ಲ. ಅದರಿಂದಾಗಿ ಸುಮಾರು 50ಕ್ಕೂ ಹೆಚ್ಚು ಮಂದಿ ಅಧಿಕಾರಿಗಳು ಬೆಳಗ್ಗೆಯಿಂದ ಸಂಜೆವರೆಗೆ ಸ್ಥಳದಿಂದ ಕದಡದೇ ಬೀರೇಗೌಡನ ರಕ್ಷಣೆಗಾಗಿ ಕಾದು ಕಾರ್ಯಾಚರಣೆ ಮಾಡಬೇಕಾಯಿತು.

ಕತ್ತಲಾಗುತ್ತಿದ್ದರಿಂದ ಪೊಲೀಸರು ಅಗ್ನಿಶಾಮಕ ದಳದ 6 ಮಂದಿ ನುರಿತ ಸಿಬ್ಬಂದಿಗಳನ್ನು ಟವರ್ ಮೇಲೆ ಹತ್ತಿಸಿ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಂಡು



ಕಡೆಗೂ ರಾತ್ರಿ 7 ಗಂಟೆ ವೇಳೆಗೆ ಬೀರೇಗೌಡನನ್ನು ಸುರಕ್ಷಿತವಾಗಿ ಕೆಳಗಿಳಿಸಿ ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿದರು.

ಅಷ್ಟರಲ್ಲಿ ಚಾಮುಂಡೇಶ್ವರಿ ಷುಗರ್ಸ್‌ನ ಅಧಿಕಾರಿಯೊಬ್ಬರು ಬಂದರಾದರೂ, ಬೀರೇಗೌಡನ ಬೇಡಿಕೆಯಂತೆ ಜವಾಬ್ದಾರಿ ತೆಗೆದುಕೊಳ್ಳಲು ಅವರು ಸಿದ್ಧರಿರಲಿಲ್ಲ ಎಂದು ವರುಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಜ.21ಕ್ಕೆ ಮತದಾನ ಜಾಗೃತಿಗಾಗಿ ವ್ಯಂಗ್ಯಚಿತ್ರ ಪ್ರದರ್ಶನ

ಚಿತ್ರಗಳ ಸಲ್ಲಿಸಲು ನಾಳೆ ಕಡೇ ದಿನ

ಬೆಂಗಳೂರು, ಜ.18– ಮುಂಬರುವ ಲೋಕಸಭೆ ಚುನಾವಣೆ–2024 ರ ಹಿನ್ನೆಲೆಯಲ್ಲಿ ಮತದಾರರಲ್ಲಿ ಮತದಾನದ ಕುರಿತು ಜಾಗೃತಿ ಮೂಡಿಸಲು ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ವತಿಯಿಂದ ಜ.21 ರಂದು ಬೆಳಗ್ಗೆ 9 ಗಂಟೆಯಿಂದ ಕಲಾವಿದರಿಗಾಗಿ ವ್ಯಂಗ್ಯಚಿತ್ರ ಪ್ರದರ್ಶನ ಮತ್ತು ಕಾರ್ಯಾಗಾರವನ್ನು ವಿಧಾನಸೌಧ ಪೂರ್ವದಿಕ್ಕಿನ ಬಸವಣ್ಣನ ಪ್ರತಿಮೆ ಬಳಿ ಏರ್ಪಡಿಸಲಾಗಿದೆ.

ವೃತ್ತಿಪರ ಮತ್ತು ಹವ್ಯಾಸಿ ವ್ಯಂಗ್ಯಚಿತ್ರಕಾರರು, ಹವ್ಯಾಸಿ ಕಲಾವಿದರು, ಕಲಾ ವಿದ್ಯಾರ್ಥಿಗಳು ಈ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಬಹುದಾಗಿದೆ. ಚುನಾವಣೆ, ಮತದಾನದ ಮಹತ್ವ ಸಾರುವ, ಮತದಾನ ಪ್ರಕ್ರಿಯೆಯಲ್ಲಿ ನಾಗರಿಕರು ಭಾಗವಹಿಸುವುದನ್ನು ಪ್ರೋತ್ಸಾಹಿಸುವಂತಹ ವ್ಯಂಗ್ಯಚಿತ್ರಗಳನ್ನು ರಚಿಸಬೇಕಿದೆ. ಆಯ್ಕೆಯಾದ 100 ವ್ಯಂಗ್ಯಚಿತ್ರಗಳನ್ನು ಜ.21ರಂದು ಪ್ರದರ್ಶನಕ್ಕಿಡಲಾಗುತ್ತದೆ. ಅದರಲ್ಲಿ ಅತ್ಯುತ್ತಮ 25 ಚಿತ್ರಗಳನ್ನು ಮತದಾನ ಜಾಗೃತಿ ಹಾಗೂ ಪ್ರಚಾರಕ್ಕಾಗಿ ಬಳಸಿಕೊಳ್ಳಲಾಗುತ್ತದೆ. ಅಲ್ಲದೆ ಆ ವ್ಯಂಗ್ಯಚಿತ್ರಗಳಿಗೆ ಗೌರವಧನವನ್ನು ಸಹ ನೀಡಲಾಗುತ್ತದೆ.

ಷರತ್ತು–ನಿಬಂಧನೆಗಳು: ಚಿತ್ರಗಳಲ್ಲಿ ಯಾವುದೇ ರಾಜಕೀಯ ಪಕ್ಷಗಳ ಪ್ರಚಾರ ಮತ್ತು ವ್ಯಂಗ್ಯ ಮಾಡುವಂತೆ ಇರಬಾರದು. ಚಿತ್ರಗಳು ಹೊಸದಾಗಿದ್ದು, ಈ ಹಿಂದೆ ಯಾವುದೇ ಪ್ರಚಾರದಲ್ಲಿ ಬಳಸಿಕೊಂಡಿರಬಾರದು. ಚಿತ್ರಗಳು ಸ್ವಂತ ರಚನೆಯಲ್ಲಿರಬೇಕು.(ಗ್ರಾಫಿಕ್ಸ್, ಕುಂಚ, ಪೆನ್ಸಿಲ್, ಪೆನ್ ಇತ್ಯಾದಿ). ಚಿತ್ರಗಳನ್ನು 2880 ಪಿಪಿಐ/ಡಿಪಿಐ ಅಳತೆಯ ಡಿಜಿಟಲ್ ಆವೃತ್ತಿಯಲ್ಲಿ ಸಲ್ಲಿಸಬೇಕು. ಆಯ್ಕೆಯಾದ ಚಿತ್ರಗಳ ಅಸಲಿ ಪ್ರತಿಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ಆಯ್ಕೆಯಾದ ಮೊದಲ 25 ಚಿತ್ರಗಳಿಗೆ ಗೌರವಧನ ನೀಡಲಾಗುವುದು.

ಚಿತ್ರಗಳನ್ನು mediacellceokarnataka@gmail.com ವಿಳಾಸಕ್ಕೆ ಕಳುಹಿಸಬೇಕು ಹಾಗೂ ಇಮೇಲ್‌ನಲ್ಲಿ ತಮ್ಮ ಹೆಸರು, ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ತಪ್ಪದೇ ನಮೂದಿಸಿರಬೇಕು. ಜ.20ರೊಳಗೆ ಚಿತ್ರಗಳನ್ನು ಕಳುಹಿಸಬೇಕು. ಸ್ಥಳದಲ್ಲೇ ಚಿತ್ರ ರಚನೆ ಮಾಡುವ ಕಲಾವಿದರು ದಿನಾಂಕ ಜ. 21ರಂದು ಬೆಳಗ್ಗೆ 9 ಗಂಟೆಗೆ ನಿಗದಿತ ಸ್ಥಳದಲ್ಲಿ ಹಾಜರಿರಬೇಕು. ಹೆಚ್ಚಿನ ಮಾಹಿತಿಗೆ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯ ಮಾಧ್ಯಮ ಘಟಕ (ಮೊ.ಸಂ. 9480841211)ವನ್ನು ಸಂಪರ್ಕಿಸಬಹುದು.

ಜವಾಹರ್ ನವೋದಯ ವಿದ್ಯಾಲಯಕ್ಕೆ ಪ್ರವೇಶ ಪರೀಕ್ಷೆ

ಮಂಡ್ಯ, ಜ.18– ಜವಾಹರ್ ನವೋದಯ ವಿದ್ಯಾಲಯದ 6ನೇ ತರಗತಿ ಪ್ರವೇಶ ಪರೀಕ್ಷೆ ಜಿಲ್ಲೆಯ 15 ಕೇಂದ್ರಗಳಲ್ಲಿ ಜ.20ರಂದು ಬೆಳಗ್ಗೆ 11.30 ರಿಂದ 1.30ರವರೆಗೆ ನಡೆಯಲಿದೆ ಎಂದು ಶಿವಾರಗುಡ್ಡ ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲ ಉಮಾಪತಿ ರೆಡ್ಡಿ ತಿಳಿಸಿದ್ದಾರೆ.

ಕರ್ನಾಟಕ ಪಬ್ಲಿಕ್ ಸ್ಕೂಲ್, ಸರ್ಕಾರಿ ಜೂನಿಯರ್ ಕಾಲೇಜು (ಕೆ.ಆರ್.ಪೇಟೆ), ಸರ್ಕಾರಿ ಜೂನಿಯರ್ ಕಾಲೇಜು, ಹೆಚ್.ಕೆ.ಮರಿಯಪ್ಪ ಕಾನ್ವೆಂಟ್, ಸೆಂಟ್ ಆನ್ಸ್ ಹೈಯರ್ ಪ್ರೈಮರಿ ಸ್ಕೂಲ್ (ಮದ್ದೂರು), ಅನಿತಾ ಕಾನ್ವೆಂಟ್ ನ್ಯೂ ಎಕ್ಸ್‌ಟೆಂಶನ್, ರೋಟರಿ ಸ್ಕೂಲ್, ಸರ್ಕಾರಿ ಬಾಲಕಿಯರ ಪ್ರೌಢಶಾಲೆ (ಮಳವಳ್ಳಿ), ಸೆಂಟ್ ಜೋಸೆಫ್ ಹೈಸ್ಕೂಲ್, ಕಾರ್ಮೆಲ್ ಕಾನ್ವೆಂಟ್, ಲಕ್ಷ್ಮೀಜನಾರ್ಧನ ಬಾಲಕಿಯರ ಹೈಸ್ಕೂಲ್ (ಮಂಡ್ಯ) ಸರ್ಕಾರಿ ಪಿಯು ಕಾಲೇಜ್ (ನಾಗಮಂಗಲ), ಬಾಲಕಿಯರ ಜೂನಿಯರ್ ಕಾಲೇಜು (ಪಾಂಡವಪುರ), ಸರ್ಕಾರಿ ಜೂನಿಯರ್ ಕಾಲೇಜ್ ಹೈಸ್ಕೂಲ್ (ಶ್ರೀರಂಗಪಟ್ಟಣ) ಈ ಮೇಲ್ಕಂಡ ಶಾಲಾ ಕಾಲೇಜುಗಳಲ್ಲಿ ಪ್ರವೇಶ ಪರೀಕ್ಷೆಗಳು ನಡೆಯಲಿವೆ.

ಅಭ್ಯರ್ಥಿಗಳು ಜ.20ರಂದು ಬೆಳಗ್ಗೆ 11 ಗಂಟೆಗೆ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕು. ಬ್ಲಾಕ್ ಅಥವಾ ಬ್ಲೂ ಪೆನ್ ಹಾಗೂ ಪ್ರವೇಶ ಪತ್ರವನ್ನು ಕಡ್ಡಾಯವಾಗಿ ತರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವಾಸಿಗಳ ನೆಮ್ಮದಿ ಕೆಡಿಸಿದ ಮಳೆ ನೀರು ಚರಂಡಿ ದುರ್ವಾಸನೆ

●ಕೊಳಚೆ ನೀರು ನಿಂತು ಅನೈರ್ಮಲ್ಯ ●ಚರಂಡಿ ದಡದಲ್ಲಿ ತರಾವರಿ ತ್ಯಾಜ್ಯ

ಮೈಸೂರು,ಜ.18(ಪಿಎಂ)–ಗಿಡ–ಗಂಟಿ ಬೆಳೆದಿರುವ ಆ ಮಳೆನೀರು ಚರಂಡಿಯಲ್ಲಿ ಕೊಳಚೆ ನೀರು ಸರಾಗವಾಗಿ ಸಾಗದೇ ದುರ್ವಾಸನೆ ಸೂಸುತ್ತಿರುವ ಹಿನ್ನೆಲೆಯಲ್ಲಿ ಅನೈರ್ಮಲ್ಯದ ವಾತಾವರಣ ನಿರ್ಮಾಣಗೊಂಡಿದ್ದು, ಇಂತಹ ದುಸ್ಥಿತಿಯ ಸ್ಥಳೀಯ ನಿವಾಸಿಗಳ ನೆಮ್ಮದಿಯನ್ನೇ ಕಸಿದಿದೆ.

ಗಿಡ–ಗಂಟಿ ಬೆಳೆದು, ಕೊಳಚೆ ನೀರು ನಿಂತು ಸೊಳ್ಳೆಗಳ ಆವಾಸಸ್ಥಾನವಾಗಿ ಪರಿಣಮಿಸಿರುವ ನಡುವೆ ಕೆಲವರು ತಮ್ಮ ಮನೆಯ ತರಾವರಿ ತ್ಯಾಜ್ಯವನ್ನು ಈ ಚರಂಡಿ ದಡಕ್ಕೆ ಎಸೆದು ಹೋಗುತ್ತಿರುವುದು ಅನೈರ್ಮಲ್ಯ ಮತ್ತಷ್ಟು ವ್ಯಾಪಿಸಲು ಎಡೆ ಮಾಡಿದೆ. ಹೀಗೆ ಎಸೆಯುವ ತ್ಯಾಜ್ಯಗಳು ಕೆಲವೊಮ್ಮೆ ಚರಂಡಿಯ ಒಡಲು ಸೇರುತ್ತಿವೆ.

ಮೈಸೂರಿನ ಸರಸ್ವತಿಪುರಂನ ಒಂದನೇ ಮೇನ್‌ನ 7ನೇ ಕ್ರಾಸ್‌ನ ಎದುರಿನ ರಸ್ತೆಯ ಬದಿಯಲ್ಲಿರುವ ಮಳೆನೀರು ಚರಂಡಿಯ ದುರಾವಸ್ಥೆ ಇದು (ಸರಸ್ವತಿ ಚಿತ್ರಮಂದಿರದ ಹಿಂಭಾಗ). ಹೀಗಾಗಿ ಸದರಿ ಚರಂಡಿಯ ಆಸುಪಾಸಿನ



ಮೈಸೂರಿನ ಸರಸ್ವತಿಪುರಂನ ಒಂದನೇ ಮೇನ್‌ನ 7ನೇ ಕ್ರಾಸ್‌ನ ಎದುರಿನ ರಸ್ತೆಯ ಬದಿಯಲ್ಲಿರುವ ಮಳೆನೀರು ಚರಂಡಿಯಲ್ಲಿ ಗಿಡ–ಗಂಟಿ ಬೆಳೆದು ಅಶುಚಿತ್ವದಿಂದ ಕೂಡಿರುವುದು.

ಮನೆಗಳ ನಿವಾಸಿಗಳು ರೋಗ–ರುಜಿನದ ಭೀತಿ ಎದುರಿಸುವಂತಾಗಿದೆ.

ಪ್ಲಾಸ್ಟಿಕ್, ಗಾಜಿನ ಬಾಟಲಿ ಸೇರಿದಂತೆ ತರಾವರಿ ತ್ಯಾಜ್ಯಗಳನ್ನು ಚರಂಡಿಯ ದಡಕ್ಕೆ ಎಸೆಯಲಾಗುತ್ತಿದೆ. ಇದೇ ರೀತಿಯ ಪರಿಸ್ಥಿತಿ ನಗರದ ಅನೇಕ ಕಡೆಗಳಲ್ಲಿಯೂ ಇದ್ದು, ಇಂತಹ ಸ್ಥಳಗಳಲ್ಲಿ ನಗರ ಪಾಲಿಕೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕಿದೆ. ಇಲ್ಲವಾದರೆ ಮುಂದಿನ ಸ್ವಚ್ಛ ಸರ್ವೇಕ್ಷಣೆಯಲ್ಲಿಯೂ ಮೈಸೂರು ನಗರದ ಸ್ಥಾನ ಮತ್ತಷ್ಟು ಕುಸಿಯುವುದರಲ್ಲಿ ಸಂದೇಹವಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ.

ಸ್ಥಳೀಯ ನಿವಾಸಿ ಗೀತಾ ವಿಶ್ವನಾಥ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಾವಿಲ್ಲಿ ಮನೆ ಮಾಡಿಕೊಂಡು 31 ವರ್ಷಗಳಾಗಿವೆ. ಅಂದಿನಿಂದಲೂ ಸದರಿ ಚರಂಡಿ ಅನೈರ್ಮಲ್ಯದ ಸಮಸ್ಯೆ ಎದುರಿಸುತ್ತಿದ್ದೇವೆ. ಒಳಚರಂಡಿ ನೀರು



ಸಹ ಇಲ್ಲಿಗೆ ಸೇರುತ್ತಿದ್ದು, ಅದು ಮುಂದೆ ಹೋಗದೇ ನಿಲ್ಲುವ ಕಾರಣ ಕೆಟ್ಟ ವಾಸನೆ ಸೂಸುತ್ತಿದೆ. ಪಾಲಿಕೆಯವರಿಗೆ ದೂರು ನೀಡಿದಾಗ, ಕೇವಲ ತಾತ್ಕಾಲಿಕವಾಗಿ ಸ್ವಚ್ಛತೆ ಮಾಡುತ್ತಿದ್ದಾರೆ. ಕೆಲ ದಿನಗಳು ಕಳೆದಂತೆ ಮತ್ತೆ ಅನೈರ್ಮಲ್ಯ ತಲೆ ಎತ್ತುತ್ತದೆ. ಚರಂಡಿ ಪಕ್ಕದಲ್ಲೇ ನಮ್ಮ ಮನೆ ಇರುವ ಹಿನ್ನೆಲೆಯಲ್ಲಿ ಸಹಿಸಲಾಗದ ದುರ್ವಾಸನೆ ನಡುವೆ ಬದುಕು ದೂಡುವಂತ ಪರಿಸ್ಥಿತಿ ನಮ್ಮದಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಚರಂಡಿಯಿಂದ ಸೂಸುವ ವಾಸನೆಯ ಕಾರಣಕ್ಕೆ ನಮ್ಮ ಮನೆಯ ಮೊದಲ ಅಂತಸ್ತಿನಲ್ಲಿ ಬಾಡಿಗೆಗೂ ಯಾರೂ ಬಾರದ ಪರಿಸ್ಥಿತಿ ಉದ್ಭವಿಸಿದೆ. ಇಲ್ಲಿಗೆ ಸಮೀಪದ ಅಪಾರ್ಟ್‌ಮೆಂಟ್‌ವೊಂದರ ಒಳಚರಂಡಿ ನೀರು ಸೋರಿಕೆಯಾಗಿ ಇದೇ ಮಳೆನೀರು ಚರಂಡಿ ಸೇರುತ್ತಿದೆ. ಕೆಲವರು ಚರಂಡಿಯ ದಡಕ್ಕೆ ತ್ಯಾಜ್ಯ ತಂದು ಹಾಕುವುದು ಸಾಮಾನ್ಯವಾಗಿದೆ. ನಿತ್ಯ ಬೆಳಗ್ಗೆ ಪೌರ ಕಾರ್ಮಿಕರು ಅವುಗಳನ್ನು ತೆರವು ಮಾಡುತ್ತಿರುವ ಕಾರಣ ಒಂದಷ್ಟು ನಿಯಂತ್ರಣದಲ್ಲಿದೆ. ಇಲ್ಲವಾಗಿದ್ದರೆ ಕಸದ ರಾಶಿಯ ಬೆಟ್ಟವೇ ಬೆಳೆಯುತ್ತಿತ್ತೇನೋ. ಇನ್ನಾದರೂ ಮೈಸೂರು ಮಹಾನಗರ ಪಾಲಿಕೆಯು ಇಲ್ಲಿ ಶುಚಿತ್ವ ಕಾಪಾಡಲು ಗಂಭೀರ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಮೈಸೂರು ಮಿತ್ರ ಶುಕ್ರವಾರ 19 ಜನವರಿ 2024

ನಾಡಿನ ಸಂಸ್ಕೃತಿಯಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ

● ಶಾಸಕ ಎ.ಎಸ್.ಪೊನ್ನಣ್ಣ ಅಭಿಮತ ● ಚೆಟ್ಟಿಮಾನಿಯಲ್ಲಿ ಗ್ರಾಮಸಿರಿ ಕಾರ್ಯಕ್ರಮಕ್ಕೆ ಚಾಲನೆ



ಚೆಟ್ಟಿಮಾನಿ ಶಾಲಾ ಮೈದಾನದಲ್ಲಿ ಸುವರ್ಣ ಕರ್ನಾಟಕ 50ರ ಸಂಭ್ರಮ ಪ್ರಯುಕ್ತ ಆಯೋಜಿಸಿದ್ದ 'ಗ್ರಾಮಸಿರಿ' ಕಾರ್ಯಕ್ರಮಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು. ಕಸಾಪ ಜಿಲ್ಲಾಧ್ಯಕ್ಷ ಕೇಶವ ಕಾಮತ್, ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಬಿ.ಜಿ.ಅನಂತಶಯನ ಮತ್ತಿತರರಿದ್ದರು.

> ಸುವರ್ಣ ಕರ್ನಾಟಕ ಸಂಭ್ರಮದ ಸಂದರ್ಭದಲ್ಲಿ 5 ತಾಲೂಕಿನಲ್ಲಿ ಗ್ರಾಮಸಿರಿ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಆ ನಿಟ್ಟಿನಲ್ಲಿ ಪ್ರಥಮ ಗ್ರಾಮಸಿರಿಯನ್ನು ಚೆಟ್ಟಿಮಾನಿ ಗ್ರಾಮದಲ್ಲಿ ನಡೆಸಲಾಗಿದೆ. ಕೊಡಗು ಜಿಲ್ಲೆಯ ಗ್ರಾಮೀಣ ಜನರು ಉದ್ಯೋಗ ಅರಸಿ ದೊಡ್ಡ ದೊಡ್ಡ ನಗರ ಸೇರುತ್ತಿದ್ದಾರೆ. ಆದ್ದರಿಂದ ವಾಪಸ್ಸು ಗ್ರಾಮೀಣ ಪ್ರದೇಶಕ್ಕೆ ಬರುವಂತಾಗಬೇಕು. ವೃತ್ತಿಗಾಗಿ ವಲಸೆ ಹೋಗುವುದು ತಪ್ಪಲ್ಲ. ಆದರೆ, ಹುಟ್ಟಿ ಬೆಳೆದ ಊರನ್ನು ಯಾರೂ ಮರೆಯಬಾರದು. ಆ ನಿಟ್ಟಿನಲ್ಲಿ ಗ್ರಾಮಸಿರಿ ಬೆಳಗಬೇಕು.
>
> -ಕೇಶವ ಕಾಮತ್, ಕಸಾಪ ಜಿಲ್ಲಾಧ್ಯಕ್ಷ

ಮಡಿಕೇರಿ, ಜ.18–ನಾಡಿನ ಸಂಸ್ಕೃತಿ, ಭಾಷೆ, ಜಾನಪದ ಕಲೆಗಳನ್ನು ಮುಂದಿನ ಪೀಳಿಗೆಗೆ ಉಳಿಸಿ, ಬೆಳೆಸುವಂತಾಗಬೇಕು. ಇದರಿಂದ ಉತ್ತಮ ಸಂಸ್ಕೃತಿ ಮತ್ತು ಸಮಾಜ ನಿರ್ಮಾಣ ಸಾಧ್ಯ ಎಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅಭಿಪ್ರಾಯಪಟ್ಟರು.

ಚೆಟ್ಟಿಮಾನಿ ಶಾಲಾ ಮೈದಾನದ ಸ್ವಾತಂತ್ರ್ಯ ಹೋರಾಟಗಾರ ಕೆದಂಬಾಡಿ ರಾಮಯ್ಯಗೌಡ ಸಭಾಮಂಟಪದ ಮೇಜರ್ ಮಂಗೇರಿರ ವಿನೋದ್ ಮುತ್ತಣ್ಣ ಮುಖ್ಯ ವೇದಿಕೆಯಲ್ಲಿ ಗುರುವಾರ ಕೊಡಗು ಜಿಲ್ಲಾ, ಮಡಿಕೇರಿ ತಾಲೂಕು ಮತ್ತು ಭಾಗಮಂಡಲ ಹೋಬಳಿಯ ಕನ್ನಡ ಸಾಹಿತ್ಯ ಪರಿಷತ್, ಕುಂದಚೇರಿ, ಭಾಗಮಂಡಲ ಮತ್ತು ಅಯ್ಯಂಗೇರಿ ಗ್ರಾಮ ಪಂಚಾಯಿತಿ ವತಿಯಿಂದ ಸುವರ್ಣ ಕರ್ನಾಟಕ 50ರ ಸಂಭ್ರಮ ಪ್ರಯುಕ್ತ ಆಯೋಜಿಸಿದ್ದ 'ಗ್ರಾಮಸಿರಿ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಳೆಯದನ್ನು ಮರೆಯಬಾರದು. ಪೂರ್ವಜರ ಜೀವನಶೈಲಿ, ಅವರ ಪರಿಶ್ರಮವನ್ನು ಸದಾ ಸ್ಮರಿಸಿ, ಉತ್ತಮ ಜೀವನ ಕಟ್ಟಿಕೊಳ್ಳಲು ಮುಂದಾಗಬೇಕು. ಗ್ರಾಮೀಣರ ಬದುಕು, ಜೀವನ ಪದ್ಧತಿ ಅರಿತುಕೊಂಡು ಅಭಿವೃದ್ಧಿಯತ್ತ ಹೆಜ್ಜೆ ಇಡಬೇಕು ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶ ಅಭಿವೃದ್ಧಿ ಹೊಂದಿದ್ದಲ್ಲಿ ರಾಷ್ಟ್ರದ ಅಭಿವೃದ್ಧಿ ಸಾಧ್ಯ. ಆ ನಿಟ್ಟಿನಲ್ಲಿ ಕೃಷಿ, ಗುಡಿ ಕೈಗಾರಿಕೆಗಳು ಮತ್ತಷ್ಟು ಬಲವರ್ಧನೆಗೊಳ್ಳಬೇಕು. ಜಾತಿ, ಧರ್ಮ, ಭಾಷೆಯನ್ನು ಮೀರಿ ಎಲ್ಲರೂ ಒಂದೆಡೆ ಸೇರಿ 'ಗ್ರಾಮಸಿರಿ' ಕಾರ್ಯಕ್ರಮ ಆಯೋಜಿಸಿರುವುದು ಸಂತಸದ ವಿಚಾರ. ಎಲ್ಲರೂ ಒಟ್ಟುಗೂಡುವುದೇ ಭಾರತದ ಪ್ರತೀಕವಾಗಿದೆ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವುದೇ ಭಾರತದ ವೈಶಿಷ್ಟ್ಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾಗಮಂಡಲ ಭಾಗದಲ್ಲಿ ಕೊಡವ, ಅರೆಭಾಷೆ ಸೇರಿದಂತೆ ಹಲವು ಭಾಷೆಗಳನ್ನು ಮಾತನಾಡುವವರು ಇದ್ದಾರೆ. ಮಾತೃಭಾಷೆ ಜೊತೆಗೆ ಕನ್ನಡಕ್ಕೆ ಪ್ರಥಮ ಆದ್ಯತೆ ನೀಡಬೇಕು. ಸಣ್ಣಸಣ್ಣ ಭಾಷೆ, ಜನಾಂಗ, ಸಮಾಜಗಳ ಆಚಾರ ವಿಚಾರಗಳನ್ನು ಉಳಿಸಿಕೊಂಡು, ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಭ್ರಾತೃತ್ವ ಮತ್ತು ಸಮಾನತೆಯಿಂದ ಬೆರೆತು ಅಭಿವೃದ್ಧಿಯತ್ತ ಮುಖ ಮಾಡಬೇಕಿದೆ ಎಂದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ಗ್ರಾಮೀಣ ಕಲೆ, ಸಂಸ್ಕೃತಿ, ಸಾಹಿತ್ಯ, ಕ್ರೀಡೆ ಹೀಗೆ ವಿವಿಧ ಚಟುವಟಿಕೆಗಳಲ್ಲಿ ಎಲ್ಲರೂ ತೊಡಗಿಸಿಕೊಳ್ಳಲು ಗ್ರಾಮಸಿರಿ ಕಾರ್ಯಕ್ರಮ ಸಹಕಾರಿಯಾಗಿದೆ. ಅನಾದಿಕಾಲದಿಂದಲೂ ವಾಸ ಮಾಡಿಕೊಂಡು ಬಂದಿರುವ ಇಲ್ಲಿಯ ಜನರು ಭೂಮಿ ಮಾರಾಟ ಮಾಡಿಕೊಳ್ಳಬಾರದು. ಕೃಷಿ ಸಂಸ್ಕೃತಿ, ಪರಂಪರೆಯನ್ನು ಉಳಿಸಿಕೊಂಡು ಹೋಗಬೇಕು. ಇದರಿಂದ ಗ್ರಾಮಸಿರಿಯನ್ನು ಉಳಿಸಿದಂತಾಗುತ್ತದೆ ಎಂದು ಸಲಹೆ ನೀಡಿದರು.

ಗ್ರಾಮಸಿರಿ ಕಿರುಹೊತ್ತಿಗೆ ಬಿಡುಗಡೆ ಮಾಡಿ ಮಾತನಾಡಿದ ಜಾನಪದ ಪರಿಷತ್‌ನ ಜಿಲ್ಲಾಧ್ಯಕ್ಷ ಬಿ.ಜಿ.ಅನಂತಶಯನ, ಪ್ರತಿಯೊಬ್ಬರೂ ಪರಸ್ಪರರನ್ನು ಗೌರವಿಸಬೇಕು. ಜೊತೆಗೆ ಇಲ್ಲದವರಿಗೆ ಸಹಾಯ ಮಾಡುವಂತಾಗಬೇಕು. ಯಾವುದೇ ಕಾರಣಕ್ಕೂ ಹೃದಯ ಶೂನ್ಯರಾಗಬಾರದು. ಹೃದಯವೈಶಾಲ್ಯತೆ ಇರಬೇಕು ಎಂದರು.

ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಮುನೀರ್ ಅಹಮ್ಮದ್ ಮಾತನಾಡಿದರು. ಗ್ರಾಮಸಿರಿ ಸ್ವಾಗತ ಸಮಿತಿ ಅಧ್ಯಕ್ಷ ಪಾಣತ್ತಲೆ ಪಿ.ವಿಶ್ವನಾಥ್ ಅಧ್ಯಕ್ಷತೆ ವಹಿಸಿದ್ದರು. ಕುಂದಚೇರಿ ಗ್ರಾಪಂ ಅಧ್ಯಕ್ಷ ಪಿ.ಬಿ.ದಿನೇಶ್, ಭಾಗಮಂಡಲ ಗ್ರಾಪಂ ಅಧ್ಯಕ್ಷ ಕಾಳನ ರವಿ, ಅಯ್ಯಂಗೇರಿ ಗ್ರಾಪಂ ಅಧ್ಯಕ್ಷೆ ಎಚ್.ಪುಷ್ಪಾ, ಕರಿಕೆ ಗ್ರಾಪಂ ಅಧ್ಯಕ್ಷ ಬಾಲಚಂದ್ರ ನಾಯರ್, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ರೇವತಿ ರಮೇಶ್, ಗೌರವ ಕೋಶಾಧಿಕಾರಿ ಎಸ್.ಎಸ್.ಸಂಪತ್ ಕುಮಾರ್, ಮಡಿಕೇರಿ ತಾಲೂಕು ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್, ನಿಕಟಪೂರ್ವ ಅಧ್ಯಕ್ಷ ಅಂಬೆಕಲ್ಲು ನವೀನ್, ಭಾಗಮಂಡಲ ಹೋಬಳಿ ಅಧ್ಯಕ್ಷ ಸುನಿಲ್ ಪತ್ರಾವೋ, ಕರಿಕೆ ಗ್ರಾಮದ ಬೇಕಲ್ ರಮಾನಾಥ್, ಸಾಹಿತಿ ಡಾ.ಕುಶ್ವಂತ್ ಕೋಳಿಬೈಲು ಇತರರು ಇದ್ದರು.

ರಾಜಾಸೀಟ್ ಬಳಿಯ ಬೀದಿಬದಿ ವ್ಯಾಪಾರಿಗಳ ತೆರವು

● ನಗರಸಭೆ ವಿರುದ್ಧ ಆಕ್ರೋಶ ● ಅಹೋರಾತ್ರಿ ಧರಣಿ ಎಚ್ಚರಿಕೆ



ಮಡಿಕೇರಿಯ ರಾಜಾಸೀಟ್ ಬಳಿ ಬೀದಿಬದಿ ವ್ಯಾಪಾರಿಗಳನ್ನು ಪೊಲೀಸರ ಸಹಕಾರದೊಂದಿಗೆ ನಗರಸಭೆಯಿಂದ ತೆರವುಗೊಳಿಸಲಾಯಿತು.

ಮಡಿಕೇರಿ, ಜ.18– ನಗರದ ಪ್ರಮುಖ ಪ್ರವಾಸಿ ತಾಣವಾದ ರಾಜಾಸೀಟ್ ಬಳಿ ಬೀದಿಬದಿ ವ್ಯಾಪಾರಿಗಳನ್ನು ನಗರಸಭೆ ವತಿಯಿಂದ ಗುರುವಾರ ತೆರವುಗೊಳಿಸಲಾಯಿತು.

ಬೆಳಗ್ಗೆಯಿಂದಲೇ ನಗರಸಭೆ ಅಧಿಕಾರಿಗಳು ಬೀದಿಬದಿಯ ತಳ್ಳುವಗಾಡಿ ವ್ಯಾಪಾರಸ್ಥರನ್ನು ತೆರವುಗೊಳಿಸಲು ಮುಂದಾದರಾದರೂ ಸ್ಥಳದಿಂದ ತೆರಳಲು ವ್ಯಾಪಾರಸ್ಥರು ಒಪ್ಪದ ಹಿನ್ನೆಲೆಯಲ್ಲಿ ಮಧ್ಯಾಹ್ನ ಪೊಲೀಸರ ಸಹಕಾರದೊಂದಿಗೆ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಸ್ಥಾಯಿ ಸಮಿತಿ ಅಧ್ಯಕ್ಷ ಸತೀಶ್, ಸದಸ್ಯರಾದ ಅರುಣ್ ಶೆಟ್ಟಿ, ಶ್ವೇತಾ ಪ್ರಶಾಂತ್ ಮತ್ತಿತರರು, ನಗರಸಭೆ ಗುರುತಿಸಿರುವ ಬೇರೆಡೆಗೆ ತೆರಳುವಂತೆ ಬೀದಿಬದಿ ವ್ಯಾಪಾರಸ್ಥರ ಮನವೊಲಿಸಲು ಪ್ರಯತ್ನಿಸಿದರು.

ಆದರೆ, ವ್ಯಾಪಾರಿಗಳು ಅಸಹಾಯಕತೆ ಭರಿತ ಆಕ್ರೋಶ ವ್ಯಕ್ತಪಡಿಸಿದರು. ಬಡವರ ವಿರುದ್ಧ ನಗರಸಭೆ ಆಡಳಿತ ಗದಾ ಪ್ರಹಾರ ನಡೆಸುತ್ತಿದೆ ಎಂದು ಸದಸ್ಯರೊಂದಿಗೆ ಮಾತಿನ ಚಕಮಕಿ ನಡೆಸಿದರು. ನಂತರ ನಗರಸಭೆ ಸದಸ್ಯ ಮನ್ಸೂರ್ ಅಲಿ, ಬೇರೆಕಡೆ ಶೆಡ್ ವ್ಯವಸ್ಥೆ ಕಲ್ಪಿಸಿದ ಬಳಿಕ ವ್ಯಾಪಾರಿಗಳನ್ನು ತೆರವುಗೊಳಿಸುವಂತೆ ಅಧ್ಯಕ್ಷೆ ಅನಿತಾ ಪೂವಯ್ಯ ಗಮನಕ್ಕೆ ತಂದರು.

ಈಗಿರುವ ಜಾಗದಲ್ಲಿ ಶೆಡ್ ವ್ಯವಸ್ಥೆ ಇದೆಯೇ? ಎಂದು ಪ್ರಶ್ನಿಸಿದ ಅಧ್ಯಕ್ಷರು, ನಗರಸಭೆಯಿಂದ ಈಗಾಗಲೇ ಗುರುತಿಸಿರುವ ಸ್ಥಳಕ್ಕೆ ತೆರಳುವಂತೆ ಹೇಳಿದರು. ಬಳಿಕ ಪೊಲೀಸರ ಸಹಕಾರದೊಂದಿಗೆ ಸ್ಥಳದಲ್ಲಿದ್ದ ತಳ್ಳುವ ಗಾಡಿಗಳನ್ನು ತೆರವುಗೊಳಿಸಲಾಯಿತು. ಬಳಿಕ ಬೀದಿಬದಿ ವ್ಯಾಪಾರಿಗಳು ಸಂಜೆ ನಗರಸಭೆ ಕಚೇರಿ ಎದುರು ಜಮಾಯಿಸಿ ಆಕ್ರೋಶ ವ್ಯಕ್ತಪಡಿಸಿದರು. ದಿನನಿತ್ಯ ದುಡಿದು ತಿನ್ನುವ ಬಡಪಾಯಿಗಳ ಮೇಲೆ ನಗರಸಭೆ ಗದಾಪ್ರಹಾರ ನಡೆಸುತ್ತಿದೆ. ನ್ಯಾಯ ಸಿಗುವವರೆಗೂ ಸ್ಥಳದಿಂದ ಕದಲದೇ ಅಹೋರಾತ್ರಿ ಧರಣಿ ನಡೆಸುವುದಾಗಿ ಎಚ್ಚರಿಕೆ ನೀಡಿದರು.

> ರಾಜಾಸೀಟ್ ಬಳಿ ಬೀದಿಬದಿ ವ್ಯಾಪಾರಿಗಳಿಂದ ತೊಂದರೆಯಾಗುತ್ತಿರುವ ಬಗ್ಗೆ ಪ್ರತಿನಿತ್ಯ ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದವು. ಅಲ್ಲದೇ, ಈ ರಸ್ತೆಯಲ್ಲಿ ಖಾಸಗಿ ಬಸ್‌ಗಳ ಸಂಚಾರ ಹಾಗೂ ವಾರಾಂತ್ಯದಲ್ಲಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವ ಹಿನ್ನೆಲೆಯಲ್ಲಿ ತೊಂದರೆಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಬೀದಿಬದಿ ವ್ಯಾಪಾರಿಗಳ ಸಮಿತಿಯೊಂದಿಗೆ ಹಲವು ಬಾರಿ ಚರ್ಚಿಸಿ, ಈಗಾಗಲೇ ಗುರುತಿಸಲಾದ ಮೂರು ಸ್ಥಳಗಳಿಗೆ ತೆರಳುವಂತೆ ಹಲವು ಬಾರಿ ವ್ಯಾಪಾರಿಗಳಿಗೆ ಸೂಚಿಸಲಾಗಿತ್ತು. ಆದರೂ, ಇಲ್ಲಿಂದ ತೆರಳಲು ವ್ಯಾಪಾರಿಗಳು ಹಿಂದೇಟು ಹಾಕುತ್ತಿದ್ದ ಹಿನ್ನೆಲೆಯಲ್ಲಿ ತೆರವುಗೊಳಿಸಲಾಯಿತು.
>
> -ಅನಿತಾಪೂವಯ್ಯ, ನಗರಸಭೆ ಅಧ್ಯಕ್ಷೆ

ಸಿದ್ದಲಿಂಗಪುರದಲ್ಲಿ ಶ್ರೀಗಂಧದ ನಾಟಾಗಳ ಕಳವು

ಕುಶಾಲನಗರ, ಜ.18– ತಾಲೂಕಿನ ತೊರೆನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದಲಿಂಗಪುರ ಅರಸಿಣಗುಪ್ಪೆ ಗ್ರಾಮದ ಕಾಫಿ ತೋಟದಲ್ಲಿ 100ಕ್ಕೂ ಹೆಚ್ಚು ಗಂಧದ ಮರಗಳ ಚಿಕ್ಕ ನಾಟಾಗಳನ್ನು ಕಳ್ಳತನ ಮಾಡಲಾಗಿದೆ.



ಸಿದ್ದಲಿಂಗಪುರ ಗ್ರಾಮದ ನಾಪಂಡ ಮುತ್ತಪ್ಪ ಅವರ ಕಾಫಿ ತೋಟದಲ್ಲಿ 15 ಅಡಿಗಳಷ್ಟು ಎತ್ತರದ ಗಂಧದ ನಾಟಾಗಳನ್ನು ಕಳವು ಮಾಡಲಾಗಿದೆ. ಕಾಫಿ ಫಸಲು ಕ್ಯುಯಲು ತೆರಳಿದ ವೇಳೆ ತೋಟದ ಮಾಲೀಕರ ಗಮನಕ್ಕೆ ಬಂದಿದೆ. ಸೋಮವಾರಪೇಟೆ ವಲಯ ಅರಣ್ಯಾಧಿಕಾರಿ ಚೇತನ್ ಮತ್ತು ಬಾಣವಾರ ಉಪವಲಯ ಅರಣ್ಯಾಧಿಕಾರಿ ಎಂ.ಕೆ.ಮನು, ಸಿಬ್ಬಂದಿ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಪ್ರಾಪ್ತೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದವನಿಗೆ ಜೈಲು ಶಿಕ್ಷೆ

ಮಡಿಕೇರಿ, ಜ.18– ಅಪ್ರಾಪ್ತೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದ ಅಪರಾಧಿಗೆ ನ್ಯಾಯಾಲಯ ಐಪಿಸಿ ಮತ್ತು ಪೋಕ್ಸೋ ಕಾಯ್ದೆಯಡಿ 3 ವರ್ಷ ಸಜೆ ಶಿಕ್ಷೆ ಮತ್ತು 15 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ನಗರ ವ್ಯಾಪ್ತಿಯ ಹಾಲಿನ ವಾಹನ ಚಾಲಕ ಸೂರ್ಯ ನಾಯಕ ಶಿಕ್ಷೆಗೆ ಒಳಗಾಗಿದ್ದು, ಈತ 2019ರ ಡಿ.10ರಂದು ಶಾಲೆಗೆ ತೋಟದ ಕಾಲು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಅಪ್ರಾಪ್ತೆ ಅತ್ಯಾಚಾರಕ್ಕೆ ಯತ್ನಿಸಿದ್ದ. ಈ ಕುರಿತು ಮಡಿಕೇರಿ ನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆ ನಡೆಸಿದ ಮಹಿಳಾ ಪೊಲೀಸ್ ಠಾಣೆಯ ಅಂದಿನ ವೃತ್ತ ನಿರೀಕ್ಷಕ ಪಿ.ಪಿ.ಸೋಮೇಗೌಡ, ಮಡಿಕೇರಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಈತನ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಈ ಸಮಬಂಧ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಹೆಚ್.ಸಿ.ಶ್ಯಾಮ್ ಪ್ರಸಾದ್, ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಐಪಿಸಿ ಮತ್ತು ಪೋಕ್ಸೋ ಕಾಯ್ದೆಯಡಿ 3 ವರ್ಷ ಸಜೆ ಮತ್ತು 15 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಅಭಿಯೋಜಕ ಬಿ.ಎಸ್.ರುದ್ರಪ್ರಸನ್ನ ವಾದ ಮಂಡಿಸಿದ್ದರು.

ಇಂದು, ನಾಳೆ ಜಿಲ್ಲಾ ಸಹಕಾರ ಸಮ್ಮೇಳನ

ಮಡಿಕೇರಿ, ಜ.18– ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ವತಿಯಿಂದ ಜಿಲ್ಲಾ ಸಹಕಾರ ಸಮ್ಮೇಳನ, ಜಿಲ್ಲಾ ಮಟ್ಟದ ವಾಹನ ಹಾಗೂ ಕೃಷಿ ಯಂತ್ರೋಪಕರಣಗಳ ಸಾಲ ಮೇಳವನ್ನು ಜ.19 ಮತ್ತು 20ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ನಗರದ ಗಾಂಧಿ ಮೈದಾನದಲ್ಲಿ ಏರ್ಪಡಿಸಲಾಗಿದೆ. ಜ.19 ರಂದು ಬೆಳಗ್ಗೆ 10 ಗಂಟೆಗೆ ಸಾಲ ಮೇಳವನ್ನು ಗಣ್ಯರು ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರೂಂ ಬುಕ್ ನೆಪದಲ್ಲಿ ಹೋಟೆಲ್ ಮಾಲೀಕರಿಗೆ ಸೈಬರ್ ವಂಚನೆ

ಮಡಿಕೇರಿ, ಜ.18– ರೂಂ ಬುಕ್ ನೆಪದಲ್ಲಿ ನಗರದ ಹೋಟೆಲ್‌ವೊಂದರ ಮಾಲೀಕರಿಗೆ ಸೈಬರ್ ವಂಚಕರು ವಂಚಿಸಿದ ಪ್ರಕರಣ ಬೆಳಕಿಗೆ ಬಂದಿದೆ.

ಹಿಂದಿಯಲ್ಲಿ ಮಾತನಾಡಿದ ವ್ಯಕ್ತಿಯೊಬ್ಬ ರೂಂಬೇಕೆಂದು ಆನ್‌ಲೈನ್ ಮೂಲಕ ಹೋಟೆಲ್‌ಗೆ ಕೋರಿಕೆ ಕಳುಹಿಸಿದ್ದಾನೆ. ರೂಂ ಬುಕ್ ಮಾಡಿಕೊಳ್ಳಲು ಮುಂಗಡ ಹಣ ಪಾವತಿ ಮಾಡಬೇಕೆಂದು ತಿಳಿಸಿದ ಹೋಟೆಲ್ ವ್ಯವಸ್ಥಾಪಕರು, ಮಾಲೀಕರ ಹಣ ವರ್ಗಾವಣೆಯ ಮೊಬೈಲ್ ಸಂಖ್ಯೆಯನ್ನು ಆತನಿಗೆ ನೀಡಿದ್ದಾರೆ. ರೂಂ ಬೇಡಿಕೆಯನ್ನಿಟ್ಟಿದ್ದ ಈತ ತನ್ನ ಮೊಬೈಲ್ ಮೂಲಕ 20 ಸಾವಿರ ರೂ. ಪಾವತಿಸಿರುವ ಸ್ಕ್ರೀನ್‌ಶಾಟ್ ಅನ್ನು ಹೋಟೆಲ್ ಮಾಲೀಕರಿಗೆ ಕಳುಹಿಸಿದ್ದಾನೆ. ನಂತರ ತಕ್ಷಣ ಕರೆ ಮಾಡಿ ಮುಂಗಡ 2 ಸಾವಿರಕ್ಕೆ ಬದಲಾಗಿ 20 ಸಾವಿರ ರೂ. ಪಾವತಿ ಮಾಡಿರುವೆ. 18 ಸಾವಿರವನ್ನು ನನಗೆ ಮರಳಿಸಿ ಎಂದು ಮಾಲೀಕರಲ್ಲಿ ಮನವಿ ಮಾಡುತ್ತಾನೆ.

20 ಸಾವಿರ ಬಂದಿರುವ ಬಗ್ಗೆ ಸ್ಕ್ರೀನ್ ಶಾಟ್ ಮೂಲಕ ಮನವರಿಕೆ ಮಾಡಿಕೊಂಡ ಮಾಲೀಕರು, ಆತನಿಗೆ ಕರೆ ಮಾಡಿ 18 ಸಾವಿರವನ್ನು ಮರಳಿ ಕಳುಹಿಸಿದ್ದಾರೆ. ಆದರೆ, ಸ್ವಲ್ಪ ಹೊತ್ತು ಕಳೆದ ನಂತರ ಅದೇ ವ್ಯಕ್ತಿಯ ಮೊಬೈಲ್ ಸಂಖ್ಯೆಯಿಂದ 27 ಸಾವಿರ ರೂ. ಪಾವತಿಯಾಗಿರುವ ಬಗ್ಗೆ ಸ್ಕ್ರೀನ್‌ಶಾಟ್ ಬರುತ್ತದೆ. ಆತ ಮತ್ತೆ ಕರೆ ಮಾಡಿ ನಾನು ಯಾವುದೋ ಆಸ್ಪತ್ರೆಗೆ ಪಾವತಿಸಬೇಕಾದ ಹಣವನ್ನು ತಮಗೆ ತಪ್ಪಾಗಿ ಕಳುಹಿಸಿದ್ದೇನೆ. ಹಣವನ್ನು ಮರಳಿಸಿ ಎಂದು ಕೋರಿಕೆದಿದ್ದಾನೆ.

ಇದರಿಂದ ಸಂಶಯಗೊಂಡ ಹೋಟೆಲ್ ಮಾಲೀಕರು ತಮ್ಮ ಖಾತೆಯನ್ನು ಪರಿಶೀಲಿಸಿದಾಗ ವಂಚಕ ಯಾವುದೇ ಹಣ ಪಾವತಿಸಿರುವುದಿಲ್ಲ. 20 ಸಾವಿರ ರೂ. ಮತ್ತು 27 ಸಾವಿರ ರೂ. ಪಾವತಿಸಿರುವುದು ಸುಳ್ಳೆಂದು ಮನವರಿಕೆಯಾಗಿದೆ. ತಮ್ಮ ಖಾತೆಯಿಂದ 18 ಸಾವಿರ ಕಳೆದುಕೊಂಡಿರುವುದು ಖಾತ್ರಿಯಾದ ತಕ್ಷಣ ವಂಚಕನಿಗೆ ಕರೆ ಮಾಡಿದಾಗ ಆತನ ಮೊಬೈಲ್ ಸ್ವಿಚ್‌ಆಫ್ ಆಗಿದೆ. ಇವನು ಸೈಬರ್ ವಂಚನೆ ಎನ್ನುವುದು ಮಾಲೀಕರಿಗೆ ಅರ್ಥವಾಗಿದೆ. ಬಳಿಕ ಮಾಲೀಕರು ಕೊಡಗು ಜಿಲ್ಲಾ ಸೈಬರ್ ಅಪರಾಧ ಪತ್ತೆದಳಕ್ಕೆ ದೂರು ನೀಡಿದ್ದಾರೆ.

ಬಿಜೆಪಿ ಜಿಲ್ಲಾಧ್ಯಕ್ಷ ನಿರಂಜನಕುಮಾರ್ ಅಧಿಕಾರ ಸ್ವೀಕಾರ



ಚಾಮರಾಜನಗರ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಪಕ್ಷದ ನೂತನ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಅಧಿಕಾರ ಸ್ವೀಕರಿಸಿದರು. ಮುಖಂಡರಾದ ಪ್ರೊ.ಮಲ್ಲಿಕಾರ್ಜುನಪ್ಪ, ಎನ್.ಮಹೇಶ್, ಎಸ್.ಬಾಲರಾಜ್, ಎಂ.ರಾಮಚಂದ್ರ, ನಾರಾಯಣಪ್ರಸಾದ್ ಇದ್ದರು.

ಚಾಮರಾಜನಗರ, ಜ.18–ಬಿಜೆಪಿ ನೂತನ ಜಿಲ್ಲಾಧ್ಯಕ್ಷರಾದ ಮಾಜಿ ಶಾಸಕ ಸಿ.ಎಸ್. ನಿರಂಜನ ಕುಮಾರ್ ಗುರುವಾರ ಅಧಿಕಾರ ಸ್ವೀಕರಿಸಿದರು.

ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಆಯೋಜಿಸಿದ್ದ ಪದಗ್ರಹಣ ಕಾರ್ಯಕ್ರಮದಲ್ಲಿ ನಿಕಟಪೂರ್ವ ಅಧ್ಯಕ್ಷ ನಾರಾಯಣಪ್ರಸಾದ್ ಹಾಗೂ ಪಕ್ಷದ ಹಿರಿಯ ಮುಖಂಡರು ಸಿ.ಎಸ್. ನಿರಂಜನ ಕುಮಾರ್ ಅವರಿಗೆ ಪಕ್ಷದ ಧ್ವಜ ನೀಡುವ ಅಧಿಕಾರ ಹಸ್ತಾಂತರಿಸಿದರು.

ನಂತರ ನಿಕಟಪೂರ್ವ ಅಧ್ಯಕ್ಷ ನಾರಾಯಣ ಪ್ರಸಾದ್ ಮಾತನಾಡಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಧಿಕಾರ ಸ್ವೀಕಾರ ಮಾಡಿದ ಬಳಿಕ ಎಲ್ಲಾ ಜಿಲ್ಲೆಗಳ ಅಧ್ಯಕ್ಷರನ್ನು ಬದಲಾಯಿಸುವ ಮೂಲಕ ಹೊಸ ಸಂಚಲನ ಮೂಡಿಸಿದ್ದಾರೆ. ಜಿಲ್ಲೆಯ ಎಲ್ಲಾ ಪ್ರಮುಖರ ಅಭಿಪ್ರಾಯಗಳನ್ನು ಆಲಿಸಿದ ಬಳಿಕ ಸಿ.ಎಸ್. ನಿರಂಜನ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ಅವರ ಜತೆ ಪಕ್ಷದ ಕಾರ್ಯಕರ್ತರೊಂದಿಗೆ ಪಕ್ಷ ಮುನ್ನಡೆಸಲು ಭಾಗಿಯಾಗುತ್ತೇನೆ ಎಂದರು.

ಕೇಂದ್ರ ಬರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ನೂತನ ಜಿಲ್ಲಾಧ್ಯಕ್ಷರು ಎಲ್ಲರ ವಿಶ್ವಾಸವನ್ನು ಗಳಿಸಿ ಪಕ್ಷವನ್ನು ಮುನ್ನಡೆಸಿಕೊಂಡು ಹೋಗಬೇಕು. ಯಾವುದೇ ಚಾಡಿ ಮಾತುಗಳಿಗೆ ಕಿವಿಕೊಡದೇ, ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಗುರುತಿಸುವ ಮೂಲಕ ಅವರ ಪ್ರೀತಿ, ವಿಶ್ವಾಸ ಗಳಿಸಿ ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಂತೆ ಮಾಡಬೇಕು ಎಂದು ಹೇಳಿದರು.

ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಮಲ್ಲಿಕಾರ್ಜುನಪ್ಪ ಮಾತನಾಡಿ, ಜಿಲ್ಲೆಯ ನೂತನ ಸಾರಥಿಯಾಗಿ ಜವಾಬ್ದಾರಿ ಹೊತ್ತಿರುವ ಸಿ.ಎಸ್.ನಿರಂಜನ ಕುಮಾರ್ ಎಲ್ಲಾರನ್ನು ಒಗ್ಗೂಡಿಸಿ ಸಂಘಟನೆ ಮಾಡಬೇಕು. ಇಲ್ಲದಿದ್ದರೆ ಗುರಿ ತಲುಪಲು ಸಾಧ್ಯವಿಲ್ಲ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಮಾಜಿ ಶಾಸಕ ಎಸ್.ಬಾಲರಾಜ್, ಬಿಜೆಪಿ ಮುಖಂಡರಾದ ನೂರೊಂದುಶೆಟ್ಟಿ, ನಿಜಗುಣರಾಜು, ಪ್ರೀತಂನಾಗಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಗಳಾ ಶಿವಕುಮಾರ್, ಮುಖಂಡರಾದ ನಾಗಶ್ರೀ ಪ್ರತಾಪ್, ನಿಜದನಿ ವೆಂಕಟೇಶ್, ಬಸವಣ್ಣ ಮೂರ್ನಾಕುಡ್ ಪ್ರಕಾಶ್, ಕೆರಹಳ್ಳಿ ಮಹದೇವಸ್ವಾಮಿ ಪ್ರಣಯ್ ಮಂಜುನಾಥ್, ಅರಕಲವಾಡಿ ನಾಗೇಂದ್ರ, ಆರ್.ಸುಂದರ್, ಎಸ್. ಮಹದೇವಯ್ಯ, ನಗರಸಭಾ ಸದಸ್ಯರಾದ ಆಶಾ, ಮಮತಾ, ಕುಮುದಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾನೂನು ಅರಿವಿನೊಂದಿಗೆ ಧಾರ್ಮಿಕ ಚಿಂತನೆ ಅಗತ್ಯ

● ನ್ಯಾಯಾಧೀಶ ಎಂ.ಶ್ರೀಧರ್ ಸಲಹೆ ● ಕಾರಾಗೃಹದಲ್ಲಿ ಕೈದಿಗಳಿಗೆ ಕಾನೂನು ಅರಿವು



ಚಾಮರಾಜನಗರದ ಜಿಲ್ಲಾ ಕಾರಾಗೃಹದಲ್ಲಿ ಕೈದಿಗಳಿಗೆ ಹಮ್ಮಿಕೊಂಡಿದ್ದ ಕಾನೂನು ಅರಿವು ಮತ್ತು ಧಾರ್ಮಿಕ ಚಿಂತನೆಗಳ ಕಾರ್ಯಕ್ರಮವನ್ನು ನ್ಯಾಯಾಧೀಶ ಎಂ.ಶ್ರೀಧರ್ ಉದ್ಘಾಟಿಸಿದರು. ಜನಾರ್ಧನ ಪ್ರತಿಷ್ಠಾನದ ಅನಂತಪ್ರಸಾದ್, ವಾಸುದೇವರಾವ್, ರಮೇಶ್, ಪ್ರಕಾಶ್, ಜೈಲರ್ ಶಿವಕುಮಾರ್ ಇದ್ದರು.

> ರಾಮ ಜಪದಿಂದ ವಾಲ್ಮೀಕಿಯಾಗಿ ಪರಿವರ್ತನೆಗೊಂಡು, ರಾಮಾಯಾಣವನ್ನು ಬರೆದು ವಾಲ್ಮೀಕಿ ಮಹರ್ಷಿಗಳಾದರು, ಅದರಂತೆ ನಿಮ್ಮ ಮನಸ್ಸು ಪರಿವರ್ತನೆಗೊಳ್ಳಲಿ.
>
> -ಅನಂತಪ್ರಸಾದ್, ಜನಾರ್ಧನ ಪ್ರತಿಷ್ಠಾನ

ಚಾಮರಾಜನಗರ, ಜ.18– ಪ್ರಸ್ತುತ ಸನ್ನಿವೇಶದಲ್ಲಿ ಸುಸಂಸ್ಕೃತನಾಗಿರಬೇಕಾದರೆ ಕಾನೂನು ಅರಿವಿನೊಂದಿಗೆ ಧಾರ್ಮಿಕ ಚಿಂತನೆಗಳು ಅಗತ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶ ಎಂ.ಶ್ರೀಧರ್ ಸಲಹೆ ನೀಡಿದರು.

ನಗರದ ಜಿಲ್ಲಾ ಕಾರಾಗೃಹದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜನಾರ್ಧನ ಪ್ರತಿಷ್ಠಾನದ ವತಿಯಿಂದ ಕೈದಿಗಳಿಗೆ ಹಮ್ಮಿಕೊಂಡಿದ್ದ ಕಾನೂನು ಅರಿವು ಮತ್ತು ಧಾರ್ಮಿಕ ಚಿಂತನೆಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹುಟ್ಟಿನಿಂದ ಸಾಯುವವರೆಗೂ ಮನುಷ್ಯ ಒಂದಲ್ಲ ಒಂದು ಕಾನೂನಿಯಡಿ ಬದುಕಲೇಬೇಕು. ಕಾನೂನಿನ ಅರಿವಿನೊಂದಿಗೆ ನಮ್ಮ ಸಾಂಸ್ಕೃತಿಕ ಪರಂಪರೆ, ಧಾರ್ಮಿಕ ಚಿಂತನೆಗಳನ್ನು ಮೈಗೂಡಿಸಿಕೊಂಡಾಗ ಸುಸಂಸ್ಕೃತ ಜೀವನನದ ಜೊತಗೆ ಒಳ್ಳೆಯ ಸಮಾಜ ಕಟ್ಟಬಹುದು ಎಂದರು.

ಎಲ್ಲಾ ಮಾನವರು ಒಂದೇ, ಎಲ್ಲಾ ಧರ್ಮಗಳಲ್ಲೂ ಅದರದೇ ಧಾರ್ಮಿಕ ಆಚರಣೆ, ಚಿಂತನೆಗಳು ಇವೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ನಾವು ಯಾವ ತಪ್ಪುಗಳನ್ನು ಮಾಡುವುದಿಲ್ಲ. ಏನೋ ಅರಿಯದೇ ದುಡುಕಿನಿಂದ ಮಾಡಿದ ತಪ್ಪಿನಿಂದಾಗಿ ಕಾನೂನಿನಡಿ ಶಿಕ್ಷೆ ಅನುಭವಿಸಲು ನೀವು ಇಲ್ಲಿಗೆ ಬಂದಿದ್ದೀರಿ. ಇದು ನಿಮ್ಮ ಮನಪರಿರ್ತನೆಯ ಕೇಂದ್ರ, ನಮ್ಮೊಳಗೆ ಒಂದು ಆತ್ಮವಿದೆ, ಈ ಆತ್ಮ ಜೀವನದಲ್ಲಿ ಒಳ್ಳೆಯದಿರಬೇಕಾದರೆ ಧಾರ್ಮಿಕ ಚಿಂತನೆಗಳು ಅತಿಮುಖ್ಯ ಎಂದು ಹೇಳಿದರು.

ಜಿಲ್ಲಾ ಉಚಿತ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಿಮ್ಮ ಪ್ರಕರಣಗಳಿಗೆ ಸಂಬಂಧಿಸಿದಂತೆ ಉಚಿತ ಕಾನೂನು ನೆರವು ಇದೆ. ಎಲ್ಲರೂ ಶಾಂತಿ ನೆಮ್ಮದಿಯಿಂದ ಇರಬೇಕೆಂದು ಬಯಸಿ, ಅದಕ್ಕಾಗಿ ಜನಾರ್ಧನ ಪ್ರತಿಷ್ಠಾನದವರು ಜ.22 ರಂದು ನಡೆಯುವ ಶ್ರೀರಾಮ ಪ್ರತಿಷ್ಠಾಪನಾ ಅಂಗವಾಗಿ ರಾಮಕಥಾ ಮಹಿಮೆ, ರಾಮ ಜಪದ ಬಗ್ಗೆ ತಿಳಿಸಿಕೊಡುವ ಒಳ್ಳೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಇದನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಜನಾರ್ಧನ ಪ್ರತಿಷ್ಠಾನದ ಅನಂತಪ್ರಸಾದ್ ಮಾತನಾಡಿ, ಕೆಲ ದುಡಿಕಿನ ನಿರ್ಧಾರದಿಂದ ನೀವು ಇಲ್ಲಿಗೆ ಬಂದಿದ್ದೀರಿ. ನಿಮ್ಮ ಮನಸ್ಸು ಶುದ್ಧಿಯಾಗಿ ಮುಂದಿನ ನಿಮ್ಮ ಜೀವನ ನೆಮ್ಮದಿಯಾಗಿರಬೇಕೆಂಬ ಉದ್ದೇಶದಿಂದ ಈ ಧಾರ್ಮಿಕ ಚಿಂತನೆಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಭಗವಂತ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ರೂಪದಲ್ಲಿ ಕಾಣಿಸಿಕೊಳ್ಳುತ್ತೇನೆ. ಅದೇ ರೀತಿ ಜ.22ರಂದು ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ಪ್ರತಿಷ್ಠಾಪನೆಯಾಗುತ್ತಿದೆ. ಇದರ ಮಹತ್ವವೇನು ಎಂಬುದು ನಿಮಗೂ ತಿಳಿಯಬೇಕು ಎಂಬ ಉದ್ದೇಶದಿಂದ ಶ್ಯಾಮಲಾ ಪ್ರಕಾಶ್ ನೀಡಿರುವ ರಾಮ ಕಥಾ ಮಹಿಮೆ, ಪುಸ್ತಕ ನೀಡಿ, ರಾಮಜಪ ಹೇಳಿಕೊಡಲಾಗುತ್ತಿದ್ದು, ಮುಂದಿನ ನಿಮ್ಮ ಜೀವನ ಶಾಂತಿ ನೆಮ್ಮದಿ ಯಿಂದ ಇರಲಿ ಎಂದು ಆಶಿಸಿದರು.

ಸೇವಾ ಭಾರತಿಯ ವಾಸುದೇವರಾವ್, ರಮೇಶ್, ಪ್ರಕಾಶ್ ಹಾಗೂ ಜೈಲರ್ ಶಿವಕುಮಾರ್ ಇದ್ದರು. ಇದೇ ಸಂದರ್ಭದಲ್ಲಿ ಕೈದಿಗಳಿಗೆ ರಾಮಕಥಾ ಮಹಿಮೆ, ಪುಸ್ತಕ ನೀಡಿ, ರಾಮಜಪ ಹೇಳಿಕೊಡಲಾಯಿತು.

ಶೋಷಿತ ಸಮುದಾಯಗಳ ಒಗ್ಗಟ್ಟು ಪ್ರದರ್ಶನ ಅನಿವಾರ್ಯ



ಚಾಮರಾಜನಗರ ಸಮೀಪದ ಮಲ್ಲಪ್ಪುಯ್ಯನಪುರ ಗ್ರಾಮದಲ್ಲಿ ಕನಕ ರಾಯಣ್ಣ ಬಳಗದ ಸಂಘ ಉದ್ಘಾಟನೆ ಹಾಗೂ ನಾಮಫಲಕವನ್ನು ಶೋಷಿತ ವರ್ಗಗಳ ಮಹಾಒಕ್ಕೂಟದ ಪ್ರಧಾನ ಸಂಚಾಲಕ ರಾಮಚಂದ್ರಪ್ಪ ಅನಾವರಣಗೊಳಿಸಿದರು.

ಚಾಮರಾಜನಗರ, ಜ.18–ಶೋಷಿತ ಸಮುದಾಯಗಳಿಂದ ಬಂದ ನಾವು, ಒಗ್ಗಟ್ಟು ಪ್ರದರ್ಶಿಸುವ ಮೂಲಕ ಸವಲತ್ತುಗಳನ್ನು ಪಡೆದುಕೊಳ್ಳಲು ಬಲಾಢ್ಯ ಸಮುದಾಯಗಳ ವಿರುದ್ಧ ಹೋರಾಟ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ಶೋಷಿತ ವರ್ಗಗಳ ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ರಾಮಚಂದ್ರಪ್ಪ ತಿಳಿಸಿದರು.

ಸಮೀಪದ ಮಲ್ಲಪ್ಪಯ್ಯನಪುರ ಗ್ರಾಮದಲ್ಲಿ ಶ್ರೀ ಕನಕ ರಾಯಣ್ಣ ಬಳಗದ ಸಂಘ ಉದ್ಘಾಟನೆ ಹಾಗೂ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಇತ್ತೀಚಿನ ರಾಜಕೀಯ ಬೆಳವಣಿಗೆ ಹಾಗೂ ಚುನಾವಣೆಗಳನ್ನು ನೋಡಿದರೆ, ಶೋಷಿತ ಸಮುದಾಯಗಳ ಶೋಷಣೆ ಮತ್ತಷ್ಟು ಹೆಚ್ಚಾಗಲಿದೆ. ಹಿಂದುಳಿದ ವರ್ಗಗಳ ಸಿದ್ದರಾಮಯ್ಯ ಅವರು 2013ರಲ್ಲಿ ಕೊಟ್ಟಂತಹ ಆಡಳಿತವನ್ನು ಈಗ ನೀಡಲು ಬಿಡುತ್ತಿಲ್ಲ. ಅವರ ಯೋಜನೆಗಳು ಹಾಗೂ ಕಾರ್ಯಕ್ರಮಗಳು ಅನುಷ್ಠಾನಗೊಳ್ಳದಂತೆ ತಡೆಯುತ್ತಿರುವ ಮನುವಾದಿ ಮನಸ್ಥಿತಿಗಳು ನಿರಂತರವಾಗಿ ಕಿರುಕುಳ ನೀಡುತ್ತಾ ಬಂದಿವೆ. ಇದರ ವಿರುದ್ಧ ಶೋಷಿತ ವರ್ಗಗಳು ಜಾಗೃತಿಗೊಳ್ಳಬೇಕಾಗಿದೆ ಎಂದರು.

ತಾಲೂಕು ಕುರುಬರ ಸಂಘ ಅಧ್ಯಕ್ಷ ಆರ್.ಉಮೇಶ್ ಮಾತನಾಡಿ, ಸಂಘವನ್ನು ಅಸ್ತಿತ್ವಕ್ಕೆ ತರುವುದು ದೊಡ್ಡದಲ್ಲ. ಅದನ್ನು ಸಂಘಟನೆ ಮಾಡುವ ಜೊತೆಗೆ ಕಾಲ ಕಾಲಕ್ಕೆ ಲೆಕ್ಕಪತ್ರ ಮಂಡಿಸಿ, ಸದಾ ಚಟುವಟಿಕೆಗಳಲ್ಲಿರುವಂತೆ ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಎಂ.ಈರಣ್ಣ, ಮಾಜಿ ಅಧ್ಯಕ್ಷ ಸುಬ್ರಮಣ್ಯ, ಬಿಇಓ ಡಿ.ಸೋಮಣ್ಣೇಗೌಡ, ಮುಖಂಡರಾದ ಮಲ್ಲೇದೇವರು, ಯಜಮಾನರಾದ ಎಂ.ಎನ್.ಮಹದೇವ್, ಸಂಪತ್ತುಕುಮಾರ್, ಶಿವಮರ ಪಿಡಿಓ ರವಿ, ಕಾರ್ಯದರ್ಶಿ ಮಂಜುನಾಥ್, ಗ್ರಾಮ ಆಡಳಿತಾಧಿಕಾರಿ ಆನಂದ್‌ದೂಳಪ್ಪ, ಕನಕ ರಾಯಣ್ಣ ಸಂಘದ ಅಧ್ಯಕ್ಷ ಎಂ.ಸಿ.ರಾಜು, ಉಪಾಧ್ಯಕ್ಷ ರಾಜೇಂದ್ರ, ಕಾರ್ಯದರ್ಶಿ ಮರಿಸ್ವಾಮಿ, ಸಹಕಾರ್ಯದರ್ಶಿ ರಮೇಶ್, ಖಜಾಂಚಿ ರಾಜೇಶ್, ಗ್ರಾಪಂ ಸದಸ್ಯರಾದ ಶಿವು, ಶಿವಣ್ಣ, ಎಂ.ಸಿ.ಮಹದೇವಮ್ಮ, ಶೋಭಾ ಶಿವಕುಮಾರ್ ಉಪಸ್ಥಿತರಿದ್ದರು.

ಕೆಂಪೇಗೌಡರ ನಾಮಕರಣಕ್ಕೆ ಅನುಮೋದನೆ

ಹನೂರು, ಜ.18–ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಎಂಎಂ ಹಿಲ್ಸ್ ರಸ್ತೆಯ ರಾಮಪುರ, ಎಲ್ಲೇ ಮಾಳ ವೃತ್ತವನ್ನು ಹಿಂದಿನ ನಡಾವಳಿಯಂತೆ ನಾಡಪ್ರಭು ಕೆಂಪೇಗೌಡರ ವೃತ್ತ ಎಂದು ನಾಮಕರಣ ಮಾಡಲು ಅನುಮೋದನೆ ನೀಡಲಾಗಿದೆ ಎಂದು ಶಾಸಕ ಎಂ.ಆರ್.ಮಂಜುನಾಥ್ ತಿಳಿಸಿದರು.

ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣದ ಪೆಟ್ರೋಲ್ ಬಂಕ್ ಮುಂಭಾಗದ ರಾಮಾಪುರ, ಎಲ್ಲೇಮಾಳ ವೃತ್ತಕ್ಕೆ ಕೆಂಪೇಗೌಡರ ವೃತ್ತ ಎಂದು ನಾಮಕರಣ ಮಾಡಲು 2022ರ ಜುಲೈ 30ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಅದರಂತೆ ಕ್ರಮವಹಿಸಲು ಅನುಮೋದನೆ ನೀಡಲಾಗಿದೆ ಎಂದರು. ಸಭೆಯಲ್ಲಿ ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿ ಗುರುಪ್ರಸಾದ್, ಮುಖ್ಯಾಧಿಕಾರಿ ಮಹೇಶ್ ಕುಮಾರ್, ಸದಸ್ಯರು ಹಾಜರಿದ್ದರು.

ಕೂಸಿನಮನೆ ಸದುಪಯೋಗವಾಗಲಿ



ಯಳಂದೂರು ತಾಲೂಕಿನ ಅಗರ ಗ್ರಾಮದಲ್ಲಿ ಕೂಸಿನಮನೆಯನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು.

ಯಳಂದೂರು, ಜ.18– ಸರ್ಕಾರ ನರೇಗಾ ಕೂಲಿ ಕಾರ್ಮಿಕರ ಮಕ್ಕಳ ಆರೈಕೆಗಾಗಿ ಕೂಸಿನಮನೆ ಯೋಜನೆ ಜಾರಿಗೆ ತಂದಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು. ತಾಲೂಕಿನ ಅಗರ ಗ್ರಾಮದಲ್ಲಿ ಕೂಸಿನಮನೆ ಉದ್ಘಾಟಿಸಿ ಮಾತನಾಡಿದ ಅವರು, ನರೇಗಾ ಮಹಿಳಾ ಕಾರ್ಮಿಕರು ಕೆಲಸದ ಸಮಯದಲ್ಲಿ ತಮ್ಮ ಮಕ್ಕಳ ಆರೈಕೆ ಕಷ್ಟವಾಗುತ್ತದೆ. ಈ ಉದ್ದೇಶದಿಂದ ಕೂಸಿನ ಮನೆ ಹೊಸ ಯೋಜನೆಯನ್ನು ಜಾರಿಗೆ ತರಲಾಗಿದೆ. ತಾಲೂಕಿನಲ್ಲಿ 7 ಗ್ರಾಪಂಗಳು ಆಯ್ಕೆಯಾಗಿದ್ದು, ತಲಾ 1 ಲಕ್ಷ ರೂ. ಅನುದಾನ ನೀಡಲಾಗಿದೆ. ಇದರಲ್ಲಿ 55 ಸಾವಿರ ರೂ. ಇಲ್ಲಿನ ಮಕ್ಕಳ ಆಹಾರಕ್ಕೆ ನೀಡಲಾಗಿದೆ. ಉಳಿದ ಹಣ ಇದರ ನಿರ್ವಹಣೆಗೆ ಮೀಸಲಿಡಲಾಗಿದೆ ಎಂದರು.

ಗ್ರಾಪಂ ಅಧ್ಯಕ್ಷ ಮುದ್ದನಾಯಕ, ಉಪಾಧ್ಯಕ್ಷೆ ನಿರ್ಮಲಾ, ಸದಸ್ಯ ಸುರೇಶ್, ನಳಿನಾ ಕುಮಾರಿ, ಅನ್ನಪೂರ್ಣ, ಕುಮಾರ, ನಾಗರಾಜು, ಸ್ವಾಮಿ, ಇಓ ಶ್ರೀನಿವಾಸ್, ಸಿಡಿಪಿಓ ಸಕಲೇಶ್ವರ, ಬಿಇಓ ಕೆ.ಕಾಂತರಾಜು, ಪಿಡಿಓ ಮಹದೇವಸ್ವಾಮಿ ಜಿಪಂ ಮಾಜಿ ಉಪಾಧ್ಯಕ್ಷ ಸಿದ್ದರಾಜು ಇತರರು ಹಾಜರಿದ್ದರು.

ಜ.22ರಂದು ಕೇಂದ್ರ ಸರ್ಕಾರಿ ಕಚೇರಿಗಳಿಗೆ ಅರ್ಧ ದಿನ ರಜೆ ಘೋಷಣೆ

ನವದೆಹಲಿ, ಜ.18– ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜ.22ರಂದು ದೇಶದಾದ್ಯಂತ ಎಲ್ಲಾ ಕೇಂದ್ರ ಸರ್ಕಾರಿ ಕಚೇರಿಗಳಿಗೆ ಅರ್ಧದಿನ ರಜೆ ಘೋಷಿಸಿ ಕೇಂದ್ರ ಸಿಬ್ಬಂದಿ ಸಚಿವಾಲಯ ಗುರುವಾರ ಆದೇಶ ಹೊರಡಿಸಿದೆ.

ರಾಮಮಂದಿರದ ಗರ್ಭಗುಡಿಯಲ್ಲಿ ರಾಮಲಲ್ಲಾನ ನೂತನ ವಿಗ್ರಹದ 'ಪ್ರಾಣ ಪ್ರತಿಷ್ಠಾಪನೆ' ಸಮಾರಂಭವನ್ನು ಸೋಮವಾರ ನಿಗದಿಪಡಿಸಲಾಗಿದೆ. ಸಮಾರಂಭವನ್ನು ಪ್ರಧಾನಿ ನರೇಂದ್ರ ಮೋದಿ ನೆರವೇರಿಸಲಿದ್ದಾರೆ.

ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆಯನ್ನು ದೇಶದಾದ್ಯಂತ 22ನೇ ಜನವರಿ 2024 ರಂದು ಆಚರಿಸಲಾಗುತ್ತಿದೆ ನೌಕರರು ಸಹ ಈ ಸಂಭ್ರಮದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ದೇಶಾದ್ಯಂತ ಎಲ್ಲಾ ಕೇಂದ್ರ ಸರ್ಕಾರಿ ಕಚೇರಿಗಳು, ಕೇಂದ್ರ ಸಂಸ್ಥೆಗಳು ಮತ್ತು ಕೇಂದ್ರ ಕೈಗಾರಿಕಾ ಸಂಸ್ಥೆಗಳ ನೌಕರರಿಗೆ ಅರ್ಧ ದಿನ ರಜೆ ನೀಡಲು ನಿರ್ಧರಿಸಲಾಗಿದೆ. 2024ರ ಜನವರಿ 22ರಂದು ಮಧ್ಯಾಹ್ನ 2.30ರವರೆಗೆ ರಜೆ ನೀಡಲಾಗಿದೆ ಎಂದು ಕೇಂದ್ರ ಸರ್ಕಾರದ ಸಚಿವಾಲಯಗಳು/ಇಲಾಖೆಗಳಿಗೆ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿದೆ.

ಲಕ್ಷ್ಮಿಪುರ ಡೈರಿಗೆ ಪ್ರಕಾಶ್ ಅಧ್ಯಕ್ಷ



ಕೆ.ಆರ್.ಪೇಟೆ, ಜ.18– ತಾಲೂಕಿನ ಲಕ್ಷ್ಮಿಪುರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಪ್ರಕಾಶ್ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಸಂಘದ ಸಭಾಂಗಣದಲ್ಲಿ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಪ್ರಕಾಶ್ ಮತ್ತು ಪರಮೇಶ್ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಪ್ರಕಾಶ್ 9 ಮತ ಪಡೆದು ಅಧ್ಯಕ್ಷರಾದರೇ, ಪ್ರತಿಸ್ಪರ್ಧಿ ಪರಮೇಶ್ 3 ಮತಗಳನ್ನು ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಸಂತೋಷ್ ಕುಮಾರ್ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷ ಪ್ರಕಾಶ್ ಅವರನ್ನು ಅಭಿನಂದಿಸಿ, ಕಾಂಗ್ರೆಸ್ ಮುಖಂಡ ಅಕ್ಕಿ ಮಂಜು ಮಾತನಾಡಿದರು.

ನೂತನ ಅಧ್ಯಕ್ಷ ಪ್ರಕಾಶ್ ಮಾತನಾಡಿ ನನ್ನ ಅಧಿಕಾರವಧಿಯಲ್ಲಿ ಷೇರುದಾರರು ಹಾಗೂ ಹಾಲು ಉತ್ಪಾದಕರ ಶ್ರೇಯೋಭಿವೃದ್ಧಿಗೆ ಹಾಗೂ ಸಂಘದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ದುಡಿಯುತ್ತೇನೆ. ಅಲ್ಲದೇ ಹೈನುಗಾರರಿಗೆ ತಲುಪಬೇಕಾದ ಸೌಲಭ್ಯಗಳನ್ನು ತಲುಪಿಸಿ, ಹೈನುಗಾರರು ಆರ್ಥಿಕವಾಗಿ ಅಭಿವೃದ್ಧಿ ಹೊಂದುವ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಸಂಘದ ಉಪಾಧ್ಯಕ್ಷೆ ಅನುಸೂಯ, ನಿರ್ದೇಶಕರಾದ ಚಂದ್ರೇಗೌಡ, ನಾಗರಾಜು, ಬಸವರಾಜು, ಮತ್ತಿಘಟ್ಟ ಬಸವರಾಜು, ಸುಶೀಲಮ್ಮ, ಜಯಲಕ್ಷ್ಮಿ, ಕರ್ನಾಟಕ ರಕ್ಷಣ ವೇದಿಕೆ ಸ್ವಾಭಿಮಾನಿ ಸೇನೆ ಜಿಲ್ಲಾ ಉಪಾಧ್ಯಕ್ಷ ಕಾಂತರಾಜು, ಗ್ರಾಪಂ ಸದಸ್ಯರಾದ ಹೇಮಂತ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಒಂದನೇ ಪುಟದಿಂದ

ಸರ್ಕಾರ ಘೋಷಣೆ

ನಂಬಿಕೆ ಮತ್ತು ಬದ್ಧತೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸ ಬೇಕೆಂದು ನಾಡಿನ ಲಿಂಗಾಯತ ಮಠಗಳ ಸ್ವಾಮಿಗಳು ನನ್ನ ಬಳಿ ಬಂದು ಮನವಿ ಮಾಡಿದ್ದರು. ಇದು ವೈಯಕ್ತಿಕವಾಗಿ ನನ್ನ ಅಪೇಕ್ಷೆಯೂ ಆಗಿತ್ತು. ಸ್ವಾಮಿಗಳ ಈ ಬೇಡಿಕೆಯನ್ನು ಈಡೇರಿಸಿದ ತೃಪ್ತಿ ನಮ್ಮ ಸರ್ಕಾರಕ್ಕೆ ಇದೆ.ಈ ಎಲ್ಲ ಸ್ವಾಮೀಜಿಗಳ ಆಶೀರ್ವಾದ ನಮ್ಮ ಸರ್ಕಾರದ ಮೇಲೆ ಇರಲಿ ಎಂದು ಇದೇ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ವೈಯಕ್ತಿಕವಾಗಿ ಮತ್ತು ರಾಜಕೀಯವಾಗಿ ಬಸವಣ್ಣ ನನ್ನ ವೈಚಾರಿಕ ಗುರು. ಬಸವ ಜಯಂತಿಯ ದಿನವೇ ನಾನು ಮೊದಲ ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದೆ. ಆ ನಿರ್ಧಾರ ಕಾಕತಾಳೀಯವಲ್ಲ, ಉದ್ದೇಶಪೂರ್ವಕವಾದುದು. ಆ ದಿನ ಬಸವಣ್ಣನವರ ಚಿಂತನೆಗಳ ಹಾದಿಯಲ್ಲಿ ನಡೆಯುತ್ತೇನೆ ಎಂದು ನನ್ನ ಮನಸ್ಸಿನೊಳಗೆ ಪ್ರಮಾಣ ಮಾಡಿದ್ದೆ. ಅದರಂತೆ ಬಸವಣ್ಣನವರ ತತ್ವದ ದಾರಿಯಲ್ಲಿಯೇ ನಮ್ಮ ಸರ್ಕಾರ ಈಗಲೂ ಸಾಗುತ್ತಿದೆ. ಈ ಜಾಗೃತಿ ನಮ್ಮ ಸರ್ಕಾರದ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಇರಬೇಕೆಂಬ ಉದ್ದೇಶದಿಂದಲೇ ರಾಜ್ಯದ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಕಡ್ಡಾಯವಾಗಿ ಹಾಕಬೇಕೆಂದು ಆದೇಶಿಸಿದ್ದೇನೆ.

ಭಾರತದ ಇತಿಹಾಸದಲ್ಲಿ ಹನ್ನೆರಡನೆ ಶತಮಾನ ಅತ್ಯಂತ ಮಹತ್ವಪೂರ್ಣವಾದುದು. ಅಜ್ಞಾನ, ಜಾತೀಯತೆ,ಮತಾಂಧತೆ,ಶೋಷಣೆ, ಮೌಢ್ಯಗಳಿಂದ ಮುಳುಗಿಹೋಗಿದ್ದ ಸಮಾಜವನ್ನು ಮೇಲೆತ್ತಲು ಅರಸ ಬಿಜ್ಜಳನಿಗೆ ಹಣಕಾಸು ಸಚಿವರಾಗಿದ್ದ ಬಸವಣ್ಣನವರು, ರಾಜಿ ಇಲ್ಲದ ಬದ್ಧತೆ, ಪ್ರಶ್ನಾತೀತವಾದ ಜನಪರ ಕಾಳಜಿ ಮೂಲಕ ಮಾಡಿದ ಪ್ರಯತ್ನ–ಪ್ರಯೋಗಗಳು ಪ್ರಪಂಚದ ಎಲ್ಲ ಆಡಳಿತಗಾರರ ಆದರ್ಶವೆಂದು ನಾನು ನಂಬಿದ್ದೇನೆ. ಕಾಯಕ ಮತ್ತು ದಾಸೋಹ ನನ್ನ ಇಷ್ಟದ ಬಸವಣ್ಣನವರ ತತ್ವದ ಮೂಲಧಾತುಗಳು. ಕಾಯಕ ಎಂದರೆ ಉತ್ಪಾದನೆ, ದಾಸೋಹ ಎಂದರೆ ವಿತರಣೆ. ಸಂಪತ್ತಿನ ಉತ್ಪಾದನೆಯ ಶಕ್ತಿ ಎಲ್ಲರದ್ದಾಗಬೇಕು, ಅದರ ವಿತರಣೆ ಸಮನಾಗಿ ನಡೆಯಬೇಕು ಎಂದು ಬಸವಣ್ಣನವರ ಆಶಯವಾಗಿತ್ತು. ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು ಇಷ್ಟೊಂದು ಸರಳವಾಗಿ ವಿಶ್ಲೇಷಿಸುವುದು ಸಾಧ್ಯ ಇಲ್ಲ.

ಅಣ್ಣನ ಅನ್ನದಾಸೋಹದ ಸಂದೇಶಕ್ಕೆ ಅನುಗುಣವಾಗಿ ಮುಖ್ಯಮಂತ್ರಿಯಾದ ಮರುಗಳಿಗೆಯಲ್ಲಿಯೇ ಅನ್ನಭಾಗ್ಯ'ಯೋಜನೆಯನ್ನು ಜಾರಿಗೊಳಿಸಿದೆ. ಈ ಮೂಲಕ ಹಸಿವು ಮುಕ್ತ ಕರ್ನಾಟಕ ನಿರ್ಮಾಣದ ಸಂಕಲ್ಪ ಕೈಗೊಂಡೆ. ವಿದ್ಯಾರ್ಥಿಗಳಿಗೆ ಬಿಸಿಯೂಟ, ಕ್ಷೀರಭಾಗ್ಯದ ಮೂಲಕ ಹಾಲು, ಇಂದಿರಾ ಕ್ಯಾಂಟೀನ್, ಗರ್ಭಿಣಿ ಮತ್ತು ಬಾಣಂತಿಯರಿಗಾಗಿ ಮಾತೃಪೂರ್ಣ ಯೋಜನೆಗಳು ಬಸವಣ್ಣನವರ ಅನ್ನದಾಸೋಹದ ಚಿಂತನೆಯಿಂದಲೇ ಪ್ರೇರಿತವಾದುದು ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಬೆಂಗಳೂರಿಗೆ

ನಿಲ್ದಾಣ ತಲುಪಲಿದ್ದು, ನಂತರ ಬಿಐಇಟಿಸಿ ಕ್ಯಾಂಪಸ್ ಉದ್ಘಾಟಿಸಲಿದ್ದಾರೆ. 1,600 ಕೋಟಿ ರೂ.ಗಳ ಹೂಡಿಕೆಯೊಂದಿಗೆ ನಿರ್ಮಿಸಲಾದ 43 ಎಕರೆ ಕ್ಯಾಂಪಸ್ ಅಮೆರಿಕ ಹೊರಗೆ ಬೋಯಿಂಗ್‌ನ ಅತಿದೊಡ್ಡ ಹೂಡಿಕೆಯಾಗಿದೆ. ಭಾರತದಲ್ಲಿ ಬೋಯಿಂಗ್‌ನ ಹೊಸ ಕ್ಯಾಂಪಸ್ ಭಾರತ ದೇಶದ ಅದ್ಭುತ ಆರಂಭಿಕ, ಖಾಸಗಿ ಮತ್ತು ಸರ್ಕಾರಿ ಪರಿಸರ ವ್ಯವಸ್ಥೆಯ ಪಾಲುದಾರಿಕೆಗೆ ಮೂಲಾಧಾರವಾಗಲಿದೆ ಮತ್ತು ಜಾಗತಿಕ ಏರೋಸ್ಪೇಸ್ ಮತ್ತು ರಕ್ಷಣಾ ಉದ್ಯಮಕ್ಕಾಗಿ ಮುಂದಿನ ಪೀಳಿಗೆಯ ಉತ್ಪನ್ನಗಳು ಮತ್ತು ಸೇವೆಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

ಪ್ರಧಾನಮಂತ್ರಿಯವರು ಬೋಯಿಂಗ್ ಸುಕನ್ಯಾ ಕಾರ್ಯಕ್ರಮವನ್ನು ಪ್ರಾರಂಭಿಸಲಿದ್ದಾರೆ, ಇದು ದೇಶದ ಬೆಳೆಯುತ್ತಿರುವ ವಾಯುಯಾನ ಕ್ಷೇತ್ರಕ್ಕೆ ಭಾರತದಾದ್ಯಂತ ಹೆಚ್ಚಿನ ಹೆಣ್ಣು ಮಕ್ಕಳ ಪ್ರವೇಶವನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ. ಈ ಕಾರ್ಯಕ್ರಮವು ಭಾರತದಾದ್ಯಂತ ಹೆಣ್ಣುಮಕ್ಕಳು ಮತ್ತು ಮಹಿಳೆಯರಿಗೆ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ (STEM) ಕ್ಷೇತ್ರಗಳಲ್ಲಿ ನಿರ್ಣಾಯಕ ಕೌಶಲ್ಯಗಳನ್ನು ಕಲಿಯಲು ಮತ್ತು ವಾಯುಯಾನ ವಲಯದಲ್ಲಿ ಉದ್ಯೋಗಗಳಿಗೆ ತರಬೇತಿ ನೀಡಲು ಅವಕಾಶಗಳನ್ನು ಒದಗಿಸುತ್ತದೆ. ಯುವತಿಯರಿಗಾಗಿ, ಪ್ರೋಗ್ರಾಂ 150 ಯೋಜಿತ ಸ್ಥಳಗಳಲ್ಲಿ STEM ಲ್ಯಾಬ್‌ಗಳನ್ನು ರಚಿಸುತ್ತದೆ, ಇದು STEM ವೃತ್ತಿಜೀವನದಲ್ಲಿ ಆಸಕ್ತಿಯನ್ನು ಹುಟ್ಟುಹಾಕಲು ಸಹಾಯ ಮಾಡುತ್ತದೆ. ಈ ಕಾರ್ಯಕ್ರಮವು ಪೈಲಟ್ ಆಗಲು ತರಬೇತಿ ಪಡೆಯುತ್ತಿರುವ ಮಹಿಳೆಯರಿಗೆ ವಿದ್ಯಾರ್ಥಿವೇತನವನ್ನು ಸಹ ನೀಡುತ್ತದೆ.

10 ಯೂನಿಟ್ ಹೆಚ್ಚುವರಿ ನೀಡಲು ಸಂಪುಟ ತೀರ್ಮಾನ

ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೆ.ಜೆ.ಜಾರ್ಜ್ ಅವರು, ಗೃಹಜ್ಯೋತಿ ಯೋಜನೆಯಡಿ 200 ಯೂನಿಟ್ ವಿದ್ಯುತ್ ಉಚಿತ ಎಂದು ಹೇಳಿದ್ದೆವು. ಇದರನ್ವಯ ವಾರ್ಷಿಕ ಸರಾಸರಿ ಮೇಲೆ ಶೇ.10ರಷ್ಟು ವಿದ್ಯುತ್ ಹೆಚ್ಚು ಬಳಕೆ ಮಾಡಲು ಗ್ರಾಹಕರಿಗೆ ಅವಕಾಶ ನೀಡಲಾಗಿತ್ತು. ಕೇವಲ 20, 30, 40 ಯೂನಿಟ್ ಬಳಕೆ ಮಾಡುವ ಗ್ರಾಹಕರಿಗೆ ಶೇ.10ರಷ್ಟು ಹೆಚ್ಚುವರಿ ಯೂನಿಟ್ ಅಂದರೆ ಕಡಿಮೆ ವಿದ್ಯುತ್ ಸಿಗುತ್ತಿದೆ. ಹೀಗಾಗಿ 48 ಯೂನಿಟ್ ಒಳಗೆ ಉಪಯೋಗ ಮಾಡುವ ಗ್ರಾಹಕರಿಗೆ ಶೇ.10ರಷ್ಟು ವಿದ್ಯುತ್ ಬದಲಾಗಿ 10 ಯೂನಿಟ್ ಹೆಚ್ಚುವರಿ ನೀಡಲು ಕ್ಯಾಬಿನೆಟ್ ಒಪ್ಪಿಗೆ ನೀಡಿದೆ ಎಂದರು. ಮುಂದಿನ ತಿಂಗಳ ಬಿಲ್ ನಿಂದಲೇ ಇದನ್ನು ಜಾರಿ ಮಾಡುತ್ತೇವೆ. ಇದರಿಂದ ರಾಜ್ಯ ಸರ್ಕಾರಕ್ಕೆ ವಾರ್ಷಿಕ 500 ಕೋಟಿ ರೂಪಾಯಿ ಹೆಚ್ಚುವರಿ ಹಣ ಖರ್ಚಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಇನ್ನು ಕರ್ನಾಟಕ ವಿದ್ಯುತ್ ನಿಗಮ ಪಡೆದಿದ್ದ 4450 ಕೋಟಿ ರೂಪಾಯಿ ಸಾಲಕ್ಕೆ ಸರ್ಕಾರಿ ಖಾತರಿ ನೀಡಲು ಸಂಪುಟ ನಿರ್ಧರಿಸಿದೆ. ಹಲವು ವರ್ಷಗಳಿಂದ ಪಡೆದಿದ್ದ ಸಾಲಕ್ಕೆ ಒಳಹರಿವಿನ ಕೊರತೆಯಿದೆ. ಶ್ಯೂರಿಟಿ ನೀಡಬೇಕೆಂದು ಸರ್ಕಾರಕ್ಕೆ ವಿದ್ಯುತ್ ನಿಗಮ ಮನವಿ ಮಾಡಿತ್ತು. ಹೀಗಾಗಿ ಸರ್ಕಾರ ಇದೀಗ 4450 ಕೋಟಿ ರೂ. ಸಾಲಕ್ಕೆ ಖಾತರಿ ನೀಡಲು ತೀರ್ಮಾನಿಸಿದೆ ಎಂದು ಕೆ.ಜೆ.ಜಾರ್ಜ್ ಹೇಳಿದ್ದಾರೆ.

ಮೈಸೂರಿನಲ್ಲಿ ಇಂದಿನಿಂದ ರಣಜಿ ಪಂದ್ಯಾವಳಿ ಆರಂಭ

ಸಚಿನ್ ಪುತ್ರ ಅರ್ಜುನ್ ತೆಂಡೂಲ್ಕರ್ ಸೇರಿ ಹಲವು ಆಟಗಾರರು ಭಾಗಿ



ಮೈಸೂರಿನ ಮಾನಸ ಗಂಗೋತ್ರಿಯ ಎಸ್‌ಡಿಎನ್‌ಆರ್ ಒಡೆಯರ್ ಸ್ಟೇಡಿಯಂನಲ್ಲಿ ಶುಕ್ರವಾರದಿಂದ ಆರಂಭವಾಗುವ ರಣಜಿ ಪಂದ್ಯಾವಳಿ ಮುನ್ನಾ ದಿನವಾದ ಗುರುವಾರ ಕರ್ನಾಟಕ ತಂಡದ ಆಟಗಾರರಾದ ನಿಕಿನ್ ಜೋಸ್, ಮನೀಶ್ ಪಾಂಡೆ, ವೈಶಾಕ್ ವಿಜಯ್ ದೈಹಿಕ ಸಾಮರ್ಥ್ಯ ಅಭ್ಯಾಸದಲ್ಲಿ ತೊಡಗಿದ್ದರು



ಸಚಿನ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್ ಗೋವಾ ತಂಡದ ಪರವಾಗಿ ಆಟವಾಡಲಿದ್ದಾರೆ.

ಮೈಸೂರು, ಜ.18(ಬಿಎಲ್‌ಯು)– ಮೈಸೂರಿನ ಮಾನಸ ಗಂಗೋತ್ರಿಯ ಎಸ್‌ಡಿಎನ್‌ಆರ್ ಒಡೆಯರ್ ಸ್ಟೇಡಿಯಂನಲ್ಲಿ ನಾಳೆ(ಜನವರಿ 19) ಯಿಂದ ರಣಜಿ ಪಂದ್ಯಾವಳಿ ಆರಂಭವಾಗಲಿದ್ದು, ಕರ್ನಾಟಕ ಹಾಗೂ ಗೋವಾ ನಡುವೆ ಸೆಣಸಾಟ ನಡೆಯಲಿದೆ.

ನಾಳೆಯಿಂದ ಜನವರಿ 22ರವರೆಗೆ ನಾಲ್ಕು ದಿನಗಳ ಕಾಲ ರಣಜಿ ಪಂದ್ಯ ನಡೆಯಲಿದ್ದು, ಪ್ರತಿ ದಿನ ಬೆಳಿಗ್ಗೆ 9.30 ಗಂಟೆಗೆ ಪಂದ್ಯ ಆರಂಭವಾಗಲಿದೆ.

ಕರ್ನಾಟಕ ಮತ್ತು ಗೋವಾ ತಂಡದ ಆಟಗಾರರು ಪಂದ್ಯ ಆರಂಭದ ಮುನ್ನಾ ದಿನವಾದ ಇಂದು ಸ್ಟೇಡಿಯಂನಲ್ಲಿ ದೈಹಿಕ ಸಾಮರ್ಥ್ಯ ಅಭ್ಯಾಸದಲ್ಲಿ ತೊಡಗಿದ್ದರು. ವಾರ್ಮ್ ಅಪ್ ಸೇರಿದಂತೆ ಇತರೆ ತಾಲೀಮು ನಡೆಸಿದರು.

ಪಂದ್ಯ ವೀಕ್ಷಣೆಗೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದ್ದು, ಈ ಬಾರಿಯ ಪಂದ್ಯದಲ್ಲಿ ವೀಕ್ಷಕರಿಗೆ ಮಯಾಂಕ್ ಅಗರವಾಲ್, ಮನಿಷ್ ಪಾಂಡೆ, ದೇವದತ್ ಪಡಿಕಲ್ ನೋಡುವ ಅವಕಾಶ ಸಿಗಲಿದೆ. ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್ ಗೋವಾ ತಂಡದಲ್ಲಿ ಆಡಲಿದ್ದಾರೆ. ಮೈಸೂರಿನ ಕ್ರಿಕೆಟ್ ಪ್ರೇಮಿಗಳಿಗೆ ಈ ಆಟಗಾರರನ್ನು ನೋಡುವ ಸದಾವಕಾಶ ಸಿಗಲಿದೆ.

ಗುಜರಾತ್‌ನ ಅಹಮದಾಬಾದ್‌ನ ನರೇಂದ್ರ ಮೋದಿ ಅಂತಾರಾಷ್ಟ್ರೀಯ ಸ್ಟೇಡಿಯಂನಲ್ಲಿ ನಡೆದ ಎಲೈಟ್ ಗ್ರೂಪ್ ಸಿ ನಲ್ಲಿ ಗುಜರಾತ್ ವಿರುದ್ಧ ಸೋಲು ಕಂಡಿದ್ದ ಕರ್ನಾಟಕ, ಈಗ ತವರು ನೆಲದಲ್ಲಿ ತನ್ನ ಸಾಮರ್ಥ್ಯ ಪ್ರದರ್ಶಿಸಿ ಮತ್ತೆ ಜಯದ ಹಾದಿಯಲ್ಲಿ ಮುನ್ನಡೆಯುವ ಗುರಿ ಹೊಂದಿದೆ. ನಾಳೆಯಿಂದ ನಡೆಯುವ ರಣಜಿ ಪಂದ್ಯದ ಎಲೈಟ್ ಗ್ರೂಪ್ ಸಿ ನಲ್ಲಿ ಕರ್ನಾಟಕ ಹಾಗೂ ಗೋವಾ ಮುಖಾಮುಖಿಯಾಗಲಿವೆ. ಎಲೈಟ್ ಗ್ರೂಪ್ ಸಿ ನಲ್ಲಿ ಕರ್ನಾಟಕ 3ನೇ ಸ್ಥಾನದಲ್ಲಿದ್ದರೆ, ಗೋವಾ 5ನೇ ಸ್ಥಾನದಲ್ಲಿದೆ.

ಮೈಸೂರಿನಲ್ಲಿ ಆಹ್ವಾನಿತ ಕಪ್ ಹಾಕಿ ಪಂದ್ಯಾವಳಿ ಆರಂಭ



ಮೈಸೂರು ವಿಶ್ವವಿದ್ಯಾನಿಲಯದ ಹಾಕಿ ಮೈದಾನದಲ್ಲಿ ಹಾಕಿ ಮೈಸೂರು ಆಯೋಜಿಸಿರುವ ಆಹ್ವಾನಿತ ಹಾಕಿ ಪಂದ್ಯಾವಳಿಗೆ ಮಾಂಡೋವಿ ಮೋಟಾರ್ಸ್ ಉಪಾಧ್ಯಕ್ಷ ಪಿ.ಎಂ.ಗಣಪತಿ ಚಾಲನೆ ನೀಡಿದರು.

ಮೈಸೂರು, ಜ.18(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ ಹಾಕಿ ಮೈದಾನದಲ್ಲಿ ಇಂದಿನಿಂದ ಹಾಕಿ ಮೈಸೂರು ಆಯೋಜಿಸಿದ್ದ ಆಹ್ವಾನಿತ ಕಪ್ ಹಾಕಿ ಪಂದ್ಯಾವಳಿ ಆರಂಭವಾಗಿದೆ.

ಇಂದಿನಿಂದ ಜನವರಿ 21ರವರೆಗೆ ನಾಲ್ಕು ದಿನಗಳ ಕಾಲ ನಡೆಯುವ ಹಾಕಿ ಪಂದ್ಯಕ್ಕೆ ಮಾಂಡೋವಿ ಮೋಟಾರ್ಸ್ ಉಪಾಧ್ಯಕ್ಷ ಪಿ.ಎಂ.ಗಣಪತಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಕಾರ್ಪೊರೇಟರ್ ಎಂ.ಯು.ಸುಬ್ಬಯ್ಯ, ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಉಪನಿರ್ದೇಶಕ ಡಾ.ವೆಂಕಟೇಶ್, ಮಾಜಿ ಮೇಯರ್ ಎಂ.ಶಿವಕುಮಾರ್, ಹಾಕಿ ಮೈಸೂರಿನ ಕೆಬಿ. ದಿಲೀಪ್, ಉಪಾಧ್ಯಕ್ಷ ಕೆ.ಎನ್.ಮುದ್ದಯ್ಯ, ಕಾರ್ಯದರ್ಶಿ ಸಿ.ಟಿ.ಸತೀಶ್ ಹಾಜರಿದ್ದರು.

ನಾಲ್ಕು ದಿನಗಳ ಪಂದ್ಯದಲ್ಲಿ 12 ತಂಡಗಳು ಸೆಣಸಾಟ ನಡೆಸಲಿದ್ದು, ಇಂದಿನ ಆರಂಭಿಕ ಪಂದ್ಯದಲ್ಲಿ ಗದಗ್ ಹಾಗೂ ಎಜಿಒಆರ್‌ಸಿ ತಂಡಗಳ ನಡುವೆ ಪೈಪೋಟಿ ಏರ್ಪಟ್ಟಿತ್ತು. ಈ ವೇಳೆ ಎಜಿಒಆರ್‌ಸಿ ತಂಡ 3–0 ಯಿಂದ ಗೆಲುವು ಸಾಧಿಸಿತು.

ತರುವಾಯ ನಡೆದ ಪಂದ್ಯದಲ್ಲಿ ಡಿವೈಇಎಸ್ ಬೆಂಗಳೂರು ಹಾಗೂ ಧಾರವಾಡ ತಂಡಗಳು ಸೆಣಸಾಟ ನಡೆಸಿ, ಧಾರವಾಡ ವಿರುದ್ಧ ಡಿವೈಇಸಿ ತಂಡ 12–0ಯಿಂದ ರೋಚಕ ಗೆಲುವು ಸಾಧಿಸಿತು. ಕಳೆದ ಬಾರಿ ಗೆಲುವು ಸಾಧಿಸಿದ ಕೊಡವ ಹಾಕಿ ಅಕಾಡೆಮಿ (ಕುಪ್ಪಂಡ ಕೈಕೇರಿ ನೆಲ್ಲ ಮಕ್ಕಡ) ಪಂದ್ಯದಲ್ಲಿ ಅಪ್ಪಚ್ಚೆಟ್ಟೋಳಂಡ ಕಪ್ ಪಡೆದ ತಂಡಗಳು ಈ ಬಾರಿಯ ಪಂದ್ಯದಲ್ಲಿ ಭಾಗವಹಿಸಿವೆ.

ನಾಳೆ ಕೃತಕ ಕಾಲು, ಕೈ ವಿತರಣೆ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಲಯನ್ ಹೇಮಂತ್‌ಕುಮಾರ್ ಬನ್ಸಾಲಿ ಮಾತನಾಡಿದರು. ಚಿತ್ರದಲ್ಲಿ ಎಂ.ಸಿ. ಬನ್ಸಾಲಿ, ಸುರೇಶ್ ಗೋಲ್ಡ್, ವಿಜಯಕುಮಾರ್, ದಿನೇಶ್, ರವಿ ಅವರನ್ನು ಕಾಣಬಹುದು

ಮೈಸೂರು, ಜ.18(ಜಿಎ)–ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317 ಜಿ ವತಿಯಿಂದ ಜ.20 ರಂದು ಉಚಿತ ಕೃತಕ ಕಾಲು, ಕೈ ವಿತರಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಾಂತೀಯ ಅಧ್ಯಕ್ಷ ಲಯನ್ ಹೇಮಂತ್‌ಕುಮಾರ್ ಬನ್ಸಾಲಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 10.30ಕ್ಕೆ ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ಮಾಡ್ಯುಲರ್ ಕೃತಕ ಕೈ ಮತ್ತು ಕಾಲಿನ ಅಂಗಗಳನ್ನು ಸುಮಾರು 350 ಮಂದಿ ವಿಶೇಷಚೇತನರಿಗೆ ವಿತರಿಸಲಾಗುವುದು. ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ನಂತರ ಜ.21ರಂದು ಸಂಜೆ 4ಕ್ಕೆ ನಗರದ ಜೆಪಿ ನಗರದಲ್ಲಿರುವ ರಾಯಲ್ ಕನ್ವೆನ್ಷನ್ ಹಾಲ್‌ನಲ್ಲಿ ಪ್ರಾಂತ್ಯ ಐದಕ್ಕೆ ಸಂಬಂಧಿಸಿದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ವಿಶೇಷ ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮ ಕುರಿತು ಡಾ. ರವೀಶ್ ಮಾತನಾಡುವರು, ಉದ್ಯಮಿ ಸುಧಾಕರ ಶೆಟ್ಟಿ, ರೈಲ್ವೆ ಡಿಆರ್‌ಎಂ ಶಿಲ್ಪಾ ಅಗರ್ವಾಲ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಂ.ಸಿ. ಬನ್ಸಾಲಿ, ಸುರೇಶ್ ಗೋಲ್ಡ್, ವಿಜಯಕುಮಾರ್, ದಿನೇಶ್ ಹಾಗೂ ರವಿ ಉಪಸ್ಥಿತರಿದ್ದರು.

ವಿಶ್ರಾಂತ ಬಿಷಪ್ ಕೆ.ಎ.ವಿಲಿಯಂ ಕೊಲೆ ಸಂಚಿನ ಆಡಿಯೋ ನಕಲಿ

ಫಾದರ್ ಜ್ಞಾನಪ್ರಕಾಶ್ ಸ್ಪಷ್ಟನೆ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸ್ಟೀಫನ್ ಸುಜೀತ್ ಮಾತನಾಡಿದರು

ಮೈಸೂರು,ಜ.18(ಜಿಎ)–ಮೈಸೂರಿನ ವಿಶ್ರಾಂತ ಬಿಷಪ್ ಕೆ.ಎ.ವಿಲಿಯಂ ಅವರ ಕೊಲೆ ಸಂಚಿನ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಆಡಿಯೋ ನಕಲಿ ಎಂದು ಫಾದರ್ ಜ್ಞಾನಪ್ರಕಾಶ್ ಸ್ಪಷ್ಟಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಗರದ ಬಿಷಪ್ ಹೌಸ್‌ನಲ್ಲಿ ಕೆಲವರು ನಕಲಿ ವಿಡಿಯೋ, ಆಡಿಯೋ ಆಧರಿಸಿ ಗಲಾಟೆ ಮಾಡಿದ್ದರು. ಆದರೆ, ಆ ಆಡಿಯೋದಲ್ಲಿರುವ ವಿಷಯಕ್ಕೂ ನನಗೂ, ಫಾದರ್ ರೋಹನ್, ಫಾದರ್ ಅಂತೋಣಿರಾಜ್ ಮತ್ತಿತರರಿಗೂ ಸಂಬಂಧವೇ ಇಲ್ಲ. ಈಗಾಗಲೇ ಈ ಸಂಬಂಧ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದ್ದು, ಪೊಲೀಸರು 15 ದಿನ ನಂತರ ತಿಳಿಯಲಿದೆ ಎಂದು ತಿಳಿಸಿದ್ದಾರೆ ಎಂದರು.

ಈಗಾಗಲೇ ಬಿಷಪ್ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕೆ.ಎಂ. ವಿಲಿಯಂ ಅವರು ಬಳಿಕ ಜನರ ಅನುಕಂಪ ಗಿಟ್ಟಿಸಿಕೊಳ್ಳಲು ನಡೆಸಿದ ಸಂಚು ಇದಾಗಿದೆ. ಪೋಪ್ ಅವರ ಆದೇಶದಂತೆಯೇ ಕೆ.ಎ. ವಿಲಿಯಂ ಬಿಷಪ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ದಂತೆ ಪೋಪ್ ಅವರು ಕಳುಹಿಸಿದ್ದ ಮೂವರು ಬಿಷಪ್‌ಗಳ ವರದಿ ಆಧರಿಸಿ ನೀಡಿದ ಸೂಚನೆ ಅನ್ವಯ ಬಿಷಪ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಫಾದರ್ ರೋಹನ್, ಫಾದರ್ ಅಂತೋಣಿ ರಾಜ್, ಜಾನ್ಸ್ ಬೆನ್ನ, ಮರಿಯ ಫ್ರಾನ್ಸಿಸ್ ಎಲ್ವಿನ್, ಆಂಬ್ರುಸ್ ಜಾರ್ಜ್, ಮೈಸೂರು ಡಿವಿಷನ್ ಕ್ಯಾಥೋಲಿಕ್ ಕ್ರಿಶ್ಚನ್ ಅಸೋಸಿಯೇಷನ್ ಅಧ್ಯಕ್ಷ ಸ್ಟೀಫನ್ ಸುಜೀತ್ ಉಪಸ್ಥಿತರಿದ್ದರು.

ಇರಾನ್ ಮೇಲೆ ಪಾಕ್ ವೈಮಾನಿಕ ದಾಳಿ; 4 ಮಕ್ಕಳು, ಮೂವರು ಮಹಿಳೆಯರ ಸಾವು

ಬಲೂಚಿಸ್ತಾನ, ಜ.18– ಇರಾನ್ ಹಾಗೂ ಪಾಕಿಸ್ತಾನ ನಡುವೆ ಉದ್ವಿಗ್ನ ಪರಿಸ್ಥಿತಿವೇರ್ಪಟ್ಟಿದ್ದು, ಗುರುವಾರ ಬೆಳಗ್ಗೆ ಇರಾನ್ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯಲ್ಲಿ ನಾಲ್ವರು ಮಕ್ಕಳು, ಮೂವರು ಮಹಿಳೆಯರು ಸಾವನ್ನಪ್ಪಿದ್ದಾರೆ. ಈ ಕುರಿತು ಸಿಸ್ತಾನ್ ಮತ್ತು ಬಲೂಚಿಸ್ತಾನ್ ಪ್ರಾಂತ್ಯದ ಡೆಪ್ಯುಟಿ ಗವರ್ನರ್ ಅಲಿ ರೆಜಾ ಮರ್ಹಮತಿ ಅವರು ಸರ್ಕಾರಿ ಸ್ವಾಮ್ಯದ ಟಿವಿ ಸಂದರ್ಶನದಲ್ಲಿ ಮಾಹಿತಿ ನೀಡಿದ್ದಾರೆ.

ಮಂಗಳವಾರ ರಾತ್ರಿ ಇರಾನ್, ಪಾಕಿಸ್ತಾನದ ಮೇಲೆ ದಾಳಿ ಪ್ರಾರಂಭಿಸಿದ ನಂತರ ಗುರುವಾರ ಮುಂಜಾನೆ ವೈಮಾನಿಕ ದಾಳಿ ನಡೆದಿದ್ದು, ಅಣ್ವಸ್ತ್ರ–ಸಜ್ಜಿತ ಇಸ್ಲಾಮಾಬಾದ್ ಮತ್ತು ಟೆಹ್ರಾನ್ ನಡುವೆ ಉದ್ವಿಗ್ನತೆಯನ್ನು ಹೆಚ್ಚಿಸಿವೆ. ಗಾಜಾ ಪಟ್ಟಿಯಲ್ಲಿ ಹಮಾಸ್‌ನ ಮೇಲೆ ಇಸ್ರೇಲ್ ಯುದ್ಧದ ನಡುವೆ ಮಧ್ಯಪ್ರಾಚ್ಯದಾದ್ಯಂತ ಉದ್ವಿಗ್ನತೆ ಹೆಚ್ಚಾಗಿರುವಂತೆಯೇ ಈಗ ಪಾಕಿಸ್ತಾನ ಹಾಗೂ ಇರಾನ್ ನಡುವಿನ ಯುದ್ಧದ ಭೀತಿ ಆವರಿಸಿದೆ.

ಪಾಕಿಸ್ತಾನದ ವಾಯುಪಡೆಯು ಇರಾನ್ ನೊಳಗಿನ ಬಂಡುಕೋರರ ಮೇಲೆ ಪ್ರತೀಕಾರದ ದಾಳಿ ನಡೆಸಿದೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ತಿಳಿಸಿದೆ. ನೈರುತ್ಯ ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಇರಾನ್ ಮಂಗಳವಾರ ನಡೆಸಿದ ದಾಳಿಯಲ್ಲಿ ಇಬ್ಬರು ಮಕ್ಕಳು ಸಾವನ್ನಪ್ಪಿದ್ದರು. ತದನಂತರ ಪಾಕಿಸ್ತಾನ ಪ್ರತಿದಾಳಿ ನಡೆಸಿದೆ. ಇರಾನ್ ಮತ್ತು ಪಾಕಿಸ್ತಾನದ ಗಡಿಗೆ ಸಮೀಪವಿರುವ ಸರವನ್ ನಗರದ ಬಳಿ ಹಲವಾರು ಸ್ಫೋಟಗಳು ಕೇಳಿಬಂದಿವೆ ಎಂದು ಇರಾನ್‌ನ ರಾಜ್ಯ ಮಾಧ್ಯಮ ಹೇಳಿದೆ.



ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಮೈಸೂರಿನ ಪುರಭವನದ ಮುಂಭಾಗ ನಡೆಸುತ್ತಿರುವ ಧರಣಿ 73ನೇ ದಿನ ಪೂರೈಸಿದೆ. ಗುರುವಾರ ಗ್ರಾಪಂ ಸದಸ್ಯರಾದ ಲಕ್ಷ್ಮಿ, ಕಾಂತಮ್ಮ, ರೇಖಾ, ಪದ್ಮಾ, ನಳಿನಿ, ಮಂಜುಳಾ, ನಾಗಮ್ಮ, ವೆಂಕಟಮ್ಮ, ಸಿದ್ದಮ್ಮ, ಶೋಭಾ, ಗಾಯಿತ್ರಿ, ಸಮಿತಿ ಸದಸ್ಯರಾದ ಮಂಜುಳಾ, ಪುಷ್ಪವತಿ, ಭಾಗ್ಯಮ್ಮ, ಆರ್.ಮಂಜುಳಾ, ಸಿಂಧುವಳ್ಳಿ ಶಿವಕುಮಾರ್, ಎಸ್.ಎಸ್.ಶ್ರೀನಿವಾಸ್, ಬೋಗಾದಿ ಸಿದ್ದೇಗೌಡ, ಪ್ರಮೋದ್, ಅನಿಲ್‌ಕುಮಾರ್, ಸುರೇಶ್‌ಗೌಡ, ಆಟೋ ಮಹದೇವ್, ತೇಜಸ್ ಲೋಕೇಶ್‌ಗೌಡ, ಪ್ರಭಾಕರ್, ಆರ್.ಶ್ರೀನಿವಾಸ್, ರಾಜ್‌ಕುಮಾರ್ ಸಂಘದ ಮಹದೇವಸ್ವಾಮಿ, ರಘು ಆಚಾರ್, ಹನುಮಂತೇಗೌಡ, ವಿದ್ಯಾರ್ಥಿ ಕ್ರಿಯಾ ಸಮಿತಿಯ ಸಂಜಯ್, ವಿಷ್ಣು, ಸಹನ, ಕಿರಣ್, ಮನೋಜ್, ಜೀವನ್, ರಂಜಿತ, ಅಭಿಷೇಕ್ ಮತ್ತಿತರರು ಪಾಲ್ಗೊಂಡಿದ್ದರು.

ಜ.20, 21ಕ್ಕೆ ನಾಟಕ ಪ್ರದರ್ಶನ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅಂತರಂಗ ಬಹಿರಂಗ ಸಂಸ್ಥೆ ವತಿಯಿಂದ ನಾಟಕಗಳ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ಜ.18(ಜಿಎ)–ಬೆಂಗಳೂರಿನ ಅಂತರಂಗ ಬಹಿರಂಗ ಸಂಸ್ಥೆ ವತಿಯಿಂದ ಜ.20 ಮತ್ತು 21 ರಂದು ಸಂಜೆ 7ಕ್ಕೆ ನಗರದ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಎರಡು ನಾಟಕ ಪ್ರದರ್ಶಿಸಲಾಗುತ್ತಿದೆ ಎಂದು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.20 ರಂದು ನಾಗವೇಣಿ ರಂಗನ್ ರಚಿಸಿ ಬಾಷ್ ರಾಘವೇಂದ್ರ ನಿರ್ದೇಶಿಸಿರುವ 'ಹಿಂಗ್ ಮಾಡಿದ್ರೆ ಹೆಂಗೆ' ನಾಟಕ ಹಾಗೂ ಜ.21 ರಂದು ಭೀಷ್ಮ ರಾಮಯ್ಯ ರಚಿಸಿ ಬಾಷ್ ರಾಘವೇಂದ್ರ ನಿರ್ದೇಶಿಸಿರುವ 'ಮಿಸ್ಟರ್ ರಾವ್ ಅಂಡ್ ಅಸೋಸಿಯೇಟ್ಸ್' ನಾಟಕ ಪ್ರದರ್ಶನಗೊಳ್ಳಲಿವೆ. ಎರಡು ಹಾಸ್ಯ ನಾಟಕಗಳಾಗಿದ್ದು, ಪ್ರೇಕ್ಷಕರು ನಗೆಗಡಲಿನಲ್ಲಿ ತೇಲಿ ಮನೆಗೆ ಹೋಗುವಷ್ಟು ಹಾಸ್ಯಮಯವಾಗಿವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸುರೇಶ್‌ಬಾಬು, ಬಾಷ್ ರಾಘವೇಂದ್ರ, ಭೀಷ್ಮ ರಾಮಯ್ಯ ಉಪಸ್ಥಿತರಿದ್ದರು.

ಹಾಲಿ ಆಡಳಿತ ಮಂಡಳಿ ಪುನರಾಯ್ಕೆಗೆ ಮನವಿ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎನ್.ಶ್ರೀನಿವಾಸ್ ಮಾತನಾಡಿದರು

ಮೈಸೂರು,ಜ.18(ಜಿಎ)–ದಿ. ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಚುನಾವಣೆಯಲ್ಲಿ ಹಾಲಿ ನಿರ್ದೇಶಕ ಮಂಡಳಿಯನ್ನು ಪುನರಾಯ್ಕೆ ಮಾಡುವಂತೆ ಹಾಲಿ ಅಧ್ಯಕ್ಷ ಎನ್.ಶ್ರೀನಿವಾಸ್ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ 101ವರ್ಷಗಳ ಪ್ರತಿಷ್ಠಿತ ದಿ. ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ 2024–29ನೇ ಸಾಲಿನ ನಿರ್ದೇಶಕರ ಚುನಾವಣೆ ಜ.21ರಂದು ಜೆ.ಎಲ್.ಬಿ ರಸ್ತೆಯ ಹಾರ್ಡ್ವಿಕ್ ಶಾಲೆಯಲ್ಲಿ ಬೆಳಗ್ಗೆ 9ರಿಂದ ಮಧ್ಯಾಹ್ನ 4ರವರೆಗೆ ನಡೆಯಲಿದೆ ಎಂದರು.

ಹಾಲಿ ತಂಡ 2023–24 ನೇ ಸಾಲಿನ ಅವಧಿಯಲ್ಲಿ ಬ್ಯಾಂಕಿನ ಇತಿಹಾಸದಲ್ಲೇ ಅತ್ಯಧಿಕ ನಿವ್ವಳ ಲಾಭ 71,67,249,55 ರೂ.ಗಳನ್ನು ಗಳಿಸಿದ್ದು, ಬ್ಯಾಂಕಿನ ಶತಮಾನೋತ್ಸವ ಯಶಸ್ವಿಯಾಗಿ ನೆರವೇರಿದೆ. ಅದರ ನೆನಪಾಗಿ ಸದಸ್ಯರಿಗೆ 4 ತಿಂಗಳಿಂದಲೂ ಟ್ರಾವಲಿಂಗ್ ಬ್ಯಾಗ್ ನೀಡಲಾಗುತ್ತಿದೆ, ಬ್ಯಾಂಕಿನಲ್ಲಿ ವಿವಿಧ ಸೌಕರ್ಯಗಳನ್ನು ಕಲ್ಪಿಸಲಾಗಿದ್ದು, ಬ್ಯಾಂಕಿನ ಠೇವಣಿಗಳು ಪ್ರತಿ ತಿಂಗಳು ಹೆಚ್ಚಳವಾಗಿ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬ್ಯಾಂಕ್ ಉಪಾಧ್ಯಕ್ಷರಾದ ಆರ್.ಅನಂತರಾಮು, ನಿರ್ದೇಶಕರಾದ ಪ್ರೊ.ಪಿ.ವಿ.ನರಹರಿ, ಕೆ.ಜಿ. ಸತೀಶ್, ಎಂ.ಎ.ಹೇಮಲತಾ, ಟಿ.ಎಸ್. ರವಿಶಂಕರ್, ಎಸ್.ಎನ್.ಜಗದೀಶ್, ಡಾ.ಕೆ.ವಿ.ಲಕ್ಷ್ಮಿ ದೇವಿ, ಡಾ.ಸುಜಾತ ಎಸ್.ರಾವ್, ಸಿ.ಕಮಲಮ್ಮ, ಎಂ.ಎಸ್. ರಾಜರಾಂ, ಅಭ್ಯರ್ಥಿಯಾದ ಎಂ. ಸೋಮಣ್ಣ, ಅವಿರೋಧವಾಗಿ ಆಯ್ಕೆಯಾದ ನಿರ್ದೇಶಕರಾದ ಸುಜಾತ ವೆಂಕಟರಾಜು, ವರಲಕ್ಷ್ಮಿ ಉಪಸ್ಥಿತರಿದ್ದರು.

'ಜಸ್ಟ್‌ಪಾಸ್' ಚಿತ್ರಕ್ಕೆ ಕಾಟೇರನ ಬಲ



'ಜಸ್ಟ್‌ಪಾಸ್' ಚಿತ್ರದಲ್ಲಿ ಶ್ರೀ, ಪ್ರಣತಿ

ರಾಯ್ಸ್ ಎಂಟರ್‌ಟೈನ್ಮೆಂಟ್ ಬ್ಯಾನರ್ ಅಡಿಯಲ್ಲಿ ಕೆ.ವಿ.ಶಶಿಧರ್ ಅವರು ನಿರ್ಮಿಸಿರುವ, ಕೆ.ಎಂ.ರಘು ಆಕ್ಷನ್‌ಕಟ್ ಹೇಳಿರುವ ಚಿತ್ರ ಜಸ್ಟ್‌ಪಾಸ್. ಜಸ್ಟ್ ಪಾಸ್ ಆದವರಿಗಾಗೇ ಇರುವ ಕಾಲೇಜ್‌ನ ವಿದ್ಯಾರ್ಥಿಗಳ ಸುತ್ತ ನಡೆಯುವ ಕಥಾಹಂದರ ಇರುವ ಈ ಚಿತ್ರದ ಟೀಸರ್ ಈಗಾಗಲೇ ರಿಲೀಸಾಗಿ ಸದ್ದು ಮಾಡುತ್ತಿರುವಾಗಲೇ ಚಿತ್ರತಂಡ ಮತ್ತೊಂದು ಸುದ್ದಿಯನ್ನು ಹಂಚಿಕೊಂಡಿದೆ. ಚಾಲೆಂಜಿಂಗ್‌ಸ್ಟಾರ್ ದರ್ಶನ್ ಅವರು ಯಾವಾಗಲೂ ಹೊಸಬರ ತಂಡಗಳಿಗೆ ಬೆನ್ನೆಲುಬಾಗಿ ನಿಲ್ಲುವುದು ಗೊತ್ತೇ ಇದೆ. ಅದೇ ರೀತಿ ಈಗ ಜಸ್ಟ್‌ಪಾಸ್ ತಂಡಕ್ಕೂ ಬೆಂಬಲವಾಗಿ ನಿಂತಿದ್ದಾರೆ. ಈ ಚಿತ್ರದ ಮೊದಲ ವಿಡಿಯೋ ಹಾಡನ್ನು ಶುಕ್ರವಾರ ನಟ ದರ್ಶನ್ ಬಿಡುಗಡೆ ಮಾಡಲಿದ್ದಾರೆ.

ಸಿಂಗಾರ ಸಿರಿಯೇ ಖ್ಯಾತಿಯ ಪ್ರಮೋದ್ ಮರವಂತೆ ಅವರು ಈ ಹಾಡಿನ ಸಾಹಿತ್ಯ ಬರೆದಿದ್ದು, ಭೂಷಣ್ ಕೋರಿಯೋಗ್ರಫಿ ಮಾಡಿದ್ದಾರೆ. 12ನೇ ವಯಸ್ಸಿಗೆ ಕೀಬೋರ್ಡ್ ನುಡಿಸುವ ಮೂಲಕ ಹಲವಾರು ಸಂಗೀತ ನಿರ್ದೇಶಕರ ಜೊತೆ ಕೆಲಸ ಮಾಡಿರುವ ಹರ್ಷವರ್ಧನ್ ರಾಜ್ ಈ ಚಿತ್ರಕ್ಕೆ ಮ್ಯಾಜಿಕಲ್ ಮ್ಯೂಸಿಕ್ ಮಾಡಿದ್ದಾರೆ. ಸುಜಯ್‌ಕುಮಾರ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಜಸ್ಟ್‌ಪಾಸ್ ಚಿತ್ರದಲ್ಲಿ ಶ್ರೀ, ಪ್ರಣತಿ ಹಾಗೂ ಹೊಸ ಯುವಕರ ಜೊತೆಗೆ ಹಿರಿಯನಟ ರಂಗಾಯಣ ರಘು ಅವರು ಕಾಲೇಜಿನ ಪ್ರಿನ್ಸಿಪಾಲರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ, ಸಾಧುಕೋಕಿಲ, ಸುಚೇಂದ್ರಪ್ರಸಾದ್, ಪ್ರಕಾಶ್ ತುಮ್ಮಿನಾಡು, ದೀಪಕ್ ರೈ, ಗೋವಿಂದೇಗೌಡ, ದಾನಪ್ಪ ಹೀಗೆ ಕಲಾವಿದರ ದಂಡೇ ಜಸ್ಟ್‌ಪಾಸ್ ಚಿತ್ರದಲ್ಲಿ ನಟಿಸಿದೆ.

ಮಾರ್ಕೆಟ್ ಸೆಟ್‌ನಲ್ಲಿ 'ಚೀತಾ'

ನಟ ಪ್ರಜ್ವಲ್ ದೇವರಾಜ್ ಮಾರ್ಕೆಟ್‌ನಲ್ಲಿ ಬೆಳೆದ ಹುಡುಗನಾಗಿ ಕಾಣಿಸಿಕೊಂಡಿರುವ ಚಿತ್ರ 'ಚೀತಾ'. ಪ್ರತಿಭಾ ನರೇಶ್ ನಿರ್ಮಾಣದ ಈ ಚಿತ್ರಕ್ಕೆ ನೃತ್ಯ ನಿರ್ದೇಶಕ ಕಲೈಕುಮಾರ್ ಆಕ್ಷನ್‌ಕಟ್ ಹೇಳಿದ್ದಾರೆ. ಪ್ರಜ್ವಲ್ ದೇವರಾಜ್ ಜೊತೆ ಮೇಘಾಶೆಟ್ಟಿ ನಟಿಸಿರುವ ಈ ಚಿತ್ರಕ್ಕೆ ಹೆಚ್.ಎಂ.ಟಿ.ಫ್ಯಾಕ್ಟರಿಯಲ್ಲಿ ಹಾಕಿದ್ದ ಮಾರ್ಕೆಟ್ ಸೆಟ್‌ನಲ್ಲಿ ಶೂಟಿಂಗ್ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ನಿರ್ದೇಶಕ ಕಲೈಕುಮಾರ್, ನಾನು ನೃತ್ಯ ನಿರ್ದೇಶಕನಾಗಿ ಮೊದಲ ಬಾರಿಗೆ ಕೆಲಸ ಮಾಡಿದ್ದು ಪ್ರಜ್ವಲ್ ಜೊತೆ. ಈಗ ನನ್ನ ಮೊದಲ ಚಿತ್ರಕ್ಕೂ ಅವರೇ ನಾಯಕರಾಗಿದ್ದಾರೆ, ಬಹುತೇಕ ಮಾರ್ಕೆಟ್‌ನಲ್ಲೇ ನಡೆಯುವ ಕಥೆಯಿದು. ಈಗಾಗಲೇ ಶೇ.60ರಷ್ಟು ಚಿತ್ರೀಕರಣ ಮುಗಿದಿದೆ. ಮಾರ್ಕೆಟ್‌ಗೆ ತರಕಾರಿ ಹೇಗೆ ಬರುತ್ತೆ, ಅದು ಎಲ್ಲಿಂದ ಬಂದು, ಎಲ್ಲೆಲ್ಲಿ ತಲುಪುತ್ತೆ ಎಂಬುದರ ಮೇಲೆ ಕಥೆ ಸಾಗುತ್ತದೆ. ಲವ್, ಸೆಂಟಿಮೆಂಟ್, ಆಕ್ಷನ್ ಹೀಗೆ ಎಲ್ಲಾ ರೀತಿಯ ಎಲಿಮೆಂಟ್ ಚಿತ್ರದಲ್ಲಿದೆ, ಜೊತೆಗೆ ಈಗಾಗಲೇ 40 ದಿನಗಳ ಚಿತ್ರೀಕರಣ ನಡೆದಿದ್ದು, ಒಂದು ತಿಂಗಳ ಶೂಟಿಂಗ್ ಬಾಕಿಯಿದೆ, ಇಲ್ಲಿ ಮಟನ್ ಮಾರ್ಕೆಟ್. ಹಳೇ ಮಾರ್ಕೆಟ್, ಮುಲ್ಲಾ ಅಡ್ಡ ಹೀಗೆ 5–6 ಥರದ ಸೆಟ್‌ಗಳನ್ನು ಹಾಕಿದ್ದೇವೆ. ಮಾರುಕಟ್ಟೆಯಲ್ಲಿ ನಡೆಯುವ ಅವ್ಯವಹಾರಗಳ ವಿರುದ್ಧ ಹೋರಾಡುವ ಹುಡುಗನಾಗಿ ಪ್ರಜ್ವಲ್ ಕಾಣಿಸಿಕೊಂಡಿದ್ದಾರೆ.

ಕಲಾ ನಿರ್ದೇಶಕ ಶಿವಕುಮಾರ್ 2 ತಿಂಗಳು ತೆಗೆದುಕೊಂಡು ಈ ಸೆಟ್ ಹಾಕಿದ್ದಾರೆ. ನೃತ್ಯ ನಿರ್ದೇಶಕ ಚಿನ್ನಿಪ್ರಕಾಶ್ ಅವರು ನಮ್ಮ ಚಿತ್ರದಲ್ಲಿ ಪ್ರಮುಖ ಪಾತ್ರ ಮಾಡುತ್ತಿದ್ದಾರೆ. ಗುರುಜಗ್ಗೇಶ್, ಶೃತಿ ಹರಿಹರನ್, ರಂಗಾಯಣ ರಘು, ಶಿವರಾಜ್ ಕೆ.ಆರ್.ಪೇಟೆ, ಸಿದ್ಲಿಂಗು ಶ್ರೀಧರ್ ಹೀಗೆ ನೂರಾರು ಕಲಾವಿದರು ಚಿತ್ರದಲ್ಲಿದ್ದಾರೆ ಎಂದರು.

ನಾಯಕ ಪ್ರಜ್ವಲ್ ದೇವರಾಜ್ ಮಾತನಾಡಿ, ಮಾರ್ಕೆಟ್‌ನಲ್ಲಿ ಎಲ್ಲಾ ಕೆಲಸಗಳು ವೇಗವಾಗಿ ನಡೆಯುತ್ತಿರುತ್ತದೆ. ಆದರೆ ಆ ಮಾರ್ಕೆಟ್‌ನಲ್ಲಿ ಎಲ್ಲರಿಗೂ ಗೊತ್ತಿರುವ ಒಂದು ಸಮಸ್ಯೆಯಿದ್ದು, ಅದನ್ನು ಯಾರೂ ಸಹ ಗಮನಿಸಿರಲ್ಲ, ಅದು ಗೊತ್ತಾದ ಸಮಯದಲ್ಲಿ ಮಾರ್ಕೆಟ್‌ಗೆ ಬಂದು ನಂತರ ಅದರ ವಿರುದ್ಧ ಹೋರಾಡುವ ಪಾತ್ರ ನನ್ನದು ಎಂದರು. ಬಹಳ ದಿನಗಳ ನಂತರ ಈ ಚಿತ್ರದ ಮೂಲಕ ಬಣ್ಣಹಚ್ಚಿರುವುದಾಗಿ ನೃತ್ಯ ನಿರ್ದೇಶಕ ಚಿನ್ನಿಪ್ರಕಾಶ್ ಹೇಳಿದರು. ನಾಯಕಿ ಮೇಘ ಶೆಟ್ಟಿ ಮಾತನಾಡಿ, ನನ್ನ ಪಾತ್ರಕ್ಕೆ 2–3 ಶೇಡ್ಸ್ ಇವೆ ಎಂದು ಹೇಳಿದರು. ಉಳಿದಂತೆ ಶಿವರಾಜ್ ಕೆ.ಆರ್.ಪೇಟೆ, ಟೆನ್ನಿಸ್ ಕೃಷ್ಣ, ಶಂಕರ್, ಬೇಬಿ ಲೇಖನ ಹಾಗೂ ಛಾಯಾಗ್ರಾಹಕ ಗುರುಪ್ರಸಾದ್ ಚೀತಾ ಕುರಿತಂತೆ ಮಾತನಾಡಿದರು.



'ಚೀತಾ' ಚಿತ್ರದಲ್ಲಿ ಪ್ರಜ್ವಲ್ ದೇವರಾಜ್, ಮೇಘಾಶೆಟ್ಟಿ

ನೈಜಘಟನೆ ಆಧಾರಿತ 'ಪುರುಷೋತ್ತಮನ ಪ್ರಸಂಗ'

ವಿ.ರವಿಕುಮಾರ್ ಅವರ ನಿರ್ಮಾಣದಲ್ಲಿ. ದೇವದಾಸ್ ಕಾಪಿಕಾಡ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಚಿತ್ರ 'ಪುರುಷೋತ್ತಮನ ಪ್ರಸಂಗ'. ಫೆಬ್ರವರಿಯಲ್ಲಿ ರಾಜ್ಯಾದ್ಯಂತ ತೆರೆಗೆ ಬರಲಿದ್ದು ಈ ಕುರಿತಂತೆ ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರ ತಂಡ ಮಾತನಾಡಿ ಹೆಚ್ಚಿನ ಮಾಹಿತಿ ಹಂಚಿಕೊಂಡಿತು.

ಮೊದಲಿಗೆ ಮಾತನಾಡಿದ ನಿರ್ದೇಶಕ ದೇವದಾಸ್ ಕಾಪಿಕಾಡ್, ಪುರುಷೋತ್ತಮನ ಪ್ರಸಂಗ ಒಂದು ಕೌಟುಂಬಿಕ ಕಥಾಹಂದರವಿರುವ ನೈಜಘಟನೆ ಆಧಾರಿತ ಚಿತ್ರವಾಗಿದೆ. ಪುರುಷೋತ್ತಮನಾಗಿ ನಿರ್ಮಾಪಕ ರವಿಕುಮಾರ್ ಅವರ ಪುತ್ರ ಅಜಯ್ ಅಭಿನಯಿಸಿದ್ದಾರೆ. ರಿಷಿಕಾ ನಾಯ್ಕ್ ಚಿತ್ರದ ನಾಯಕಿ. ನವೀನ್ ಡಿ.ಪಡೀಲ್, ಅರವಿಂದ್ ಬೋಳಾರ್, ಭೋಜರಾಜ್ ವಾಮಂಜೂರು ಸೇರಿ ತುಳುನಾಡಿನ ಬಹುತೇಕ ಕಾಮಿಡಿ ದಿಗ್ಗಜರು ಚಿತ್ರದಲ್ಲಿದ್ದಾರೆ. ನಾನು ಕೂಡ ಒಂದು ಪಾತ್ರದಲ್ಲಿ ನಟಿಸಿದ್ದೇನೆ. ನನ್ನ ಮಗ ಅರ್ಜುನ್ ಚಿತ್ರದ ಸಹನಿರ್ದೇಶನ ಮಾಡಿದ್ದಾರೆ. ನಕುಲ್ ಯಂಕರ್ ಅವರ ಸಂಗೀತ ನಿರ್ದೇಶನದಲ್ಲಿ ನಾಲ್ಕು ಹಾಡುಗಳು ಸುಂದರವಾಗಿ ಮೂಡಿಬಂದಿವೆ. ಜಯಂತ ಕಾಯ್ಕಿಣಿ, ದೊಡ್ಡರಂಗೇಗೌಡ, ವಿ.ನಾಗೇಂದ್ರಪ್ರಸಾದ್ ಹಾಗೂ ನಾನು ಸಹ ಸಾಹಿತ್ಯ ಬರೆದಿದ್ದೇನೆ. ವಿಷ್ಣು ಈ ಚಿತ್ರದ ಛಾಯಾಗ್ರಾಹಕರು. ಮಂಗಳೂರು ಹಾಗೂ ದುಬೈನಲ್ಲಿ ನಮ್ಮ ಚಿತ್ರಕ್ಕೆ ಚಿತ್ರೀಕರಣ ಮಾಡಿದ್ದೇವೆ. ಫೆಬ್ರವರಿಯಲ್ಲಿ ಚಿತ್ರವನ್ನು ತೆರೆಗೆ ತರುತ್ತಿದ್ದೇವೆ ಎಂದರು.

ನಾಯಕ ಅಜಯ್ ಮಾತನಾಡುತ್ತಾ ನಾನು ಈ ಹಿಂದೆ ಕಿಸ್, ಮೆಹಬೂಬ, ನಾಟ್‌ಔಟ್ ಚಿತ್ರಗಳಲ್ಲಿ ಅಭಿನಯಿಸಿದ್ದು, ನಾಯಕನಾಗಿ ನಾನು ನಟಿಸಿರುವ ಮೊದಲ ಚಿತ್ರವಿದು. ತುಳು ರಂಗಭೂಮಿ ಹಾಗೂ ಚಿತ್ರರಂಗದಲ್ಲಿ ಸಾಕಷ್ಟು ಹೆಸರು ಮಾಡಿರುವ ನಿರ್ದೇಶಕ ದೇವದಾಸ್ ಕಾಪಿಕಾಡ್ ಅವರ ನಿರ್ದೇಶನದಲ್ಲಿ ಚಿತ್ರ ಚೆನ್ನಾಗಿ ಮೂಡಿಬಂದಿದೆ. ನನ್ನ ಪಾತ್ರವೂ ಸಹ ಚೆನ್ನಾಗಿದೆ ಎಂದು ಹೇಳಿದರು. ನಂತರ ನಾಯಕಿ ರಿಷಿಕಾ ನಾಯ್ಕ್ ತಮ್ಮ ಪಾತ್ರದ ಬಗ್ಗೆ ಚಿಕ್ಕದಾಗಿ ಮಾಹಿತಿ ನೀಡಿದರು. ನಿರ್ಮಾಪಕರಾದ ವಿ.ರವಿಕುಮಾರ್, ಶಂಶುದ್ದೀನ್ ಚಿತ್ರದ ಕುರಿತಂತೆ ಮಾತನಾಡಿದರು,



ಪುರುಷೋತ್ತಮನ ಪ್ರಸಂಗ ಚಿತ್ರದಲ್ಲಿ ಅಜಯ್, ರಿಶಿಕಾ ನಾಯ್ಕ್



ಈ ವಾರ ಜನಪದ ಸೊಗಡಿನ 'ರಂಗಸಮುದ್ರ'

ವಿಭಿನ್ನ ಶೈಲಿಯ ಪಾತ್ರಗಳ ಮೂಲಕ ಅಭಿಮಾನಿಗಳ ಮನ ಗೆದ್ದಿರುವ ನಟ ರಂಗಾಯಣ ರಘು ಅವರು ಈವರೆಗೆ ಮಾಡಿರದಂಥ ಪಾತ್ರದಲ್ಲಿ ಕಾಣಿಸಿಕೊಂಡಿರುವ ಚಿತ್ರ 'ರಂಗಸಮುದ್ರ' ಇಂದು ತೆರೆಕಾಣುತ್ತಿದೆ. ಅಪ್ಪಟ ಜನಪದ ಸೊಗಡಿನಲ್ಲಿ ಮೂಡಿಬಂದಿರುವ ಈ ಚಿತ್ರದ ಟ್ರೈಲರನ್ನು ರಾಘವೇಂದ್ರ ರಾಜಕುಮಾರ್ ಅವರು ಇತ್ತೀಚೆಗೆ ಬಿಡುಗಡೆ ಮಾಡಿದರು. ನಂತರ ಅವರು ಮಾತನಾಡುತ್ತಾ, ನಾಡಿನ ಜಾನಪದ ಸೊಬಗನ್ನು ಹೇಳುವ ಕಥಾವಸ್ತುವನ್ನು ಆಯ್ಕೆ ಮಾಡಿಕೊಂಡ ನಿರ್ದೇಶಕರಿಗೆ ನನ್ನ ಧನ್ಯವಾದ. ಚಿತ್ರದಲ್ಲಿ ರಂಗಾಯಣ ರಘು ಅವರ ಅಭಿನಯ ನಿಜಕ್ಕೂ ಅದ್ಭುತ. ಇಂತಹ ಚಿತ್ರದಲ್ಲಿ ನಾನು ಅಭಿನಯಿಸಿರುವುದು ನನ್ನ ಭಾಗ್ಯ ಎಂದು ಹೇಳಿದರು.

ರಂಗಸಮುದ್ರ ಊರಿನ ಹೆಸರು. ಚಿತ್ರದ ಕಥೆ ಆ ಊರಲ್ಲೇ ನಡೆಯುತ್ತದೆ. ಈ ಕಥೆಯನ್ನು ನಿರ್ಮಾಪಕ ಹೊಯ್ಸಳ ಕೋಣನೂರು ಅವರಿಗೆ ಹೇಳಿದಾಗ, ರಂಗಾಯಣ ರಘು ಅವರ ಕೈಲಿ ಲೀಡ್ ಪಾತ್ರ ಮಾಡಿಸಿದರೆ ಚೆನ್ನಾಗಿರುತ್ತೆ ಎಂದರು. ನನಗೂ ಅದೇ ಆಸೆಯಿತ್ತು. ರಂಗಾಯಣ ರಘು ಅವರೂ ಪಾತ್ರ ನಿರ್ವಹಿಸಲು ಒಪ್ಪಿ ನಮ್ಮ ಆಸೆ ಈಡೇರಿಸಿದರು. ನಮ್ಮ ಚಿತ್ರದಲ್ಲಿ ಪುನೀತ್ ರಾಜಕುಮಾರ್ ಅವರು ಜಿಲ್ಲಾಧಿಕಾರಿಯ ಪಾತ್ರ ಮಾಡುವುದಾಗಿ ಹೇಳಿದ್ದರು. ಆದರೆ ವಿಧಿಯಾಟದಿಂದ ಅದು ಸಾಧ್ಯವಾಗಲಿಲ್ಲ ಎಂದು ನಿರ್ದೇಶಕ ರಾಜಕುಮಾರ್ ಅಸ್ಕಿ ಹೇಳಿದರು.

ನಂತರ ರಂಗಾಯಣ ರಘು ಮಾತನಾಡಿ, ಜನಪದ ಸೊಗಡಿನಲ್ಲಿ ಮೂಡಿಬಂದಿರುವ ನಮ್ಮ ಚಿತ್ರಕ್ಕೆ ಕರ್ನಾಟಕ ಹಾಗೂ ಮಹಾರಾಷ್ಟ್ರದ ಪ್ರಮುಖ ಸ್ಥಳಗಳಲ್ಲಿ ಚಿತ್ರೀಕರಿಸಿದ್ದೇವೆ. ಪುನೀತ್ ರಾಜಕುಮಾರ್ ಅವರು ಚಿತ್ರದಲ್ಲಿ ನಟಿಸಬೇಕಿತ್ತು, ಆದರೆ ಆಗಲಿಲ್ಲ. ಈಗ ಅದೇ ಮನೆಯ ರಾಘವೇಂದ್ರ ರಾಜಕುಮಾರ್ ಅವರು ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ ಎಂದು ತಿಳಿಸಿದರು.

ನಿರ್ಮಾಪಕ ಹೊಯ್ಸಳ ಕೋಣನೂರು ಮಾತನಾಡುತ್ತಾ, ಸಿನಿಮಾರಂಗ ನನಗೆ ಹೊಸತು. ನಿರ್ದೇಶಕ ರಾಜಕುಮಾರ್ ಅವರು ಹೇಳಿದ ಕಥೆಯಲ್ಲಿ ಏನೋ ಹೊಸತನ ಕಾಣಿಸಿತು, ಹಾಗಾಗಿ ಚಿತ್ರ ನಿರ್ಮಾಣಕ್ಕೆ ಮುಂದಾದೆ. ಎಲ್ಲರ ಸಹಕಾರದಿಂದ ಚಿತ್ರ ತುಂಬಾ ಚೆನ್ನಾಗಿ ಬಂದಿದೆ. ಇದೇ ಶುಕ್ರವಾರ ಚಿತ್ರವನ್ನು ರಿಲೀಸ್ ಮಾಡುತ್ತಿದ್ದೇವೆ ಎಂದು ತಿಳಿಸಿದರು. ಸಂಗೀತ ನಿರ್ದೇಶಕ ದೇಸಿ ಮೋಹನ್ ಮಾತನಾಡುತ್ತ ಚಿತ್ರದಲ್ಲಿ ನೆಲದ ಸೊಗಡನ್ನು ಹೇಳುವ ಐದು ಹಾಡುಗಳಿವೆ. ಅದರಲ್ಲೂ ಕೈಲಾಶ್ ಖೇರ್ ಹಾಡಿರುವ ಕೈಲಾಸ ಸಾಂಗ್ ಅದ್ಭುತವಾಗಿ ಬಂದಿದೆ ಎಂದರು.

ನಿರ್ಮಾಪಕ ದಿ.ರಾಮುಗೆ ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ


ಪತ್ರಕರ್ತರು ಹಾಗೂ ಸಿನಿಮಾ ನಿರ್ಮಾಪಕರ ನಡುವೆ ಕೊಂಡಿಯಂತೆ ಕೆಲಸ ಮಾಡುವುದು ಪ್ರಚಾರಕರ್ತರು. ಕನ್ನಡ ಚಿತ್ರರಂಗದಲ್ಲಿ ಪ್ರಚಾರಕರ್ತ ವೃತ್ತಿಯನ್ನು ಆರಂಭಿಸಿದವರು ಡಿ.ವಿ. ಸುಧೀಂದ್ರ. ಅವರೇ ಸಂಸ್ಥಾಪಿಸಿದ ಶ್ರೀರಾಘವೇಂದ್ರ ಚಿತ್ರವಾಣಿಗೆ 25 ವರ್ಷ ತುಂಬಿದ ಸಂದರ್ಭದಲ್ಲಿ ಅನ್ನದಾತರಾದ ನಿರ್ಮಾಪಕರು ಮತ್ತು ಹಿರಿಯ ಪತ್ರಕರ್ತರಿಗೆ ಪ್ರಶಸ್ತಿ ನೀಡಿ ಗೌರವಿಸುವ ಪರಿಪಾಠವನ್ನು ಆರಂಭಿಸಿದ್ದರು. ಎರಡರಿಂದ ಆರಂಭವಾದ ಆ ಪ್ರಶಸ್ತಿಗಳ ಸಂಖ್ಯೆ ಈಗ 11ಕ್ಕೇರಿದೆ. ಈ ಸಂಸ್ಥೆಯ 48ನೇ ವಾರ್ಷಿಕೋತ್ಸವ ಹಾಗೂ 23ನೇ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜ.27ರ ಸಂಜೆ 5.30ಕ್ಕೆ ಚಲನಚಿತ್ರ ಕಲಾವಿದರ ಸಂಘದಲ್ಲಿ ಪಿಆರ್‌ಓ ಡಿಜಿ.ವೆಂಕಟೇಶ್ ಹಮ್ಮಿಕೊಂಡಿದ್ದಾರೆ.

ಈ ಬಾರಿಯ ಪ್ರಶಸ್ತಿಗಳ ವಿವರ ಹೀಗಿದೆ: ಶ್ರೀರಾಘವೇಂದ್ರ ಚಿತ್ರವಾಣಿ ಪ್ರಶಸ್ತಿಯನ್ನು ಹಿರಿಯ ನಿರ್ಮಾಪಕ ದಿ.ರಾಮು ಹಾಗೂ ಸಿನಿಮಾ ಪತ್ರಕರ್ತರಾದ ಮುರಳೀಧರ ಖಜಾನೆ ಅವರುಗಳು ಪಡೆದಿದ್ದಾರೆ. ಡಾ.ರಾಜಕುಮಾರ್ ಪ್ರಶಸ್ತಿಗೆ ಹಿನ್ನೆಲೆ ಗಾಯಕ ಹೇಮಂತ್ ಕುಮಾರ್ ಆಯ್ಕೆಯಾಗಿದ್ದು, ಉಳಿದಂತೆ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ಕಲಾವಿದೆ ಶ್ರೀಮತಿ ಜಯಲಕ್ಷ್ಮಿ (ದುಬೈ), ಸಂಗೀತ ನಿರ್ದೇಶಕ ಜೋ ಕೋಸ್ಟ, ಸಾಹಿತಿ ಹೇಮಂತ್ ರಾವ್, ಬಿ.ಎಸ್.ಲಿಂಗದೇವರು, ಹಾಗೂ ಶರಣು ಹುಲ್ಲೂರು, ಸಿಂಧು ಶ್ರೀನಿವಾಸ ಮೂರ್ತಿ, ನಟ ಡಾಲಿ ಧನಂಜಯ, ಹಿರಿಯ ಪೋಷಕನಟ ಸುಂದರರಾಜ್ ಅವರುಗಳು ಪಡೆದು ಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ರಾಷ್ಟ್ರಪ್ರಶಸ್ತಿ ವಿಜೇತರಾದ ಬಿ.ಎಸ್. ಸುಬ್ರಹ್ಮಣ್ಯ, ರಕ್ಷಿತ್‌ಶೆಟ್ಟಿ, ಅನಿರುದ್ ಅವರನ್ನು ವಿಶೇಷವಾಗಿ ಸನ್ಮಾನಿಸಲಾಗುತ್ತದೆ.

ಸಿನಿಪದಬಂಧ–509



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________



ಸಿನಿ ಪದಬಂಧ 508ರ ಉತ್ತರ

ಸಾ	ಗ	ರ	ದೀ	ಪ		ಸ	ತ್ಯ	ಸಂ	ದೇ	ಶ
ಕ್ಷಿ				ದ		ತ್ಯಂ			ವ	
ಶಿ	ವ	ಕಾ	ಶಿ				ನ	ವ	ರ	ಸ
ವಾ			ವಾ		ಯು		ವಿ		ಆ	
ನಂ	ದಿ		ಜಿ		ಗ		ಲೂ		ಟ	
ದ್		ನಾ	ಗ	ಕಾ	ಳ	ಭೈ	ರ	ವ		ಊ
	ಪ		ಣೇ		ಗೀ		ನೈ		ಪ	ರ್ವ
	ದ್ಮ		ಶ		ತೆ		ದಿ			ಶಿ
ಶಿ	ವಾ	ರ್ಜು	ನ್				ಲೆ	ಮಾ	ಘ	ಮೇ
	ಸಂ			ಕಾ		ತ				ನ
ಪ್ರೀ	ತಿ	ಸಿ	ನೋ	ಡು		ಸಂ	ಸಾ	ರ	ನೌ	ಕೆ

ವಿಜೇತರು: ಧನುಶ್ರೀ, ರಾಮಕೃಷ್ಣನಗರ, 'ಹೆಚ್' ಬ್ಲಾಕ್, ಮೈಸೂರು-570022

ಎಡದಿಂದ ಬಲಕ್ಕೆ

1.ಮನುಷ್ಯ ಎಂದ ಮೇಲೆ ಕೆಟ್ಟದು, ಒಳ್ಳೆಯದು ಇರಲೇಬೇಕು! 4
3. ರವಿಚಂದ್ರನ್‌ನ ಘಟಿಸಲಾಗದ ಚಿತ್ರ 4
7. ಕಮಲ್–ರಮೇಶ್–ಶೃತಿ 6
9. ವಿಷ್ಣು–ಮಾಧವಿ ಅಭಿನಯಕ್ಕೆ ಭಾರ್ಗವ ನಿರ್ದೇಶಕ 6
10. ಕೊನೆಯಲ್ಲಿ ಪಕ್ಷಿಯೊಂದನ್ನು ಇರಿಸಿಕೊಂಡ ಅಲೆ 4
12. ಡಿವಿಜಿ ನೆನಪಿಸಿಕೊಳ್ಳಿ ದ್ವಾರಕೀಶ್ ಚಿತ್ರ ಪ್ರತ್ಯಕ್ಷ! 4
15. ಮಾಲಾಶ್ರೀ ದ್ವಿಪಾತ್ರಭಿನಯದ ಚಿತ್ರ 6
16. ಟಿ.ಪಿ.ವೇಣುಗೋಪಾಲ್ ಅವರ "ಸಿಹಿ ಮಿಲನ" 6
19. ಹತ್ತರ ಉತ್ತಮ ಹಾಡುಗಳಿಗೆ ಹೀಗೆನ್ನಿ 4
20. ಯಶ್–ಮೇಘನಾ ರಾಜ್ ಅಭಿನಯದ ವ್ಯಾಘ್ರ 4

ಮೇಲಿನಿಂದ ಕೆಳಕ್ಕೆ

1. ಶ್ರೀನಾಥ್–ಆರತಿ ಅಭಿನಯದಲ್ಲಿ ಹರಿದ ಪರಿಶುದ್ಧ ನದಿ 5
2. ಪಟ್ಟಣಕ್ಕೆ ಬಂದ ಜಗ್ಗೇಶ್ 2
4. ರವಿಚಂದ್ರನ್ ಯುದ್ಧದಲ್ಲಿ ಹಳ್ಳಿಯಿದೆ 3
5. ಪಿ. ಮಹೇಶ್ ಸುಖಧರೆಯ ಸಡಗರ 3
6. ಕೊಳ್ಳೆ, ದರೋಡೆಗೆ ಇನ್ನೊಂದು ಪದ 3
7. ವಿಷ್ಣು, ಶ್ರೀನಾಥ್, ಮಂಜುಳಾ ಅಭಿನಯಕ್ಕೆ ವಿಜಯ್ ನಿರ್ದೇಶಕ 3
8. ಮೆಹೆಂದಿ ಹೆಸರಿನ ಚಿತ್ರ 4
11. "ಸೇಡು" ತೀರಿಸಿಕೊಂಡ ಚಿತ್ರ 4
13.ಆಂಗ್ಲದ ಹಣ ಹೊಂದಿರುವ ನಟಿ 3
14. ಮಿಸ್ ಲೀಲಾವತಿ ಚಿತ್ರದ ಹಾಡೊಂದರ ಆರಂಭ ಸೌಂದರ್ಯ ಅಭಿನಯವಿದೆ 5
16. ವೃಕ್ಷದ ನಡುವೆ ಗಂಡು ನವಿಲಿದೆ 3
17. ಪ್ರಜ್ವಲ್ ದೇವರಾಜ್ ಎಬ್ಬಿಸಿದ "ಗದ್ದಲ" 3
18. ಕಸ್ತೂರಿಯ ಬುದ್ಧಿವಂತ ಇಲ್ಲಿ ತಲೆಕೆಳಗು 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಸರ್ಕಾರಿ ಶಾಲೆಯಲ್ಲಿ ತಪ್ಪು ಮಾಹಿತಿಯಿಂದ ಪಜೀತಿ

ಬಿಸಿಯೂಟ ಸೇವಿಸಿದ ಮಕ್ಕಳಿಗೆ ಪೋಷಕರಿಂದ ಚಿಕಿತ್ಸೆ, ಅಧಿಕಾರಿಗಳು ಆಸ್ಪತ್ರೆಗೆ ದೌಡು

ತಿ.ನರಸೀಪುರ.ಜ.18– ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಕ್ಷೇತ್ರದಲ್ಲಿ ಬಿಸಿಯೂಟದಲ್ಲಿ ಹಲ್ಲಿ ಬಿದ್ದಿದೆ ಎಂಬ ತಪ್ಪು ಮಾಹಿತಿಯಿಂದ ಗಾಬರಿಗೊಂಡ ಮಕ್ಕಳ ಪೋಷಕರು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ ಘಟನೆ ನಂಜನಗೂಡು ತಾಲೂಕು ಸಾಲುಂಡಿ ಗ್ರಾಮದಲ್ಲಿ ಗುರುವಾರ ಸಂಭವಿಸಿದ್ದು, ವಿಷಯ ತಿಳಿದ ಆರೋಗ್ಯ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿದ್ದಾರೆ.

ನಂಜನಗೂಡು ತಾಲೂಕು ಸಾಲುಂಡಿ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 34 ಮಕ್ಕಳಿದ್ದು ಪ್ರತಿದಿನದಂತೆ ಇಂದು ಶಾಲೆಯಲ್ಲಿ ಬಿಸಿಯೂಟ ತಯಾರಿಸಲಾಗಿತ್ತು. ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಶಾಲೆಯಲ್ಲಿ ತಯಾರಾದ ಬಿಸಿಯೂಟವನ್ನು ಶಾಲೆಯ ಮಕ್ಕಳು ಸೇವಿಸಿದ್ದರು.

ಊಟ ಮಾಡುವಾಗ ವಿದ್ಯಾರ್ಥಿನಿಯೊಬ್ಬರು ತಟ್ಟೆಯಲ್ಲಿ ಹಲ್ಲಿ ಆಕಾರದ ತರಕಾರಿ ಬಿದ್ದಿರುವುದನ್ನು ನೋಡಿ ಆತಂಕಗೊಂಡು ಶಾಲಾ ಮುಖ್ಯ ಶಿಕ್ಷಕಿ ಪುಷ್ಪ ಅವರಿಗೆ ತಿಳಿಸಿದ್ದಾಳೆ.



ಸಾಲುಂಡಿ ಗ್ರಾಮದ ಶಾಲೆಯ ಮಕ್ಕಳು ಬಿಸಿಯೂಟ ಸೇವಿಸಿ ಅಸ್ವಸ್ಥರಾದ ಹಿನ್ನೆಲೆಯಲ್ಲಿ ತಿ.ನರಸೀಪುರ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ತಪಾಸಣೆ ನಡೆಸಲಾಯಿತು.

ಶಿಕ್ಷಕಿ ಅದನ್ನು ಪರೀಕ್ಷಿಸಿ ಅದು ತರಕಾರಿಯ ಕೊನೆಯ ಭಾಗವೆಂದು ತಿಳಿಸಿ ತಮ್ಮ ಕರ್ತವ್ಯದಲ್ಲಿ ತೊಡಗಿಕೊಂಡಿದ್ದಾರೆ. ಆದರೆ ಮಕ್ಕಳು ಪೋಷಕರಿಗೆ ನಡೆದ ವಿಷಯವನ್ನು ತಿಳಿಸಲಾಗಿ ಗಾಬರಿಗೊಂಡ ಪೋಷಕರು ತಮ್ಮ ಮಕ್ಕಳನ್ನು ತಿ.ನರಸೀಪುರ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿದರು. ಘಟನೆ ಸಂಬಂಧ ಪ್ರತಿಕ್ರಿಯೆ ನೀಡಿದ ತಾಲೂಕು ಆಡಳಿತಾಧಿಕಾರಿ ಡಾ. ರವಿಕುಮಾರ್, ಆಡಳಿತ ವೈದ್ಯಾಧಿಕಾರಿ ಜಗನ್ನಾಥ್, ಮಕ್ಕಳ ತಜ್ಞೆ ಮಾನಸ ಮಕ್ಕಳಿಗೆ ಯಾವುದೇ ರೀತಿಯ ಸಮಸ್ಯೆ ಎದುರಾಗಿಲ್ಲ. ಎಲ್ಲ ಮಕ್ಕಳು ಆರೋಗ್ಯವಾಗಿದ್ದು ಆರೋಗ್ಯ ಉತ್ತಮ ಸ್ಥಿತಿಯಲ್ಲಿ ಇದೆ. ಯಾರಿಗೂ ಗಂಭೀರ ಸಮಸ್ಯೆ ಎದುರಾಗಿಲ್ಲ. ಮಕ್ಕಳನ್ನು ಮುನ್ನೆಚ್ಚರಿಕೆ ಕ್ರಮವಾಗಿ ನಿಗಾ ಘಟಕದಲ್ಲಿ ಇರಿಸಲಾಗಿದೆ. ಸ್ವಲ್ಪ ಸಮಯದ ನಂತರ ಎಲ್ಲ ಮಕ್ಕಳನ್ನು ಮನೆಗೆ ಕಳುಹಿಸಿಕೊಡಲಾಗುತ್ತದೆ ಎಂದು ತಿಳಿಸಿದರು. ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಆರೋಗ್ಯಾಧಿಕಾರಿ ಕುಮಾರಸ್ವಾಮಿ, ಮಕ್ಕಳ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿ ಮಕ್ಕಳಿಗೆ ಯಾವುದೇ ರೀತಿಯ ಆರೋಗ್ಯ ಸಮಸ್ಯೆ ಉಂಟಾಗಿಲ್ಲ. ಹಾಗಾಗಿ ಪೋಷಕರು ಆತಂಕ ಪಡುವ ಅಗತ್ಯ ಇಲ್ಲ ಎಂದರು.

ನಂಜನಗೂಡು ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಇಓ ಜೆರಾಲ್ಡ್ ರಾಜೇಶ್, ಬಿಇಓ ಶಿವಲಿಂಗಯ್ಯ, ಅಕ್ಷರ ದಾಸೋಹ ಅಧಿಕಾರಿ ಮಲ್ಲಿಕಾರ್ಜುನ್, ಬಿಸಿಯೂಟದ ಜಿಲ್ಲಾ ಮಟ್ಟದ ಅಧಿಕಾರಿ ರೇವಣ್ಣ, ಹಾರೋಪುರ ಶಿವಣ್ಣ, ತಿ.ನರಸೀಪುರ ತಹಶೀಲ್ದಾರ್ ಸುರೇಶ್ ಆಚಾರ್, ಸಿಪಿಐ ಧನಂಜಯ್, ಪಿಎಸ್ ಜಗದೀಶ್ ದೂಳ್‌ಶೆಟ್ಟಿ ಮತ್ತಿತರರಿದ್ದರು.

ನನ್ನ ಊಟ ಮೊದಲು ನಂತರ ಮಕ್ಕಳದ್ದು...

ಘಟನೆ ಸಂಬಂಧ ಪ್ರತಿಕ್ರಿಯೆ ನೀಡಿದ ಶಾಲೆಯ ಮುಖ್ಯ ಶಿಕ್ಷಕಿ ಪುಷ್ಪ, ಶಾಲೆಯಲ್ಲಿ ತಯಾರಿಸಲಾದ ಬಿಸಿಯೂಟವನ್ನು ಮಕ್ಕಳಿಗೆ ಬಡಿಸುವ ಮೊದಲು ನಾನು ಸೇವಿಸುತ್ತೇನೆ.ಇಂದು ಸಹ ನಾನು ಊಟ ಮಾಡಿದ್ದೇನೆ. ಮಕ್ಕಳು ಯಾವುದೋ ತರಕಾರಿಯ ತುಂಡೊಂದನ್ನು ಹಲ್ಲಿ ಎಂದು ಭಾವಿಸಿ ಗಾಬರಿ ಮಾಡಿಕೊಂಡಿದ್ದಾರೆ. ನನಗೆ ಅದನ್ನು ಮಕ್ಕಳು ತೋರಿಸಿದ್ದು ಪರಿಶೀಲಿಸಲಾಗಿ ಅದು ಹಲ್ಲಿಯಲ್ಲ ಎಂದು ಸ್ಪಷ್ಟಪಡಿಸಿದ್ದಾಗಿ ಹೇಳಿದರು. ಪೋಷಕರು ಗಾಬರಿಯಾಗಿ ತಮ್ಮ ಮಕ್ಕಳನ್ನು ಆಸ್ಪತ್ರೆಗೆ ಕರೆದೊಯ್ದು ಬಂದಿದ್ದಾರೆ ಅಷ್ಟೇ. ಮಕ್ಕಳೆಲ್ಲಾ ಆರೋಗ್ಯವಾಗಿದ್ದಾರೆ. ನಮ್ಮ ಶಾಲೆಯಲ್ಲಿ ಮಕ್ಕಳ ಆರೋಗ್ಯಕ್ಕೆ ಹೆಚ್ಚಿನ ಗಮನ ನೀಡಲಾಗುತ್ತದೆ ಎಂದು ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹನುಮಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಹನುಮಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಹನುಮಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಆಯಾನ್ (ತ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9.05ಕ್ಕೆ, ಮ.3.50ಕ್ಕೆ, ಕಾಟೇರ (ಕ): ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ.
ಸ್ಕ್ರೀನ್ 2	ಅಯಲಾನ್ (ತ): ಬೆ.10ಕ್ಕೆ, ಸಂ.4.05ಕ್ಕೆ, ಮೇರಿ ಕ್ರಿಸ್‌ಮಸ್ (ತ): ಮ.1.10ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.15ಕ್ಕೆ, ಅಬ್ರಾಹಂ ಓಜ್ಲರ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಕ್ಯಾಪ್ಟನ್ ಮಿಲ್ಲರ್ (ಕ): ಬೆ.9.55ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.1ಕ್ಕೆ, ರಾ.10.20ಕ್ಕೆ, ಹನುಮಾನ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.35ಕ್ಕೆ, ಗುಂಟೂರು ಕಾರಂ (ತೆ): ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಮೇರಿ ಕ್ರಿಸ್‌ಮಸ್ (ಹಿಂ): ಬೆ.8.55ಕ್ಕೆ, ಕಾಟೇರ (ಕ): ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, ಅಯಲಾನ್ (ತ): ಮ.3.30ಕ್ಕೆ.
ಸ್ಕ್ರೀನ್ 3	ಕಾಟೇರ (ಕ): ಬೆ.8.50ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.12.25ಕ್ಕೆ, ರಾ.10.10ಕ್ಕೆ, ಕ್ಯಾಪ್ಟನ್ ಮಿಲ್ಲರ್ (ಕ): ಮ.3.45ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.05ಕ್ಕೆ.
ಸ್ಕ್ರೀನ್ 4	ಸೈಂಧವ್ (ತೆ): ಬೆ.9.10ಕ್ಕೆ, ಮ.3.35ಕ್ಕೆ, ಹನುಮಾನ್ (ತೆ): ಮ.12.10ಕ್ಕೆ, ರಾ.10ಕ್ಕೆ, ಅಯಲಾನ್ (ತ): ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಹಿರ್ದೆಸೆಗೆ ಹೋಗುತ್ತಿದ್ದ ಮಹಿಳೆ ಮೇಲೆ ಕಾಡಾನೆ ದಾಳಿ

ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಗೆ ದಾಖಲು



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೆಂಪದೇವಮ್ಮ.

ಸರಗೂರು: ಬಹಿರ್ದೆಸೆಗೆ ಹೋಗುತ್ತಿದ್ದ ರೈತ ಮಹಿಳೆ ಮೇಲೆ ಕಾಡಾನೆ ದಾಳಿ ನಡೆಸಿ ಆಕೆಯನ್ನು ಗಾಯಗೊಳಿಸಿರುವ ಘಟನೆ ತಾಲೂಕಿನ ಎಂ.ಸಿ.ತಳಲು ಗ್ರಾಮದಲ್ಲಿ ಸಂಭವಿಸಿದೆ. ಕೆಂಪದೇವಮ್ಮ ಗಾಯಗೊಂಡವರಾಗಿದ್ದು, ಅವರನ್ನು ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಇವರು ಬಹಿರ್ದೆಸೆಗೆ ಹೋಗಲು ಮುಂಜಾನೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸಮೀಪದಲ್ಲಿ ಹೋಗುತ್ತಿದ್ದಾಗ ಹಿಂಬದಿಯಿಂದ ಕಾಡಾನೆ ದಾಳಿ ನಡೆಸಿದೆ. ಪಕ್ಕದಲ್ಲೇ ಇದ್ದ ನಿವಾಸಿಯೊಬ್ಬರು ಬ್ಯಾಟರಿಯಲ್ಲಿ ಬೆಳಕು ಬಿಟ್ಟು ಜೋರಾಗಿ ಕೂಗಿದ್ದಾರೆ. ಕೂಗಿದ ಶಬ್ದಕ್ಕೆ ಆನೆ ಸ್ಥಳದಿಂದ ಕಾಡಿನತ್ತ ಪರಾರಿಯಾಗಿದೆ ಎನ್ನಲಾಗಿದೆ.

ಇದರಿಂದಾಗಿ ಕೆಂಪದೇವಮ್ಮ ಅವರ ಕಾಲು, ಕೈ, ಬೆನ್ನಿಗೆ ಹೆಚ್ಚು ನೋವಾಗಿದ್ದು, ಚಿಕಿತ್ಸೆಗಾಗಿ ಕೋಟೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿದ ಕೂಡಲೇ ನುಗು ವನ್ಯಜೀವಿ ಅರಣ್ಯ ವಲಯಾಧಿಕಾರಿ ವಿವೇಕ್, ಡಿಆರ್‌ಎಫ್‌ಓ ಲಕ್ಷ್ಮಣ್ ಸೇರಿದಂತೆ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಇದಲ್ಲದೆ ಆಸ್ಪತ್ರೆಗೂ ಭೇಟಿ ನೀಡಿ ಗಾಯಾಳುವಿನ ಯೋಗಕ್ಷೇಮ ವಿಚಾರಿಸಿದ್ದಾರೆ.

ಇಲಾಖಾಧಿಕಾರಿ ವಿವೇಕ್ ಅವರು ಕೆಂಪದೇವಮ್ಮ ಅವರ ಚಿಕಿತ್ಸೆ ವೆಚ್ಚವನ್ನು ಇಲಾಖೆ ಭರಿಸಲಿದೆ. ಜತೆಗೆ ಜೀವನ ನಿರ್ವಹಣೆಗೆ ಸಹಾಯ ನೀಡಲಾಗುವುದು ಎಂದರು.

ಕಾಡಿನಲ್ಲಿ ಗಾಯಗೊಂಡಿರುವ ಮರಿ ಆನೆ ಪತ್ತೆ


ಸಫಾರಿಗೆ ಹೋಗಿದ್ದವರಿಗೆ ತಾಯಿಯೊಂದಿಗೆ ಕುಂಟುತ್ತಾ ಸಾಗುತ್ತಿದ್ದ ಮರಿ ಆನೆ ಗೋಚರ

ಆನೆ ಮರಿ ಕಾಲಿಗೆ ಗಾಯವಾಗಿರುವ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಐದು ದಿನಗಳ ಕಾರ್ಯಾಚರಣೆ ಮಾಡಲಾಗಿತ್ತು, ಆದರೆ ಆನೆ ಮರಿ ಸಿಗದ ಕಾರಣ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ. ನಿನ್ನೆ ಮತ್ತೆ ಸಫಾರಿ ಸಮಯದಲ್ಲಿ ಪ್ರವಾಸಿಗರಿಗೆ ಕಾಣಿಸಿಕೊಂಡಿರುವುದು ನನ್ನ ಗಮನಕ್ಕೆ ಬಂದಿದ್ದು, ಆನೆ ಮರಿಗೆ ಚಿಕಿತ್ಸೆ ಕೊಡುವ ಸಂಬಂಧ, ಪ್ರಾಣಿ ತಜ್ಞರ ಜೊತೆ ಸಭೆ ನಡೆಸಿ ತೀರ್ಮಾನ ತೆಗೆದುಕೊಂಡು ಚಿಕಿತ್ಸೆಗೆ ಮುಂದಾಗುತ್ತೇವೆ.

–ರಂಗಸ್ವಾಮಿ ಎಸಿಎಫ್.

ನಾನು ಸಫಾರಿಗೆ ತೆರಳಿದ್ದ ಸಂದರ್ಭದಲ್ಲಿ ಪವರ್ ಲೈನ್ ಜಂಕ್ಷನ್ ಬಳಿ, ಆನೆ ಮರಿಯೊಂದು ಕಾಲಿಗೆ ಗಂಭೀರ ಗಾಯಗೊಂಡು ಕುಂಟುತ್ತಾ ತನ್ನ ತಾಯಿ ಆನೆ ಜೊತೆ ಹೋಗುತ್ತಿರುವುದನ್ನು, ನನ್ನ ಕ್ಯಾಮೆರಾದಲ್ಲಿ ಸೆರೆಹಿಡಿದ್ದೇನೆ. ಆದುದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳು ತಕ್ಷಣ ಆನೆ ಮರಿಗೆ ಚಿಕಿತ್ಸೆ ಕೊಡಲು ಮುಂದಾಗಬೇಕು.

– ಮಣಿಕಂಠ, ವನ್ಯಜೀವಿ ಛಾಯಾಗ್ರಾಹಕ.



ಹೆಚ್.ಡಿ.ಕೋಟೆ, ಜ.18– ಮರಿಯಾನೆಯೊಂದು ತೀವ್ರವಾಗಿ ಗಾಯಗೊಂಡು ತಾಯಿ ಆನೆಯೊಂದಿಗೆ ಓಡಾಡುತ್ತಿರುವ ಘಟನೆ ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಅಭಯಾರಣ್ಯದ ದಮ್ಮನಕಟ್ಟೆ ಬಳಿ ತಡವಾಗಿ ಬೆಳಕಿಗೆ ಬಂದಿದೆ.

ವನ್ಯಜೀವಿ ಛಾಯಾಗ್ರಾಹಕ ಮಣಿಕಂಠ ಅವರು ಸಫಾರಿಗೆ ತೆರಳಿದ ಸಂದರ್ಭದಲ್ಲಿ ಕ್ಯಾಮರಾದಲ್ಲಿ ಮರಿಯಾನೆ ಬಲಗಾಲಿಗೆ ಗಂಭೀರ ಸ್ವರೂಪದ ಗಾಯಗಳಾಗಿರುವುದು ಕಂಡು ಬಂದಿದೆ. ದೃಶ್ಯವನ್ನು ಅವರು ಸೆರೆಹಿಡಿದಿದ್ದಾರೆ. ಮರಿ ಆನೆ ಬಲ ಕಾಲಿಗೆ ಗಂಭೀರ ಸ್ವರೂಪದ ಹೆಚ್ಚು ಗಾಯವಾಗಿ ಸಂಕಷ್ಟದಲ್ಲಿರುವಂತೆ ಕಾಣುತ್ತಿದೆ.

ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳು ಗಾಯಗೊಂಡಿರುವ ಮರಿ ಆನೆಗೆ ಸೂಕ್ತ ಚಿಕಿತ್ಸೆ ಕೊಡಿಸುವುದರಲ್ಲಿ ಮುಂದಾಗಬೇಕು ಎಂದು ಪ್ರವಾಸಿಗರು ಮನವಿ ಮಾಡಿದ್ದಾರೆ. ಆರ್‌ಎಫ್‌ಓ ಭರತ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕಳೆದ 12 ದಿನಗಳ ಹಿಂದೆಯೇ ಈ ಮರಿ ಆನೆ ಗಾಯಗೊಂಡ ಮಾಹಿತಿ ದೊರಕಿತ್ತು. ಆದ್ದರಿಂದ ಸಂಬಂಧಪಟ್ಟ ಮೇಲಾಧಿಕಾರಿಗಳ ಮಾರ್ಗದರ್ಶನದ ಮೇರೆಗೆ ಪ್ರಾಣಿಗಳ ತಜ್ಞ ಡಾ. ರಮೇಶ್ ಹಾಗೂ ನಮ್ಮೆಲ್ಲ ಸಿಬ್ಬಂದಿಗಳ ಜೊತೆಗೂಡಿ, ಭೀಮ ಮತ್ತು ಪ್ರಶಾಂತ ಈ ಎರಡು ಆನೆಗಳನ್ನು ಬಳಸಿಕೊಂಡು ಕಾರ್ಯಾಚರಣೆ ನಡೆಸಿದೆವು. ಆದರೆ ಕಾರ್ಯಾಚರಣೆಯಲ್ಲಿ ಈ ಮರಿ ಆನೆ ಗೋಚರಿಸಲಿಲ್ಲ ಎಂದರು.

ಮರಿ ಆನೆ ತನ್ನ ತಾಯಿ ಆನೆ ಸೇರಿದಂತೆ ತನ್ನ ಕುಟುಂಬದವರ ಸಮೇತ ಅಂತರಸಂತೆ ಅರಣ್ಯ ವಲಯ, ಡಿ. ಬಿ.ಕುಪ್ಪೆ ಮೇಟಿಕುಪ್ಪೆ ಈ ಅರಣ್ಯ ವಲಯ ಭಾಗದಲ್ಲಿ ಸಂಚರಿಸುತ್ತಿದ್ದು, ಕಾರ್ಯಾಚರಣೆ ಸಮಯದಲ್ಲಿ ಸಿಗಲಿಲ್ಲ. ಆದ್ದರಿಂದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದ್ದೇವೆ. ಮತ್ತೆ ಅಧಿಕಾರಿಗಳ ಮಾರ್ಗದರ್ಶನದ ಮೇರೆಗೆ ಕಾರ್ಯಾಚರಣೆ ನಡೆಸುತ್ತೇವೆ ಎಂದರು.

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ : ವೃದ್ಧ ಸಾವು

ನಂಜನಗೂಡು, ಜ.18– ಕೆಎಸ್‌ಆರ್‌ಟಿಸಿ ಬಸ್ ಪಾದಚಾರಿಗೆ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ನಗರದ ಚಾಮುಂಡಿ ಟೌನ್‌ಷಿಪ್ ಬಳಿ ಜರುಗಿದೆ.

ಚಾಮಲಾಪುರಹುಂಡಿ ಬಡಾವಣೆಯ ಮಾಲಯ್ಯ(77) ಮೃತ ದುರ್ದೈವಿ.

ಮಾಲಯ್ಯ ಕುಟುಂಬದವರು ಮನೆ ಕಟ್ಟಿಸುತ್ತಿದ್ದು, ಇದನ್ನು ನೋಡಲು ತೆರಳಿದ್ದರು. ಈ ವೇಳೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯನ್ನು ದಾಟುತ್ತಿದ್ದಾಗ ಮೈಸೂರಿನಿಂದ ನಂಜನಗೂಡು ಕಡೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಮಾಲಯ್ಯ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ. ಸಂಚಾರ ಪೊಲೀಸ್‌ಠಾಣೆಯ ಪಿಎಸ್‌ಐ ಜಯಪ್ರಕಾಶ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಬಸ್‌ನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ.

ಅಯೋಧ್ಯೆ ಮಂತ್ರಾಕ್ಷತೆ ವಿತರಣೆ



ಅಯೋಧ್ಯೆಯ ರಾಮಮಂದಿರದ ಭಾವಚಿತ್ರ, ಮಂತ್ರಾಕ್ಷತೆಯನ್ನು ವಿತರಿಸಲಾಯಿತು.

ತಿ.ನರಸೀಪುರ, ಜ.18– ಅಯೋಧ್ಯೆಯ ರಾಮಮಂದಿರದ ಭಾವಚಿತ್ರ ಹಾಗೂ ಮಂತ್ರಾಕ್ಷತೆಯನ್ನು 23ನೇ ವಾರ್ಡಿನ ಮನೆಗಳಿಗೆ ಪುರಸಭಾ ಸದಸ್ಯ ಹಾಗೂ ಬಿಜೆಪಿ ಟೌನ್ ಅಧ್ಯಕ್ಷ ಎಸ್.ಕೆ.ಕಿರಣ್ ಅವರು ಹಿರಿಯ ಮುಖಂಡರಾದ ವಾಸವಿ ಹಾಲ್ ಸತ್ಯಪ್ಪ ಅವರಿಗೆ ನೀಡುವ ಮೂಲಕ ಮಂತ್ರಾಕ್ಷತೆ ವಿತರಣೆಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಅಯೋಧ್ಯೆಯ ರಾಮಮಂದಿರ ಉದ್ಘಾಟನೆಗೊಳ್ಳಲಿದ್ದು ಅದರ ಪ್ರಯುಕ್ತ ಮಂತ್ರಾಕ್ಷತೆಯನ್ನು ನನ್ನ ವಾರ್ಡಿನ ಎಲ್ಲಾ ನಾಗರಿಕರಿಗೂ ವಿತರಿಸಲಾಗುತ್ತಿದೆ ಎಂದರು.

ರಾಮಮಂದಿರ ಉದ್ಘಾಟನೆಯ ನಂತರ ಫೆಬ್ರವರಿಯಲ್ಲಿ ಪಟ್ಟಣದ ಪ್ರತಿ ಬೂತ್‌ನಿಂದ 50 ಮಂದಿಯನ್ನು ಒಟ್ಟು 10 ಬೂತ್‌ಗಳಿಂದ ರಾಮಮಂದಿರಕ್ಕೆ ಅಯೋಧ್ಯೆಗೆ ತೆರಳಲು ಕನಿಷ್ಠ 500 ಕಾರ್ಯಕರ್ತರು ಹಾಗೂ ಪಟ್ಟಣದ ನಾಗರಿಕರಿಗೆ ಉಚಿತವಾಗಿ ಪ್ರಯಾಣ ಮಾಡಲು ವ್ಯವಸ್ಥೆ ಕಲ್ಪಿಸಿಕೊಡಲಾಗುವುದು. ಅಯೋಧ್ಯೆಗೆ ತೆರಳಲು ಇಚ್ಛೆ ಉಳ್ಳವರು ಎಸ್.ಕೆ. ಕಿರಣ್ ಅವರನ್ನು ಮೊ.9448531975 ಸಂಪರ್ಕಿಸಲು ಅವರು ಕೋರಿದ್ದಾರೆ.


ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ವಿಜಯಕುಮಾರ್, ಎಸ್ಸಿಮೋರ್ಚಾ ಕಾರ್ಯದರ್ಶಿ ಚೌಹಳ್ಳಿ ಸಿದ್ದರಾಜು, ಹೋಟೆಲ್ ನಾಗರಾಜು, ಕುರುಬೂರು ಶಿವು, ವಾಸವಿ ಮಹಲ್ ಸತ್ಯಪ್ಪ ಹೇಳವರಹುಂಡಿ ಹೋಟೆಲ್ ಪ್ರಭು, ಮನು, ತರಕಾರಿ ಶಿವು, ಟೈಲರ್ ಸೂರಿ, ಶಬರಿ ಮತ್ತಿತರರು ಇದ್ದರು.

ಮಲ್ಕುಂಡಿಯಲ್ಲಿ ಅಯ್ಯಪ್ಪ ಸ್ವಾಮಿ ಪಡಿಪೂಜೆ

ಮಲ್ಕುಂಡಿ, ಜ.18– ನಂಜನಗೂಡು ತಾಲೂಕಿನ ಮಲ್ಕುಂಡಿ ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿ ಭಕ್ತಮಂಡಳಿ ವತಿಯಿಂದ ಅಯ್ಯಪ್ಪ ಸ್ವಾಮಿಯ ಪಡಿಪೂಜೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಗ್ರಾಮದ ಹೊರವಲಯದಲ್ಲಿರುವ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನದಿಂದ ಕಳಸ ತರುವ ಮೂಲಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಡೋಲು ಕುಣಿತದೊಂದಿಗೆ ಮೆರವಣಿಗೆ ಮಾಡಲಾಯಿತು. ಗ್ರಾಮದ ಬೀದಿಗಳನ್ನು ರಂಗೋಲಿಯಿಂದ ಅಲಂಕರಿಸಲಾಗಿತ್ತು. ಈ ವೇಳೆ ಗುರುಸ್ವಾಮಿಗಳಾದ ಎಂ.ಪಿ.ಶ್ರೀನಿವಾಸ್, ಸ್ವಾಮಿಗಳಾದ ಚನ್ನಪ್ಪ, ಶಿವಕುಮಾರ್, ವೆಂಕಟರಾಜು, ವಿಶ್ವ ಸೇರಿದಂತೆ ಸ್ವಾಮಿಧಾರಿಗಳು ಇದ್ದರು.

ಹೊಸೂರಿನ ದಿನಸಿ ಅಂಗಡಿಯಲ್ಲಿ ಕಳ್ಳತನ



ಚುಂಚನಕಟ್ಟೆ : ದಿನಸಿ ಅಂಗಡಿಯ ಶೆಟರ್ ಮುರಿದು 85 ಸಾವಿರಕ್ಕೂ ಅಧಿಕ ಹಣ, ದಿನಸಿ ಪದಾರ್ಥ ಮತ್ತು ಸಿಗರೇಟುಗಳನ್ನು ಕಳ್ಳತನ ಮಾಡಿರುವ ಘಟನೆ ಹೊಸೂರು ಗ್ರಾಮದಲ್ಲಿ ನಡೆದಿದೆ.

ಸಾಲಿಗ್ರಾಮ ತಾಲೂಕಿನ ಹೊಸೂರು ಗ್ರಾಮದ ಎಸ್‌ಬಿಐ ಮುಂಭಾಗ ಇರುವ ನಂಜುಂಡೇಶ್ವರ ಟ್ರೇಡರ್ಸ್ ಜನರಲ್ ಸ್ಟೋರ್‌ನಲ್ಲಿ ಈ ಘಟನೆ ನಡೆದಿದ್ದು ತಡರಾತ್ರಿ ಎರಡು ಗಂಟೆ ಸಮಯದಲ್ಲಿ ರೋಲಿಂಗ್ ಶಟರನ್ನು ಸಲಾಕೆಯಿಂದ ಮುರಿದು ಒಳ ನುಗ್ಗಿರುವ ಕಳ್ಳರು ಅಂಗಡಿಯಲ್ಲಿರುವ ಲಾಕರ್ ತೆಗೆದು ಹಣ ಮತ್ತು ಸಿಗರೇಟ್ ಪ್ಯಾಕ್‌ಗಳನ್ನು ತೆಗೆದುಕೊಂಡಿದ್ದು, ನಂತರ ಒಂದು ಚೀಲ ಅಕ್ಕಿಯನ್ನು ತೆಗೆದುಕೊಂಡು ಹೋಗಿದ್ದಾನೆ. ಮತ್ತೊಬ್ಬ ಹೊರಗೆ ನಿಂತು ಅಂಗಡಿಯಿಂದ ಕೊಟ್ಟಂತಹ ಸಾಮಾನುಗಳನ್ನು ಒಟ್ಟಿಗೆ ಜೋಡಿಸಿಕೊಂಡು ಪರಾರಿಯಾಗಿದ್ದಾರೆ.

ಕಳ್ಳತನದ ದೃಶ್ಯ ಅಂಗಡಿಯಲ್ಲಿರುವ ಸಿಸಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದು, ಇಬ್ಬರು ಮಂಕಿ ಕ್ಯಾಪ್ ಜೊತೆಗೆ ಟವಲ್ ಅನ್ನು ಮುಖದ ತುಂಬಾ ಸುತ್ತಿಕೊಂಡು ಕಳ್ಳತನ ನಡೆಸಿದ್ದಾರೆ. ಈ ಬಗ್ಗೆ ಅಂಗಡಿ ಮಾಲೀಕ ಚೇತನ್ ಸಾಲಿಗ್ರಾಮ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದು ಚುಂಚನಕಟ್ಟೆ ಪೊಲೀಸ್ ಠಾಣೆಯ ಪೇದೆ ಬಸವರಾಜು, ಮಧುಕುಮಾರ್ ಅವರುಗಳು ಸ್ಥಳ ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಇದಕ್ಕೂ ಮುಂಚೆ ಹೊಸೂರು ಗ್ರಾಮದ ಆರಂಭದಲ್ಲೇ ಇರುವ ನರ್ಸರಿ ಬಳಿಯ ಅಂಗಡಿಯ ಬೀಗ ಮುರಿದು ಅಲ್ಲಿಯೂ ಸಿಗರೇಟ್ ಪ್ಯಾಕ್ ಹಾಗೂ ಹಣವನ್ನು ಕಳ್ಳತನ ಮಾಡಿದ್ದು ಅಂಗಡಿ ಮಾಲೀಕ ಜಲೇಂದ್ರ ಅವರು ಕೂಡ ಈ ಬಗ್ಗೆ ಠಾಣೆಗೆ ದೂರು ನೀಡಿದ್ದಾರೆ.

ಅಧಿಕಾರದಲ್ಲಿದ್ದಾಗ ನೆನಪಿನಲ್ಲಿ ಉಳಿಯುವ ಕೆಲಸ ಮಾಡಿ



ಶಂಕರೇಗೌಡ, ವಿನಯ್ ದೊಡ್ಡಕೊಪ್ಪಲ್ ಅವರನ್ನು ಸನ್ಮಾನಿಸುತ್ತಿರುವುದು.

ಕೆ.ಆರ್.ನಗರ: ಅಧಿಕಾರ ಶಾಶ್ವತವಲ್ಲ, ತಮ್ಮ ಅವಧಿಯಲ್ಲಿ ಶಾಶ್ವತವಾಗಿ ನೆನಪಿನಲ್ಲಿಡುವಂತ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಅಧಿಕಾರ ನೀಡಿದವರ ಋಣವನ್ನು ತೀರಿಸಿ ಎಂದು ವಸ್ತು ಪ್ರದರ್ಶನದ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಸಲಹೆ ನೀಡಿದರು.

ಕೆ.ಆರ್.ನಗರ ಪಟ್ಟಣದ ಒಕ್ಕಲಿಗ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಒಕ್ಕಲಿಗ ನೌಕರರ ಸ್ನೇಹ ಬಳಗದ ಅಧ್ಯಕ್ಷ ಶಂಕರೇಗೌಡ ಮತ್ತು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿನಯ್ ದೊಡ್ಡಕೊಪ್ಪಲು ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ಜವಾಬ್ದಾರಿ ಹೆಚ್ಚಿದೆ. ಸಮಾಜ ಮೆಚ್ಚುವಂತ ಕೆಲಸವನ್ನು ಮಾಡುವಂತೆ ತಿಳಿ ಹೇಳಿದರು.

ಅಧಿಕಾರ ಇರಲಿ ಇಲ್ಲದಿರಲಿ ಸಮಾಜದ ಬಂಧುಗಳು ಕಷ್ಟದಲ್ಲಿದ್ದಾಗ ಅವರ ನೆರವಿಗೆ ಧಾವಿಸಿ ಸಹಾಯ ನೀಡುವ ಜೊತೆಗೆ ಸಲಹೆ ಸೂಚನೆಗಳನ್ನು ನೀಡುತ್ತಿರುವುದು ಹಾಗೂ ಅಧ್ಯಕ್ಷರಾಗಿರುವ ನೀವು ಎಲ್ಲರನ್ನೂ ಜೊತೆಯಾಗಿ ಕರೆದುಕೊಂಡು ಹೋಗುವ ಗುರುತರವಾದ ಜವಾಬ್ದಾರಿ ನಿಮ್ಮ ಮೇಲಿದ್ದು ಅದನ್ನು ಯಶಸ್ವಿಯಾಗಿ ನಿರ್ವಹಿಸುವಂತೆ ಸಲಹೆ ನೀಡಿದರು.

ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಸಿ.ಜೆ. ಅರುಣ್ ಕುಮಾರ್ ಒಕ್ಕಲಿಗ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉಪಾಧ್ಯಕ್ಷ ವಡ್ಡರ ಕೊಪ್ಪಲು ಶಿವರಾಮು, ವಕೀಲ ಅಂಕನಹಳ್ಳಿ ತಿಮ್ಮಪ್ಪ, ಉಪನ್ಯಾಸಕ ಮಿರ್ಲೆ ಧನಂಜಯ ಮಾತನಾಡಿದರು. ರಾಧಾಕೃಷ್ಣ, ಪ್ರಕಾಶ್, ಸುಧೀರ್ ಇನ್ನಿತರರಿದ್ದರು.

ಗಾಂಜಾ ಮಾರಾಟ: ಇಬ್ಬರ ಬಂಧನ

ಬೈಲಕುಪ್ಪೆ: ಇಲ್ಲಿನ ಭಾರತ್ ಮಾತಾ ಶಾಲೆಯ ಮುಂಭಾಗ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಬೈಲಕುಪ್ಪೆ ಪೊಲೀಸರು ಬಂಧಿಸಿದ್ದಾರೆ.

ಖಚಿತ ಮಾಹಿತಿಯ ಮೇರೆಗೆ ಬೈಲುಕುಪ್ಪೆ ಪಿಎಸ್‌ಐ ಅಜಯ್ ಕುಮಾರ್ ಅವರ ನೇತೃತ್ವದಲ್ಲಿ ಭಾರತ್ ಮಾತಾ ಶಾಲೆಯ ಮುಂಭಾಗ ಅವತ್ತಿ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿ ಬೈಲುಕುಪ್ಪೆ ಗ್ರಾಮದ ಜಾವಿದ್, ಮಡಿಕೇರಿ ನಗರದ ಹರೀಶ್ ಎಂಬುವನು ಹೋಂಡಾ ಬೈಕಿನಲ್ಲಿ ಸುಮಾರು ಒಂದು ಕೆಜಿ 150 ಗ್ರಾಂ ನಷ್ಟು ಒಣ ಗಾಂಜಾವನ್ನು ಬೈಕಿನಲ್ಲಿಟ್ಟುಕೊಂಡು ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಮಾಲು ಸಮೇತ ಇಬ್ಬರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಮಹದೇವಪ್ಪ, ಮುದ್ದುರಾಜ್, ಕುಮಾರಸ್ವಾಮಿ, ವೀರೇಂದ್ರ, ಸುರೇಶ್, ರಾಕೇಶ್, ಸಿದ್ದೇಗೌಡ, ಚಾಲಕ ಪ್ರದೀಪ್ ಇದ್ದರು.

ಗಿರೀಶ್ ನಿಧನ



ಸಾಲಿಗ್ರಾಮ, ಜ.18– ತಾಲೂಕಿನ ಹೊಸೂರು ಗ್ರಾಮದ ಜೆಡಿಎಸ್ ಯುವ ಮುಖಂಡ ಗಿರೀಶ್(48) ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಅವರ ಜಮೀನಿನಲ್ಲಿ ಇಂದು ಮಧ್ಯಾಹ್ನ ಜರುಗಿತು. ಮಾಜಿ ಶಾಸಕ ಸಾ.ರಾ. ಮಹೇಶ್, ಜೆಡಿಎಸ್ ಮುಖಂಡ ಎಸ್.ಟಿ.ಕೀರ್ತಿ, ಡೈರಿ ಅಧ್ಯಕ್ಷ ಕೃಷ್ಣಮೂರ್ತಿ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.

ಅರ್ಥಪೂರ್ಣ ಗಣರಾಜ್ಯೋತ್ಸವ ಆಚರಣೆಗೆ ನಿರ್ಧಾರ

ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ನೇತೃತ್ವದಲ್ಲಿ ಚರ್ಚೆ



ಗಣರಾಜ್ಯೋತ್ಸವ ಆಚರಣೆ ಪ್ರಯುಕ್ತ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ರುಕಿಯಾಬೇಗಂ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

ಸರಗೂರು, ಜ.18– ಅರ್ಥಪೂರ್ಣವಾಗಿ ಗಣರಾಜ್ಯೋತ್ಸವ ಆಚರಣೆಗೆ ನಾಗರಿಕರು, ಸರ್ಕಾರೇತರ ಸಂಸ್ಥೆಗಳು ಬೆಂಬಲ ನೀಡುವಂತೆ ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ರುಕಿಯಾಬೇಗಂ ಮನವಿ ಮಾಡಿದ್ದಾರೆ.

ಜ.26 ರಂದು ನಡೆಯುವ ಗಣರಾಜ್ಯೋತ್ಸವ, ಸಂವಿಧಾನ ಜಾಗೃತಿ ಜಾಥಾ ಸಿದ್ಧತೆಗೆ ತಾಲೂಕು ಕಚೇರಿಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಸರ್ಕಾರದ ಆದೇಶದ ಅನುಸಾರ ಸಂವಿಧಾನ ದಿನಾಚರಣೆ ಪ್ರಯುಕ್ತ ಸಂವಿಧಾನ ಜಾಗೃತಿ ಜಾಥಾ ಹಾಗೂ ಕಾರ್ಯಕ್ರಮಗಳ ಬಗ್ಗೆ ಅಗತ್ಯ ಸಿದ್ದತೆಗಳನ್ನು ಸಮರ್ಪಕವಾಗಿ ಹಾಗೂ ಅರ್ಥಪೂರ್ಣವಾಗಿ ಕೈಗೊಳ್ಳಬೇಕು ಎಂದರು.

ಧ್ವಜಾರೋಹಣ, ಸ್ತಬ್ಧ ಚಿತ್ರಗಳ ಮೆರವಣಿಗೆಯ ಮಾರ್ಗಗಳು ಹಾಗೂ ಸಂವಿಧಾನ ಪೀಠಿಕೆ, ನ್ಯಾಯ, ಸಾಮಾಜಿಕ, ಅಂಬೇಡ್ಕರ್ ಅವರ ಪರಿಕಲ್ಪನೆ, ಗ್ರಾಮೀಣ ಭಾಗದ ಸ್ಥಳಿಯ ಕಲೆ, ಸಂಸ್ಕೃತಿ, ಇನ್ನಿತರ ಮಹತ್ತರ ವಿಷಯಗಳು, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ನೃತ್ಯ, ದೇಶಭಕ್ತಿ ಗೀತೆ, ನಾಡಗೀತೆ, ಹಾಗೂ ಸಮಾಜಮುಖಿಯಾಗಿ ಉತ್ತಮ ಸೇವೆ ಸಲ್ಲಿಸಿದ ಗಣ್ಯರು, ಯೋಧರಿಗೆ ಸನ್ಮಾನ, ಇನ್ನಿತರ ವೈಶಿಷ್ಟ್ಯ ಕಾರ್ಯಕ್ರಮ ಸಿದ್ಧತೆ ನಂತರ ತಾಲೂಕಿನ ಶಾಸಕರಾದ ಅನಿಲ್ ಚಿಕ್ಕಮಾದುರವರ ಅಧ್ಯಕ್ಷತೆಯಲ್ಲಿ ಅರ್ಥಪೂರ್ಣ ಗಣರಾಜ್ಯೋತ್ಸವ ಆಚರಣೆ ಮಾಡಲು ಪ್ರತಿಯೊಬ್ಬರ ಸಲಹೆ ಸೂಚನೆ ಅತ್ಯಗತ್ಯ ಎಂದು ತಿಳಿಸಿದರು.

ಸಭೆಯಲ್ಲಿ ಪಟ್ಟಣದ ಜಯ ಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮ ಮಾಡಲು ತೀರ್ಮಾನಿಸಲಾಯಿತು. ಆಗಮಿಸಿದ್ದ ಅನೇಕರು ತಮ್ಮ ಅಭಿಪ್ರಾಯ ತಿಳಿಸಿ ಗಣರಾಜ್ಯೋತ್ಸವ ಅಚ್ಚುಕಟ್ಟಾಗಿ ನಡೆಯಲು ಸಹಕಾರ ನೀಡುವುದಾಗಿ ತಿಳಿಸಿದರು.

ಸಭೆಯಲ್ಲಿ ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಸದಸ್ಯರಾದ ಶ್ರೀನಿವಾಸ್, ವೀರೇಶ್, ನೂರಾಳಸ್ವಾಮಿ, ಚಲುವಕೃಷ್ಣ, ಮುಖಂಡರಾದ ಭೀಮರಾಜ್, ಎಸ್.ನಾರಾಯಣ್, ದೇವೇಂದ್ರಯ್ಯ, ಎನ್.ಎಸ್.ಪ್ರತಾಪ್, ರಾಮುಸ್ವಾಮಿ, ಮಟ್ಟಹನುಮಯ್ಯ, ಸುಭಾನ್, ರಸ್ತೆಬದಿ ವ್ಯಾಪಾರಿ ಸಂಘದ ಅಧ್ಯಕ್ಷ ಕೃಷ್ಣ, ಪಿ.ಎಸ್.ಐ.ನಂದೀಶ್‌ಕುಮಾರ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ್, ಎ.ಇ.ಇ. ಉಷಾ, ಎ.ಪಿ.ಎಂ.ಸಿ. ಕಾರ್ಯದರ್ಶಿ ವಸಂತಕುಮಾರ್, ಶಿರೇಸ್ತೆದಾರ್ ಪರಶಿವಮೂರ್ತಿ, ಉಪತಹಸೀಲ್ದಾರ್ ಸುನಿಲ್, ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ವೈ.ಡಿ.ರಾಜಣ್ಣ, ತಾಲೂಕು ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಸರಗೂರು ಹೋರಾಟ ಸಮಿತಿ ಸಂಚಾಲಕ ಸರಗೂರು ಕೃಷ್ಣ, ತಾಪಂ ಅಧಿಕಾರಿ ಮಹದೇವಸ್ವಾಮಿ, ಕಂದಾಯಲಾಖೆ ಗುರುರಾಜ್, ವಿವಿಧ ಇಲಾಖೆ ಸರ್ಕಾರಿ ಅಧಿಕಾರಿಗಳು ಹಾಗೂ ಎಲ್ಲಾ ಸಮುದಾಯದ ಪ್ರಮುಖರು, ವಿವಿಧ ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು–ಚೆನ್ನೈ ಬುಲೆಟ್ ಟ್ರೈನ್ ಯೋಜನೆಯ ಡಿಪಿಆರ್ ಸಲ್ಲಿಸಲು ರಾಷ್ಟ್ರೀಯ ಹೈಸ್ಪೀಡ್ ರೈಲ್ವೆ ಕಾರ್ಪೋರೇಷನ್ ತಯಾರಿ

ಮೈಸೂರು, ಜ.18(ಬಿಎಲ್‌ಯು)– ಬಹು ನಿರೀಕ್ಷಿತ ಮೈಸೂರು ಮತ್ತು ಚೆನ್ನೈ ನಡುವಿನ ಬುಲೆಟ್ ಟ್ರೈನ್ ಯೋಜನೆಯ ಡಿಪಿಆರ್ (ಸಮಗ್ರ ಯೋಜನಾ ವರದಿ)ಅನ್ನು ರಾಷ್ಟ್ರೀಯ ಹೈಸ್ಪೀಡ್ ರೈಲ್ವೆ ಕಾರ್ಪೋರೇಷನ್ ಶೀಘ್ರದಲ್ಲೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಿದೆ ಎನ್ನಲಾಗಿದೆ.

ಮೈಸೂರು, ಚೆನ್ನೈ ನಡುವಿನ ಬುಲೆಟ್ ಟ್ರೈನ್ ಯೋಜನೆಯ ಸರ್ವೆ, ಯುಟಿಲಿಟೀಸ್ ಸೌಕರ್ಯ ಗುರುತಿಸುವಿಕೆ, ಜನರಲ್ ಅಲೈನ್ ಮೆಂಟ್ ಡ್ರಾಯಿಂಗ್‌ಗಳು ಸೇರಿದಂತೆ ಇತರೆ ಕಾರ್ಯಗಳು ಚುರುಕಿನಿಂದ ನಡೆಯುತ್ತಿದೆ. ಈ ಮೂಲಕ ಯೋಜನೆಯ ಪ್ರಾಥಮಿಕ ಹಂತದ ಕಾರ್ಯಕ್ಕೆ ಚಾಲನೆ ದೊರೆತಿದೆ. ಸರ್ವೆ ಪೂರ್ಣಗೊಂಡ ನಂತರ ಬುಲೆಟ್ ಟ್ರೈನ್ ಹಾದು ಹೋಗುವ ರೈಲ್ವೆ ಹಳಿಯ ಜಾಗದ ಭೂ ಮಾಲೀಕರನ್ನು ಸಂಪರ್ಕಿಸಲಾಗುತ್ತದೆ. ನಂತರ ಭೂಮಿ ಖರೀದಿಗೆ ಪರಿಹಾರದ ಹಣ ನಿಗದಿ ಮಾಡಿ, ಭೂ ಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗುತ್ತದೆ. ಈ ಎಲ್ಲಾ ಪ್ರಕ್ರಿಯೆಗಳನ್ನು ವೇಗಗತಿಯಲ್ಲಿ ಪೂರ್ಣಗೊಳಿಸಿ ಶೀಘ್ರವೇ ಡಿಪಿಆರ್ ಸಲ್ಲಿಸಲು ರಾಷ್ಟ್ರೀಯ ಹೈಸ್ಪೀಡ್ ರೈಲ್ವೆ ಕಾರ್ಪೋರೇಷನ್ ತಯಾರಿ ಮಾಡಿಕೊಂಡಿದೆ ಎಂದು ತಿಳಿದು ಬಂದಿದೆ.


(ಸಂಗ್ರಹ ಚಿತ್ರ)

ಉನ್ನತ ತಂತ್ರಜ್ಞಾನ ಕ್ಷೇತ್ರದಲ್ಲಿ ಶರವೇಗದಲ್ಲಿ ಬೆಳೆಯುತ್ತಿರುವ ಸಿಲಿಕಾನ್ ಸಿಟಿ ಬೆಂಗಳೂರು, ಆಟೋಮೊಬೈಲ್ ಹಬ್ ಆಗುತ್ತಿರುವ ಚೆನ್ನೈ ಹಾಗೂ ವಿಶ್ವದ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವ ಸಾಂಸ್ಕೃತಿಕ ನಗರಿ ಮೈಸೂರು ನಗರವನ್ನು ಬೆಸೆಯಲು ಕೇಂದ್ರ ಸರ್ಕಾರ ಬುಲೆಟ್ ಟ್ರೈನ್ ಸಂಪರ್ಕ ಯೋಜನೆ ರೂಪಿಸಿದೆ.

ಚೆನ್ನೈ, ಪೂನಮಲ್ಲೆ, ಅರಕ್ಕೋಣಂ (ತಮಿಳು ನಾಡು), ಚಿತ್ತೂರು(ಆಂಧ್ರಪ್ರದೇಶ), ಕರ್ನಾಟಕದ ಬಂಗಾರಪೇಟೆ, ಬೆಂಗಳೂರು, ಚನ್ನಪಟ್ಟಣ, ಮಂಡ್ಯ ಹಾಗೂ ಮೈಸೂರು ನಡುವೆ 9 ನಿಲ್ದಾಣಗಳಿರುತ್ತದೆ. ಮೈಸೂರು ಬೆಂಗಳೂರು ನಡುವೆ 435 ಕಿಲೋ ಮೀಟರ್ ಅಂತರವಿದ್ದು, ಈಗ ಸಂಚರಿಸುತ್ತಿರುವ ರೈಲಿನಲ್ಲಿ ಪ್ರಯಾಣಿಸಲು ಕನಿಷ್ಟ 6 ಗಂಟೆ 30 ನಿಮಿಷ ಬೇಕು. ಆದರೆ ಬುಲೆಟ್ ಟ್ರೈನ್ ಈ ಮಾರ್ಗದಲ್ಲಿ ಸಂಚರಿಸಿದರೆ ಕೇವಲ 2 ಗಂಟೆ 25 ನಿಮಿಷದಲ್ಲಿ ಮೈಸೂರಿನಿಂದ ಚೆನ್ನೈಗೆ ಪ್ರಯಾಣ ಮಾಡಬಹುದು.

ಅತ್ಯಂತ ಕಡಿಮೆ ಅವಧಿಯಲ್ಲಿ ಮೈಸೂರಿನಿಂದ ಚೆನ್ನೈಗೆ ಪ್ರಯಾಣ ಮಾಡುವ ಅವಕಾಶ ದೊರೆತರೆ, ಮೈಸೂರು, ಚೆನ್ನೈ ಹಾಗೂ ಬೆಂಗಳೂರು ನಗರಗಳ ಬೆಳವಣಿಗೆಗೆ ಮತ್ತಷ್ಟು ವೇಗ ಪಡೆಯಲಿದೆ.



36 ಶಾಸಕರು, 39 ಕಾರ್ಯಕರ್ತರಿಗೆ ನಿಗಮ ಮಂಡಳಿ ಸ್ಥಾನ, ಯಾವುದೇ ಕ್ಷಣದಲ್ಲಿ ಪಟ್ಟಿ ಬಿಡುಗಡೆ: ಡಿಕೆಶಿ



ಬೆಂಗಳೂರು: 36 ಶಾಸಕರು ಹಾಗೂ 39 ಕಾರ್ಯಕರ್ತರಿಗೆ ನಿಗಮ ಮಂಡಳಿಯಲ್ಲಿ ಸ್ಥಾನ ನೀಡಲಾಗುವುದು. ಯಾವುದೇ ಕ್ಷಣದಲ್ಲಿ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಗುರುವಾರ ಮಾತನಾಡಿದ ಅವರು, ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ವಿಳಂಬ ವಿಚಾರವಾಗಿ ಪ್ರತಿಕ್ರಿಯೆ ನೀಡಿ, ಯಾವುದೇ ಸೆಕೆಂಡ್‌ನಲ್ಲಿ ನಿಗಮ ಮಂಡಳಿ ಲಿಸ್ಟ್ ಅನೌನ್ಸ್ ಆಗುತ್ತೆ. 36 ಶಾಸಕರು ಹಾಗೂ 39 ಕಾರ್ಯಕರ್ತರಿಗೆ ಅವಕಾಶ ಕೊಡುತ್ತೇವೆ ಎಂದರು.

ಲೋಕಸಭೆ ಚುನಾವಣೆಗೆ ಸಚಿವರು ಸ್ಪರ್ಧೆಗೆ ನಿರಾಕರಣೆ ವಿಚಾರಕ್ಕೆ ಪಕ್ಷ ಹೇಳಿದಂತೆ ಎಲ್ಲರೂ ಕೇಳಬೇಕು. ನಾನು ಕೇಳಬೇಕು,ಅವರು ಕೇಳಬೇಕು ಎಂದರು.

ಶುಕ್ರವಾರ ಕಾಂಗ್ರೆಸ್ ಮೀಟಿಂಗ್ ವಿಚಾರಕ್ಕೆ, ಕಾಂಗ್ರೆಸ್ ಸಭೆ ಭಾರತ್ ಜೋಡೋ ಭವನದಲ್ಲಿ ಇದೆ. ಪ್ರಧಾನಿ ಮೋದಿ ರಾಜ್ಯಕ್ಕೆ ಬರ್ತಾ ಇದ್ದಾರೆ. ಈ ಕಾರಣಕ್ಕಾಗಿ ಸಿಎಂ ಕೂಡ ಅಲ್ಲಿ ಇರಬೇಕಾಗುತ್ತೆ. ಹೀಗಾಗಿ ನಾಳೆ ಸಂಜೆ ಸಭೆ ನಡೆಯಲಿದೆ ಎಂದು ತಿಳಿಸಿದರು. ಲೋಕಸಭಾ ಚುನಾವಣೆ ಬಗ್ಗೆ ಮೊದಲ ಸಭೆ ಇದಾಗಿದೆ. ಈಗಾಗಲೇ ವೀಕ್ಷಕರು ಲಿಸ್ಟ್ ಕೊಟ್ಟಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡುತ್ತೇವೆ ಎಂದರು.

ಜ.25, ಪೂರ್ವಭಾವಿ ಸಭೆ

ಮಂಡ್ಯ, ಜ.18– ಶ್ರೀರಂಗಪಟ್ಟಣ ಪುರಸಭೆಯಲ್ಲಿ 2024–25ನೇ ಸಾಲಿನ ಆಯವ್ಯಯ ಮಂಡಿಸುವ ಸಲುವಾಗಿ ಎಲ್ಲಾ ಜನಪ್ರತಿನಿಧಿಗಳು, ಹಿರಿಯ ನಾಗರಿಕರು, ಸಾರ್ವಜನಿಕರು, ಜನಪ್ರತಿನಿಧಿಗಳು ಹಾಗೂ ವಿವಿಧ ಸಂಘ ಸಂಸ್ಥೆ ಅಧ್ಯಕ್ಷರು/ಉಪಾಧ್ಯಕ್ಷರು/ಪದಾಧಿಕಾರಿಗಳಿಂದ ಸಲಹೆ ಸೂಚನೆ ಪಡೆಯಲು ಜ.25 ರಂದು ಬೆಳಗ್ಗೆ 11 ಗಂಟೆಗೆ ಶ್ರೀರಂಗಪಟ್ಟಣ ಪುರಸಭೆ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ. ಶ್ರೀರಂಗಪಟ್ಟಣ ಪುರಸಭೆ ವ್ಯಾಪ್ತಿಯ ನಾಗರಿಕರು ಪೂರ್ವಭಾವಿ ಸಭೆಗೆ ಆಗಮಿಸಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ತಿಳಿಸುವಂತೆ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೊನ್ನಂಪೇಟೆ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ

ರಾಜ್ಯ ಸಚಿವ ಸಂಪುಟ ತೀರ್ಮಾನ

ಬೆಂಗಳೂರು, ಜ.18–ಕೊಡಗಿನ ಪೊನ್ನಂಪೇಟೆ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಗಾಗಿ ಮೇಲ್ದರ್ಜೆಗೇರಿಸಲು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ಜಲ ಜೀವನ್ ಮಿಷನ್ ಯೋಜನೆಯಡಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ, ಹಂಪಾಪುರ ಮತ್ತು ವಿವಿಧ ಜನವಸತಿ ಪ್ರದೇಶಗಳಿಗೆ ಹಾಗೂ ತಿ.ನರಸೀಪುರ ತಾಲೂಕಿನ ದೊಡ್ಡಬಾಗಿಲು, ಹಾವೇರಿ ತಾಲೂಕಿನ ನೆಗಳೂರು, ಹಾನಗಲ್ ತಾಲೂಕಿನ ಕುಡ್ಲ ಮತ್ತಿತರ ವಸತಿ ಪ್ರದೇಶಗಳಿಗೆ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಪುನಶ್ಚೇತನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ಷೇರು ಬಂಡವಾಳವನ್ನು 600 ಕೋಟಿ ರೂ.ಗಳಿಂದ 1200 ಕೋಟಿ ರೂ.ಗಳಿಗೆ ಹೆಚ್ಚಿಸಲು ಸಂಪುಟ ಅನುಮೋದನೆ ನೀಡಿದೆ.

ವಿಕಸಿತ ಭಾರತ ಪರಿಕಲ್ಪನೆಯಲ್ಲಿ ಮಹಿಳೆಯರ ಪಾತ್ರವಿರಬೇಕೆಂಬ ಮೋದಿ ಆಶಯಕ್ಕೆ ಸ್ಪಂದಿಸಿ


ಆದಿಚುಂಚನಗಿರಿಯಲ್ಲಿ ನಡೆದ ಮಾತೃ ಸಂಗಮ ಕಾರ್ಯಕ್ರಮವನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಿದರು.

ಮಂಡ್ಯ, ಜ.18– ರೈತ ದೇಶದ ಬೆನ್ನೆಲುಬಾದರೆ ಅವನ ಮೂಲ ದೇವರು ಭೂಮಿ ತಾಯಿ ಹಾಗೂ ಕೃಷಿ ಕಾಯಕ. ಶಿಕ್ಷಣ, ಆರೋಗ್ಯ, ಸಂಸ್ಕಾರ ಬಿತ್ತುವ ಈ ಕ್ಷೇತ್ರಕ್ಕೆ ನೀಡಿದ ಭೇಟಿ ತವರು ಮನೆಗೆ ಬಂದಷ್ಟೇ ಆನಂದ ನೀಡಿದೆ. 2047ರ ಹೊತ್ತಿಗೆ ವಿಕಸಿತ ಭಾರತ ಪರಿಕಲ್ಪನೆಯಲ್ಲಿ ಮಹಿಳೆಯರ ಪಾತ್ರವೂ ದೊಡ್ಡದಿರಬೇಕು ಎಂಬುದು ಪ್ರಧಾನಿಯವರ ಆಶಯವಾಗಿದೆ. ಈ ನಿಟ್ಟಿನಲ್ಲಿ ತಾಯಂದಿರಾದ ತಾವೆಲ್ಲಾ ಭಾರತದ ಅಭಿವೃದ್ಧಿಗೆ ಸಹಕರಿಸಿ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಕರೆ ನೀಡಿದರು.

ನಾಗಮಂಗಲ ತಾಲೂಕಿನ ಬಿಜಿಎಸ್ ಸಭಾಂಗಣದಲ್ಲಿ ನಡೆದ ಭೈರವೈಕ್ಯ ಜಗದ್ಗುರು ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ 79ನೇ ಜಯಂತ್ಯುತ್ಸವ ಮತ್ತು 11ನೇ ವರ್ಷದ ಸಂಸ್ಮರಣಾ ಮಹೋತ್ಸವದ ಅಂಗವಾಗಿ ನಡೆದ ಮಾತೃ ಸಂಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಕೃಷಿ ಸಚಿವಾಲಯದಿಂದ ಆಹಾರ ಸಂಸ್ಕರಣ ಘಟಕ ಕಾರ್ಯ ನಿರ್ವಹಿಸುತ್ತಿದ್ದು, ಮಹಿಳೆಯರನ್ನು ಈ ಉಪಯುಕ್ತ ಕಾರ್ಯದಲ್ಲಿ ತೊಡಗಿಸಲು ಸದಾ ನಿಮ್ಮೊಂದಿಗೆ ಇರುತ್ತೇನೆ ಎಂದು ಪ್ರೋತ್ಸಾಹಕ ನುಡಿಗಳನ್ನಾಡಿದರು. ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಮಾತನಾಡಿ, ಯಾವ ದೇಶ ಕೃಷಿಯಲ್ಲಿ ಅಭಿವೃದ್ಧಿ ಹೊಂದಿದೆಯೋ ಅದು ಸಂಪತ್ಭರಿತ ರಾಷ್ಟ್ರವಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುತ್ತಿರುವ ಶ್ರೀಮಠವು ದೇಶದ ಸಮಗ್ರತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು. ವಿಧಾನ ಪರಿಷತ್ ಸದಸ್ಯೆ ಡಾ.ತೇಜಸ್ವಿನಿಗೌಡ ಮಾತನಾಡಿ, ಮಹಿಳಾ ಬಳಗವು ಮಮತೆ ವಾತ್ಸಲ್ಯದ ಪರಂಪರೆಗೆ ಸಾಕ್ಷಿ. ಸಂತ–ಭಕ್ತರ ಕೈಲಾಸವಾದ ಆದಿಚುಂಚನಗಿರಿ ಎಂಬ ಸ್ವರ್ಗದಂತಹ ಶ್ರೀಮಠವು ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರಿಂದ ಆರಂಭವಾಗಿ ಆಧ್ಯಾತ್ಮಿಕ ಮೌಲ್ಯದೊಂದಿಗೆ ಶೈಕ್ಷಣಿಕ ಸಾಧನೆಯ ಸೇವೆ ಮಾಡುತ್ತಿದೆ. ಸಾಧಕರನ್ನು ಗೌರವಿಸುವುದು ಬೇರೆ. ಆದರೆ ಸಾಧನೆ ಮಾಡುವಂತೆ ಪ್ರೇರೇಪಿಸಿ ಗೌರವಿಸುವುದು ಇಲ್ಲಿನ ವಿಶೇಷ. ಇಂತಹ ಗೌರವಕ್ಕೆ ಪಾತ್ರವಾಗಿ ಮಾತೃ ಸಂಗಮದಲ್ಲಿ ಭಾಗಿಯಾಗಿರುವ ನಾವೆಲ್ಲ ಪುಣ್ಯ ಭಾಜನರೇ ಸರಿ ಎಂದು ಬಾವುಕ ನುಡಿಗಳನ್ನಾಡಿದರು.

> **"ಒಂದು ದೇಶ ಎದ್ದು ನಿಲ್ಲಲು, ಒಂದು ಮನೆ ಬೆಳಗಲು ಮಕ್ಕಳ ಏಳಿಗೆಗೂ ತಾಯಿಯೇ ಕಾರಣ. ಮಕ್ಕಳ ಬಾಲ್ಯವನ್ನು ಸಂಭ್ರಮಿಸುವ ತಾಯಿ, ಪ್ರತಿ ಘಳಿಗೆಯಲ್ಲೂ ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಿ, ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹಿಸಿ ಜೀವನ ಮೌಲ್ಯ ಬೋಧಿಸುವ ಗುರುವಾಗುತ್ತಾಳೆ. ವೇಗವಾದ ಆಧುನಿಕ ಜಗತ್ತಿನಲ್ಲಿ ದೂರವಾಗುತ್ತಿರುವ ಮನಸ್ಸುಗಳು ಒಂದಾಗಿ, ಸಂಬಂಧಗಳು ಹತ್ತಿರವಾಗಿ ಸಾಂಘಿಕ ಜೀವನ ಸಂಗಮಿಸಲಿ.**
> –ಸಿ.ಟಿ.ರವಿ, ಮಾಜಿ ಸಚಿವ

ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಮಠದ ಪೀಠಾಧಿಪತಿ ಶ್ರೀನಿರ್ಮಲಾನಂದ ಶ್ರೀಗಳು, ಆಧುನಿಕ ವ್ಯವಸ್ಥೆಯಲ್ಲಿ ಮಾನವೀಯ ಮೌಲ್ಯ ಮತ್ತು ಮೂಲ ತತ್ವಗಳ ತತ್ವಾರವಾಗಿಸದೆ ಒಳಗಣ್ಣನ್ನು ತೆರೆದು, ಬೆಳಕಿನಲ್ಲಿ ಬದುಕಿ ಬೆಳೆಯುವುದು ಎಲ್ಲರ ಹೊಣೆಯಾಗಿದೆ. ಸ್ವರ್ಣ ಜಿಂಕೆಯ ವ್ಯಾಮೋಹಕ್ಕೆ ಸಿಲುಕಿದ ಸೀತಾ ಮಾತೆ ಏನೆಲ್ಲಾ ಸಂಕಷ್ಟಗಳನ್ನು ಎದುರಿಸಬೇಕಾಯಿತು?. ಸಹಜ ಆಸೆಗಳನ್ನು ಪೂರೈಸಿಕೊಳ್ಳುವುದು ಧರ್ಮ ಎಂಬುದನ್ನು ರಾಮಾಯಣ ಹಾಗೂ ಮಹಾಭಾರತದ ಕುಂತಿ ರಾಜಮಾತೆಯಾದ ಉದಾಹರಣೆಗಳನ್ನು ನೀಡಿ ವಿವರಿಸಿದರು. ದೇಶದ ಸಂಸ್ಕೃತಿ–ಸಂಸ್ಕಾರಗಳನ್ನು ಬಿಂಬಿಸುವ ಆಚಾರಗಳನ್ನು ರೂಢಿಸಿಕೊಳ್ಳಿ. ಮಕ್ಕಳಿಗೂ ಆದರ್ಶ ಮಾರ್ಗದರ್ಶನ ನೀಡಿ ಶ್ರೇಷ್ಠ ಮಾತೆಯರಾಗಿ ಎಂದು ಹರಸಿದರು.

ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಜಸ್ಟೀಸ್ ವಿ.ಗೋಪಾಲಗೌಡ ಮಾತನಾಡಿ, ಮಹಿಳಾ ಮಣಿಗಳು ಈ ದೇಶದ ಅಪ್ರತಿಮ ಸಹಿಷ್ಣುಗಳು, ಶತಮಾನಗಳ ಹಿಂದೆ ಬಸವಣ್ಣ ಆದಿಯಾಗಿ ಅಂಬೇಡ್ಕರ್ ಬಯಸಿದ ಸಾಮಾಜಿಕ ನ್ಯಾಯದ ಜೊತೆಗೆ ಮಹಿಳಾ ಸಮಾನತೆಯು ಇನ್ನೂ ದೊರೆತಿಲ್ಲ ಎಂಬುದು ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ. ಮಹಿಳಾ ಶೋಷಣೆ ನಿಲ್ಲಬೇಕು ಎಂದ ಅವರು ಸ್ತ್ರೀಯರ ನಿತ್ಯ ಸವಾಲಿನ ಕಾಯಕ ವಾಗಿರುವ ಕುಟುಂಬ ನಿರ್ವಹಣೆಯ ಜೊತೆಗೆ ಮಕ್ಕಳಲ್ಲಿ ಸೌಜನ್ಯ ಸೌಹಾರ್ದದ ಮನೋಭಾವವನ್ನು ಬಿತ್ತಿ ದೇಶದ ಪ್ರಗತಿಗೆ ನಾಂದಿ ಹಾಡುವ ತಾಯಂದಿರೇ ಸಮಾಜದ ಮೇರು ವ್ಯಕ್ತಿಗಳು ಎಂದು ಬಣ್ಣಿಸಿದರು. ವೇದಿಕೆಯಲ್ಲಿ ಶಿಕ್ಷಣ ಟ್ರಸ್ಟ್ ಆಡಳಿತಾಧಿಕಾರಿ ಡಾ.ಎ.ಟಿ.ಶಿವರಾಮು, ಚುಂಚಾದ್ರಿ ಮಹಿಳಾ ಸಂಘದ ಅಧ್ಯಕ್ಷೆ ಭಾರತಿ ಶಂಕರ್, ನಿವೃತ್ತ ಜಿಲ್ಲಾ ನ್ಯಾಯಮೂರ್ತಿ ಡಾ.ಶಶಿಕಲಾ, ವಿವಿಧ ಮಹಿಳಾ ಸಂಘಗಳ ಪದಾಧಿಕಾರಿಗಳು ಹಾಗೂ ಇತರರಿದ್ದರು.